ಬಗ್ಗೆ ಕೊಟ್ಟಿರುವ ವರದಿಯನ್ನು ರಾಜ್ಯ ಸರ್ಕಾರದವರಿಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ಸಭೆಯ ಮುಂದೆ ಇಟ್ಟಿಲ್ಲ. ಅದು ಸರ್ಕಾರದವರಿಗೆ ಬಂದಿದೆಯೇ? ಬಂದಿದ್ದರೆ ಅದನ್ನು ಯಾವಾಗ ಸಭೆಯ ಮುಂದೆ ಇಡುತ್ತಾರೆ ಎಂಬ ಸಮಾಚಾರ ತಿಳಿಸಬೇಕು.

MOTION OF THANKS TO THE GOVERNOR'S ADDRESS

Debate Continued

†ಶ್ರೀ ಬಿ. ನಂಜಪ್ಪ (ಗಂಡಸಿ).—ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ನಿರ್ಣಯದ ಪರವಾಗಿ ನಾನು ಕೆಲವು ಮಾತುಗಳನ್ನು ಆಡುತ್ತೇನೆ. ನಾಲ್ಕನೆಯ ಯೋಜನೆಯ ವಿಚಾರವಾಗಿ ಮಾತನಾಡುತ್ತಾ ಮೂರನೆಯ ಯೋಜನೆಯೇ ಸಂಪೂರ್ಣವಾಗಿ ಕಾರ್ಯಗತವಾಗಿಲ್ಲ ಎಂದು ಕೆಲವರು ಮಾತನಾಡಿದರು. ಮೂರನೆಯ ಯೋಜನೆ ಸಂಪೂರ್ಣವಾಗಿ ಕಾರ್ಯಗತವಾಗಿಲ್ಲ ಎನ್ನುವುದಕ್ಕೆ ಅನೇಕ ಕಾರಣಗಳಿವೆ. ಆ ಕಾರಣಗಳು ಸಂಕ್ಷಿಪ್ತವಾಗಿ ರಾಜ್ಯಪಾಲರ ಭಾಷಣದಲ್ಲೇ ವರದಿಯಾಗಿದೆ. ಅದೂ ಅಲ್ಲದೇ ಮಾನ್ಯ ಸದಸ್ಯರಿಗೂ ಕೂಡ ಆ ವಿಚಾರ ಗೊತ್ತಿದೆ. ಅವರೂ ಕೂಡ ಜವಾಬ್ದಾರಿಯನ್ನು ಅರಿತಿದ್ದಾರೆ. ಅದು ಕಾರ್ಯಗತವಾಗಬೇಕಾದರೆ ಎಷ್ಟು ತೊಂದರೆಯಾಯಿತು, ದೇಶ ಎಂತಹ ಕಷ್ಟ ಸ್ಥಿತಿಯಲ್ಲಿತ್ತು ಎನ್ನುವ ವಿಚಾರವನ್ನೂ ಕೂಡ ಅವರು ತಿಳಿದಿದ್ದಾರೆ. ಎಷ್ಟೇ ಕಷ್ಟಗಳು ಇದ್ದಾಗ್ಯೂ ಕೂಡ, ಕಳೆದ ವರ್ಷ ಮಳೆ ಬಾರದೆ ತೊಂದರೆಯಾಗಿದ್ದರೂ ಕೂಡ ಆಹಾರದ ವಿಚಾರದಲ್ಲಿ ಸರ್ಕಾರದವರು ಸಾಕಾದಷ್ಟು ಮುಂಜಾಗ್ರತೆಯ ಕ್ರಮವನ್ನು ವಹಿಸಿ ಎಲ್ಲಾ ಕಡೆಯಲ್ಲೂ ಕೂಡ ಅಹಾರ ಸರಬರಾಯಿ ಆಗುವಂತೆ ಮಾಡಿದ್ದಾರೆ. ಕೆಲವರು ಅನೇಕ ಕಡೆಗಳಲ್ಲಿ ಆಹಾರದ ಅಭಾವ ಜಾಸ್ತಿಯಾಗಿ ಅನೇಕ ಪ್ರಾಣಹಾನಿ ಕೂಡ ಆಗಿದೆ ಎಂದು ಹೇಳಿದರು. ಆಹಾರ ಸಿಕ್ಕದೇ, ಆಹಾರ ಅಭಾವವಾಗಿ ಎಲ್ಲೂ ಕೂಡ ಯಾರಿಗೂ ಪ್ರಾಣ ಹಾನಿಯಾಗಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅದೂ ಅಲ್ಲದೇ ಅನೇಕ ಕಡೆಗಳಲ್ಲಿ ನೀರಾವರಿ ಬಾವಿಗಳು ಮತ್ತು ಪಂಪ್‌ಸೆಟ್ಟುಗಳನ್ನು ಒದಗಿಸಿ ಹೆಚ್ಚು ಆಹಾರವನ್ನು ನೀರಾವರಿ ಆಶ್ರಯವಿರುವ ಕಡೆ ಉತ್ಪನ್ನ ಮಾಡುವುದಕ್ಕೂ ಕೂಡ ಏರ್ಪಾಡು ಮಾಡಿ ಸಾಕಾದಷ್ಟು ಆಹಾರ ಉತ್ಪನ್ನವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆ.

ಇನ್ನು ವ್ಯವಸಾಯದ ವಿಚಾರ. ವ್ಯವಸಾಯ ಸಾಕಾದಷ್ಟು ಪ್ರಗತಿಪರವಾಗಿ ಆಗಿಲ್ಲ, ವ್ಯವಸಾಯದಲ್ಲಿ ಸಾಕಾದಷ್ಟು ಆಹಾರ ಉತ್ಪನ್ನವಾಗಿಲ್ಲ ಎಂದು ಕಟುವಾಗಿ ಅನೇಕ ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ.

ಹೆಚ್ಚು ಉತ್ಪಾದನೆಯ ಬಗ್ಗೆ ಸರ್ಕಾರದವರು ಬಹಳ ಸಾಧನೆ ಮಾಡಿದ್ದಾರೆ. ಬಿತ್ತನೆ ಬೀಜಗಳ ವಿಚಾರದಲ್ಲಿ ಹೊಸಹೊಸ ಯೋಜನೆಗಳನ್ನು ಜಾರಿಗೆ ತಂದು ದೇಶದಲ್ಲಿ ವಿಶೇಷವಾಗಿ ಹೈಬ್ರಿಡ್ ಜೋಳ ಮತ್ತು ಮೆಕ್ಕೆಜೋಳಗಳನ್ನು ಬೆಳೆಯುವದಕ್ಕೆ ಏರ್ಪಾಡುಗಳನ್ನು ಮಾಡಿದ್ದಾರೆ. ಅಷ್ಟೇ ಅಲ್ಲದೆ ಬೆಳೆಗಳಿಗೆ ಹಾಕತಕ್ಕ ರಾಸಾಯನಿಕ ಗೊಬ್ಬರ ಯಾವ ಯಾವ ಬೆಳೆಗಳಿಗೆ ಎಕರೆಗೆ ಎಷ್ಟೆಷ್ಟು ಹಾಕಬೇಕು ಎಂಬುದನ್ನು ರೈತರಿಗೆ ತಿಳಿಸಿ ಅದನ್ನು ಸಕಾಲಕ್ಕೆ ಒದಗಿಸುತ್ತಾ ಬಂದಿದ್ದಾರೆ ದೇಶದಲ್ಲಿ ರೈತರಿಗೆ ಈ ವಿಚಾರದಲ್ಲಿ ಸಾಕಷ್ಟು ಪ್ರಚಾರ ನಡೆದಿದೆ. ಇದರಿಂದ ಈ ದಿವಸ ಜನರು ಹೆಚ್ಚು ಹೆಚ್ಚಾಗಿ ಮುಂದೆ ಬಂದು ದೇಶದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಅವಕಾಶವಾಗಿದೆ ಎಂಬುವುದನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛಿಸುತ್ತೇನೆ.

ಇನ್ನು ನೀರಾವರಿ ವಿಚಾರ ಮಾನ್ಯ ಮಂತ್ರಿಗಳು ಇನ್ನು ಬರಲಿರುವ 5 ವರ್ಷಗಳಲ್ಲಿ 3 ಲಕ್ಷ ಎಕರೆಗಳನ್ನು ನೀರುಸಾಗಿಗೆ ಒಳಪಡಿಸುವ ಪ್ರಯತ್ನಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ ಈ ಯೋಜನೆಯಲ್ಲಿ ಸಣ್ಣ ಸಣ್ಣ ಕೆರೆಗಳನ್ನು ರಿಪೇರಿ ಮಾಡಿದರೆ ಜನಕ್ಕೆ ಅದರ ಫಲ ಬೇಗ ದೊರೆಯುತ್ತದೆ. ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಂಡ ಕಡೆಗಳಲ್ಲಿ ಜನಕ್ಕೆ ಅದರ ಫಲ ಬೇಗ ದೊರೆಯುವುದಿಲ್ಲ ಅದಕ್ಕೆ 10-15 ವರ್ಷಗಳು ಕಾಯಬೇಕು. ಈ ಉದ್ದೇಶದಿಂದ ಸರ್ಕಾರದವರು ಸಣ್ಣ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಸಣ್ಣ ಪುಟ್ಟ ಕೆರೆಗಳನ್ನೂ ಬಾವಿಗಳನ್ನೂ ಒದಗಿಸುವುದಕ್ಕೆ ಪ್ರಯತ್ನಮಾಡುವುದಾಗಿ ತಿಳಿಸಿದ್ದಾರೆ. ಇನ್ನು ಆಹಾರದ ಅಭಾವವನ್ನು ಹೋಗಲಾಡಿಸುವುದಕ್ಕಾಗಿ ಸೊಸೈಟಿಗಳ ಮೂಲಕ ಧಾನ್ಯವನ್ನು ಹಂಚುತ್ತಿದ್ದಾರೆ. ರೈತರುಗಳಿಗೆ ಹೆಚ್ಚಿನ ಬೆಳೆಯನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಲು ಸಾಲಗಳನ್ನು ಅಲ್ಪಾವಧಿ ಮಧ್ಯಮಾವಧಿ

(ಶ್ರೀ ಬಿ. ನಂಜಪ್ಪ)

ಮತ್ತು ದೀರ್ಘಾವಧಿ ರೂಪದಲ್ಲಿ ರೈತರಿಗೆ ಹಂಚಲಾಗುತ್ತಿದೆ. ಆದರೆ ಈ ವಿಚಾರವನ್ನು ಪ್ರಸ್ತಾಪಿಸುತ್ತಾ ಹಾಸನ ಜಿಲ್ಲೆಯ ಮಾನ್ಯ ಸದಸ್ಯರು ಅಲ್ಲಿ ಈ ಸಾಲಗಳನ್ನೆಲ್ಲಾ ಬರೀ ಕಾಂಗ್ರೆಸ್ಸಿನವರಿಗೆ ಕೊಡಲಾಗುತ್ತಿದೆ ಎಂದು ಹೇಳಿದರು ಜನರು ಕಾಂಗ್ರೆಸ್ಸಿಗೆ ಸೇರಿ ದೇಶಸೇವೆ ಮಾಡುವುದಕ್ಕೆ ಬಂದವರು ಸಾಲ ಪಡೆಯಬಾರದು, ಅವರು ವ್ಯವಸಾಯ ಮಾಡಬಾರದು ಎಂತ ಏನೂ ನಿರ್ಬಂಧ ಇಲ್ಲ. ಅವರಿಗೂ ಕೆಲವರಿಗೆ ಸಾಲ ಸಿಕ್ಕಿರಬಹುದು. ಬೇರೆಯವರಿಗೆ ಯಾರಿಗೂ ಸಾಲ ಸಿಕ್ಕಿಲ್ಲ ಎಲ್ಲವು ಕಾಂಗ್ರೆಸ್ಸಿನವರ ಪಾಲಾಗಿದೆ ಎಂದು ಅವರು ಹೇಳಿದ್ದು ಸರಿಯಲ್ಲ. ಇತರರಿಗೂ ಸಾಲ ಕೊಡಲಾಗಿದೆ ಎಂಬುದನ್ನು ನಾನು ರುಜು ಮಾಡುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಯಾವ ಪಕ್ಷಕ್ಕೆ ಹೆಚ್ಚಿಗೆ ಕೊಟ್ಟಿದ್ದಾರೆಂಬುದನ್ನು ಹೇಳುತ್ತೀರಾ?

ಶ್ರೀ. ಬಿ. ನಂಜಪ್ಪ.—ಕಾಂಗ್ರೆಸ್ಸಿನವರ ಪಾಲಾಗಿದೆ ಎಂದವರು ಈಗ ಯಾರಿಗೆ ಜಾಸ್ತಿ ಸಿಕ್ಕಿದೆ ಎಂದು ಕೇಳುತ್ತಿದ್ದಾರೆ. ಆದರೆ ಅಲ್ಲಿ ಇವರು ಅಧ್ಯಕ್ಷರಾಗಿರತಕ್ಕ ಇಂಡಸ್ಟ್ರಿಯಲ್ ಬಾಂಕಿನಲ್ಲಿ ಇವರು ಯಾವ ರೀತಿ ಮಾಡಿದ್ದಾರೆ ಏಂಬುದನ್ನು ಹೇಳಿದರೆ ಇವರು ಮಾಡಿರುವುದೆಲ್ಲ ಬಯಲಾಗುತ್ತದೆ. ಇವರು ಅಲ್ಲಿ ಮಾಡಿರುವ ಹಾಗೆ ನಾವೇನೂ ಮಾಡಿಲ್ಲ.

ಶ್ರೀ ಅಜೀಜ್ ಸೇಟ್.—ಸಾಲ ಕೊಟ್ಟಿಲ್ಲ ಎಂದು ಅವರು ಹೇಳಲಿಲ್ಲ. ಕೊಟ್ಟ ಸಾಲ ಕಾಂಗ್ರೆಸ್ಸಿನವರಿಂದ ವಾಪಸ್ಸು ಬರುವುದೇ ಇಲ್ಲ ಎಂದು ಹೇಳಿದರು.

ಶ್ರೀ ಬಿ. ನಂಜಪ್ಪ.—ದೇಶದಲ್ಲಿರತಕ್ಕ ಎಲ್ಲಾ ರೈತರಿಗೂ ಒಂದೇ ರೀತಿಯಾಗಿ ಸಾಲವನ್ನು ಕೊಡಲಾಗುತ್ತಿದೆ ಎಂಬುದನ್ನು ಮಾನ್ಯ ಸದಸ್ಯರುಗಳು ತಮ್ಮ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಇನ್ನು ಪಡೆದಿದ್ದ ಸಾಲವನ್ನು ಕೊಡದೆ ಇರತಕ್ಕ ಜನರು ನಮ್ಮಲ್ಲೂ ಇದ್ದಾರೆ. ನಿಮ್ಮಲ್ಲೂ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಾವು ಯಾವ ಸಂಸ್ಥೆಗೂ ಸದಸ್ಯರಾಗಿಲ್ಲ, ಸಾಲವನ್ನೂ ಪಡೆದಿಲ್ಲ. ನಿಮ್ಮ ಪಕ್ಷದವರೇ ಸರ್ಕಾರದ ಹಣವನ್ನು ದರೋಡೆ ಮಾಡಿದ್ದಾರೆ, ದೇಶಕ್ಕೆ ಅನ್ಯಾಯ ಮಾಡಿದ್ದಾರೆ.

Mr. SPEAKER.—That kind of interference in the circumstances prevailing, will be taken serious note of. I am hard pressed for time. Several members are desirous of speaking. If persons who have participated disturb, I will simply note it for future guidance, for excluding them for a week from any participation whatsoever. Please do not repeat it. There are new-comers who are anxious to participate.

ಶ್ರೀ ವಾಟಾಳ್ ನಾಗರಾಜ್.—ನಾವು ಯಾವ ಸೊಸೈಟಿಗಳಿಗೂ ಸದಸ್ಯರಾಗಿಲ್ಲ ಎಂದು ಹೇಳಿದೆ.

Mr. SPEAKER.—Because I am a little patient, my indulgence should not be used in this way. Are there not others who want to participate? The hon. Member has already participated. I must give a chance to others.

ಶ್ರೀ ಬಿ. ನಂಜಪ್ಪ.—ಇನ್ನು ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಈಗ ತಾನೆ ಈ ಸಭೆಗೆ ಪ್ರವೇಶ ಮಾಡಿದ್ದಾರೆ. ಇವರು ಹಿಂದೆ ಕಾರ್ಪೊರೇಷನ್ನಿನಲ್ಲಿ ಸಾಕಷ್ಟು ಹೋರಾಟ ಮಾಡಿ ಅಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಆಡಳಿತವನ್ನು ನಡೆಸವುದಕ್ಕೆ ಅವಕಾಶ ಕೊಡದೆ ಅಲ್ಲಿ ಇವರು ಅದಕ್ಕೆ ಧಕ್ಕೆಯನ್ನು ತಂದಿದ್ದರಿಂದ ಸರ್ಕಾರದವರು ಅದನ್ನು ಸೂಪರ್‌ಸೀಡ್ ಮಾಡಿದರು. ಅದೇ ರೀತಿ ಇವರು ಇದೇ ಸಭೆಯಲ್ಲಿ ರಾಜ್ಯಪಾಲರು ತಮ್ಮ ಭಾಷಣವನ್ನು ಇನ್ನೂ ಪ್ರಾರಂಭಮಾಡುವ ಮೊದಲೇ ಇಲ್ಲಿ ತಮ್ಮ ದಾಂಧಲೆಯನ್ನು ಷುರು ಮಾಡಿದ್ದರು. ಸದಸ್ಯರಿನ್ನೂ ಪ್ರಮಾಣವಚನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆಯೇ ಇವರು ಷುರು ಮಾಡಿದ್ದರು. ಅಷ್ಟೇ ಅಲ್ಲ ಸಭಾತ್ಯಾಗ ಕೂಡ ಮಾಡಿದರು.

ಶ್ರೀ ವಾಟಾಳ್ ನಾಗರಾಜ್.—ನಾನು ಸಭಾತ್ಯಾಗ ಮಾಡಿದ್ದು ಮಂತ್ರಿಮಂಡಲದ ವಿಚಾರಕ್ಕೆ

ಶ್ರೀ ಬಿ. ನಂಜಪ್ಪ.—ಅಧ್ಯಕ್ಷರೇ, ಹೀಗೆ ಇವರು ಮಧ್ಯೆ ಮಧ್ಯೆ ಪ್ರವೇಶ ಮಾಡಿದರೆ ನನಗೆ ಮಾತನಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಅವರಿಗೆ ಹಾಗೆ ಮಧ್ಯೆ ಮಧ್ಯೆ ತೋರಿದರೆ ಕೊಡಕೂಡದು.

ಶ್ರೀ ಬಿ. ನಂಜಪ್ಪ.—ಇನ್ನೂ ದೇಶದಲ್ಲಿ ಈಗತಾನೆ ನಾಲ್ಕನೇ ಮಹಾ ಚುನಾವಣೆಗಳು ಮುಗಿದು ದೇಶದಲ್ಲಿರತಕ್ಕ ಜನರು ಇಲ್ಲಿಗೆ 216 ಜನರನ್ನು ಆರಿಸಿ ದೇಶದ ಕಲ್ಯಾಣವನ್ನು ಸಾಧಿಸುವುದಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದುದರಿಂದ ಇಲ್ಲಿ ನಾವೆಲ್ಲರೂ ಒಂದು ಒಳ್ಳೆಯ ಧ್ಯೇಯದಿಂದ ಕೆಲಸ ಮಾಡಬೇಕಾಗಿದೆ. ಹಾಗಿರುವಾಗ ರಾಜ್ಯಪಾಲರಿನ್ನೂ ವೇದಿಕೆಯನ್ನು ಹತ್ತುವ ಮೊದಲೇ ಇವರು ಸಭಾತ್ಯಾಗ ಮಾಡಿದ್ದು ಈ ಸಭೆಗೆ ಗೌರವವನ್ನು ತರುವುದಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಪಾಯಿಂಟ್ ಆಫ್ ಆರ್ಡರ್, ಸಾರ್. ನಾವು ಇಲ್ಲಿ ಮಾಡತಕ್ಕ ಭಾಷಣಗಳನ್ನು ಮುಗಿಸಿದ ನಂತರ ಟ್ರೆಜರಿ ಬೆಂಚಿನಲ್ಲಿರತಕ್ಕವರು ಅವುಗಳಬಗ್ಗೆ ಉತ್ತರ ಕೊಡುತ್ತಾರೆ, ಮಧ್ಯೆ ಮಧ್ಯೆ ಈ ಸದಸ್ಯರುಗಳೇಕೆ ಉತ್ತರ ಕೊಡುವುದಕ್ಕೆ ಹೋಗಿ ಜೇನುಗೂಡಿನಲ್ಲಿ ಕೈಹಾಕಿದಂತೆ ಮಾಡುತ್ತಿದ್ದಾರೆ? ಈ ವಾದವಿವಾದಗಳ ಮಧ್ಯೆ ನಾವು ಇಲ್ಲಿ ಕುಳಿತುಕೊಂಡು ಮಾಡುವುದೇನು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಬಹಳ ಪ್ರಾಮುಖ್ಯವಾದ ಕ್ರಿಯಾಲೋಪವನ್ನೆತ್ತಿದ್ದಾರೆ. ಆದರೆ ಇಲ್ಲಿ ಜೇನು ಗೂಡು ಯಾವುದು ಅದು ಎಲ್ಲಿದೆ, ಅದಕ್ಕೆ ಕೈಹಾಕಿದವರು ಯಾರು ಎಂಬುದನ್ನೆಲ್ಲಾ ಆಲೋಚನೆ ಮಾಡಿ ರೂಲಿಂಗನ್ನು ಕೊಡಬೇಕಾಗಿದೆ; ಆದರೆ ಕೊಡುವುದಕ್ಕೆ ಇದು ಬಹಳ ಕ್ಲಿಷ್ಟವಾದ ಕ್ರಿಯಾಲೋಪ.

ಶ್ರೀ ಬಿ. ನಂಜಪ್ಪ.—ಕಾರ್ಪೊರೇಷನ್ ಸೂಪರ್‌ಸೀಡ್ ಆಗುವುದಕ್ಕೂ ಶ್ರೀ ವಾಟಾಳ್ ನಾಗರಾಜ್ ಅವರೇ ಕಾರಣ. ಇಂಥವರಿಂದ ಪ್ರಜಾಪ್ರಭುತ್ವ ದೇಶದಲ್ಲಿ ಕೊರತೆಯಾಗುತ್ತಿದೆ. ಅಲ್ಲಿ ಸುಮಾರು 20 ಮೀಟಿಂಗುಗಳು ಆದುವು. ಪ್ರತಿಯೊಂದರಲ್ಲೂ ಹೊಡೆದಾಟ, ಗೊಂದಲವೆದ್ದು ಸಭೆಯನ್ನು ನಡೆಸುವುದಕ್ಕೇ ಆಗಲಿಲ್ಲ. ಅದಕ್ಕಾಗಿ ಸರ್ಕಾರದವರು ಆಡಳಿತ ಹಿತದೃಷ್ಟಿಯಿಂದ ಅದನ್ನು ಸೂಪರ್‌ಸೀಡ್ ಮಾಡಬೇಕಾಯಿತು.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಗೊಂದಲವೆದ್ದದ್ದು ಒಬ್ಬ ಕಾಂಗ್ರೆಸ್ಸಿನವರು ಇನ್ನೊಬ್ಬ ಸದಸ್ಯರಿಗೆ ಕಪಾಳಕ್ಕೆ ಹೊಡೆದುದರಿಂದ ಅದನ್ನು ಆ ರೀತಿ ಬೇಕಾಯಿತು. ಅದಕ್ಕೆ ನಾನಲ್ಲ ಕಾರಣ.

ಶ್ರೀ ಬಿ. ನಂಜಪ್ಪ.—ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಸಮಾನಾವಕಾಶವಿದೆ. ಪ್ರಜಾಪ್ರಭುತ್ವದಲ್ಲಿ ಗಲಾಟೆ ಎಬ್ಬಿಸಿ ನಡೆಯಬೇಕಾದ ಕಾರ್ಯಗಳಿಗೆ ಅಡ್ಡಿಯನ್ನು ಒಡ್ಡುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಅದಕ್ಕಾಗೇ ಅದನ್ನು ಸೂಪರ್‌ಸೀಡ್ ಮಾಡಲಾಯಿತು.

ಶ್ರೀ ವಾಟಾಳ್ ನಾಗರಾಜ್.—ನೀವು ಬೆಂಗಳೂರಿನವರಲ್ಲ, ನಿಮಗೆ ಇಲ್ಲಿಯ ವಿಚಾರಗಳು ಹೇಗೆ ಗೊತ್ತಾಗಬೇಕು ? ತಿಳಿಯದೆ ಇದ್ದುದನ್ನೆಲ್ಲಾ ಮಾತನಾಡುವುದಕ್ಕೆ ಹೋಗಬಾರದು.

ಶ್ರೀ ಬಿ. ನಂಜಪ್ಪ.—ಇನ್ನು ಶರಾವತಿ ವಿದ್ಯುತ್ ವಿಚಾರ: ಇಲ್ಲಿ ಕಳೆದ 5 ದಿನಗಳಿಂದಲೂ ಆ ಶರಾವತಿ ಮತ್ತು ಕೃಷ್ಣಾ ನದಿಗಳ ವಿಚಾರವನ್ನು ಚರ್ಚೆ ಮಾಡಿದ್ದಾಗಿದೆ. ಅದರಲ್ಲಿ ಕಾಣತಕ್ಕ ಮುಖ್ಯ ವಿಚಾರವಿಷ್ಟೆ: ಇಲ್ಲಿ ಹಣ ದುರುಪಯೋಗವಾಗಿದೆ ಎಂದು ವಿರೋಧಪಕ್ಷದವರು ಹೇಳುತ್ತಿದ್ದಾರೆ. ನಮ್ಮ ನಾಯಕರು ಹಾಗೆ ಯಾವ ಹಣವೂ ದುರುಪಯೋಗವಾಗಿಲ್ಲ ಎನ್ನುತ್ತಾರೆ. ಈ ಹಿಂದೆ ಇದೇ ಸಭೆಯಲ್ಲಿ ವಿರೋಧಪಕ್ಷದವರು ಒಂದು ಅವಿಶ್ವಾಸ ನಿರ್ಣಯವನ್ನು ತಂದಿದ್ದರು. ಅದೂ ಸೋತು ಬಿದ್ದು ಹೋಯಿತು. ಅನಂತರ ಅದೇ ವಿಚಾರವಾಗಿ ಮಾನ್ಯ ಮಂತ್ರಿಗಳು ಒಂದು ಶ್ವೇತಪತ್ರವನ್ನು ಹೊರಡಿಸಿದರು. ಹೀಗೆಲ್ಲಾ ಚರ್ಚೆಗಳಾಗಿ ಅದು ಯಾವಾಗಲೋ ತೀರ್ಮಾನವಾಗಿದೆ. ಹೀಗೆ ಒಂದಾವರ್ತಿ ತೀರ್ಮಾನವಾದ ವಿಚಾರವನ್ನು ಪದೇ ಪದೇ ಇಲ್ಲಿ ಚರ್ಚೆಮಾಡುವುದರಿಂದ ದೇಶಕ್ಕೆ ಎಷ್ಟು ಇದರಿಂದ ಹಾನಿಯಾಗುತ್ತದೆ, ದೇಶದಲ್ಲಿ ನಡೆಯಬೇಕಾದ ಕಲ್ಯಾಣ ಕಾರ್ಯಗಳು ಬಹಳವಾಗಿರುವಾಗ ನಾವು ಹೀಗೆ ಹಾಡಿದ್ದನ್ನೇ ಹಾಡುತ್ತ ಹೋದರೆ ಏನು ಸಾಧಿಸಿದಂತಾಯಿತು ? ಇದನ್ನು ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ ಇಲ್ಲಿ ನಡೆಯತಕ್ಕ ಕೆಲಸಕಾರ್ಯಗಳಿಗೆ ಅಡ್ಡಿಯನ್ನೊಡ್ಡಲು ವಿರೋಧಪಕ್ಷ ಈ ಒಂದು ನಿಲುವನ್ನು ತಾಳಿದೆ ಎನ್ನಬೇಕಾಗುತ್ತದೆ. ಇದರ ಬಗ್ಗೆ ಪಿ. ಡಬ್ಲ್ಯು. ಡಿ. ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ಸದಸ್ಯರು ಇಲ್ಲಿ ಒಂದು ಉನ್ನತಭಾವನೆ ಹಾಗೂ ಸದ್ಭಾವನೆಯಿಂದ ನಡೆದುಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಈ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣಕ್ಕೆ ನಾನು ವಂದನಾ ನಿರ್ಣಯದ ಪರವಾಗಿ ನನ್ನ ಅಭಿಮತವನ್ನು ಈ ಸಭೆಯಲ್ಲಿ ಕೊಟ್ಟು ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

3-30 P.M.

Mr. SPEAKER.—Sri Viswanatha Reddy, has been allotted only ten minutes.

Sri VISWANATHA REDDY (Yadgir).—Sir, I had requested my Whip to allot me 20 minutes.

Mr. SPEAKER.—If he has given, he can take. I have got a list of 35 names. I am trying to shut-out as far as possible members of the Ruling party. I will give them chance on the Budget.

ಶ್ರೀ ವಿಶ್ವನಾಥ ರೆಡ್ಡಿ (ರಾಚನ್‌ಗೌಡ).—ಸನ್ಮಾನ್ಯ ಅಧ್ಯಕ್ಷರೇ, ಹೊಸದಾಗಿ ಬಂದಂಥ ಸದಸ್ಯರು ಈ ಸಭೆಯ ಬಗ್ಗೆ ಬಹಳ ದೊಡ್ಡ ಕಲ್ಪನೆಯನ್ನು ಇಟ್ಟುಕೊಂಡು ಬಂದಿದ್ದಾರೆ. ಆದರೆ ಇಲ್ಲಿನ ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಓದಿ ಕೇವಲ ಅದನ್ನು ಅರ್ಥಮಾಡಿಕೊಂಡು ಸರಿಯಾಗಿ ನಡೆಯುವುದು ದುಸ್ತರ. ಆದರೆ ಕೆಲಸಗಳು ಇಲ್ಲಿ ಹೇಗೆ ನಡೆಯುತ್ತದೆ ಎನ್ನುವ ಅನುಭವವನ್ನು ನಾವು ಪಡೆದ ಮೇಲೆ ಸರಿಯಾಗಿ ವರ್ತಿಸಬಹುದು. ಅದಕ್ಕಾಗಿ ಅಧ್ಯಕ್ಷರು ಮತ್ತು ಹಳೆಯ ಸದಸ್ಯರು ಆಗಾಗ್ಗೆ ಹೊಸದಾಗಿ ಬಂದಂಥ ನಮಗೆ ಮಾರ್ಗದರ್ಶನ ಮಾಡಿ ಇಲ್ಲಿ ಹೇಗೆ ವರ್ತನೆ ಮಾಡಬೇಕೆನ್ನುವ ವಿಷಯವನ್ನು ನಮ್ಮ ಗಮನಕ್ಕೆ ತಂದು ಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ಲಾರ್ಡ್ ಚೆಸ್ಟರ್‌ಫನ್ ಅವರು ತಮ್ಮ ಮಗನು ಪಾರ್ಲಿಮೆಂಟಿಗೆ ಹೋದಾಗ ಹೀಗೆ ಹೀಗೆ ಮಾಡಬೇಕೆಂದು ಶಿಕ್ಷಣಕೊಟ್ಟು ಕೆಲವು ಕಾಲ ದೀರ್ಘವಾಗಿ ಪತ್ರಗಳನ್ನು ಬರೆದೂ ಸಹ ಶಿಕ್ಷಣ ಕೊಡುತ್ತಿದ್ದನಂತೆ. ಆದ್ದರಿಂದ ಈಗ ಹೊಸದಾಗಿ ಮಾನ್ಯ ಸದಸ್ಯರು ಈ ಅಸೆಂಬ್ಲಿಗೆ ಬರುವಾಗ ಪಾರ್ಲಿಮೆಂಟರಿ ಪದ್ಧತಿ ಬಗ್ಗೆ ಅಭ್ಯಾಸಮಾಡಿ ಹಳೆಯ ಸದಸ್ಯರು ಹೇಗೆ ಮಾತನಾಡುತ್ತಾರೆ ಯಾವ ರೀತಿಯಲ್ಲಿ ವರ್ತಿಸುತ್ತಾರೆ ಎನ್ನುವುದನ್ನು ತಿಳಿದು ಈ ಮಾನ್ಯ ಸಭೆಯ ಗೌರವಕ್ಕೆ ತಕ್ಕಂತೆ ವರ್ತಿಸಬೇಕು, ಅದಕ್ಕಾಗಿ ಎಲ್ಲರೂ ಪ್ರಯತ್ನ ಮಾಡಬೇಕಾದುದು ಸಹಜ. ಏಕೆಂದರೆ ಈಗ ಹೊಸದಾಗಿ ಬಂದಂಥ ಸದಸ್ಯರಾದ ನಮಗೆ ಪಾಯಿಂಟ್ ಆಫ್ ಆರ್ಡರ್ ಅಂದರೆ ಏನೂ ಸರಿಯಾಗಿ ಗೊತ್ತಿಲ್ಲ. ಹಳೆಯ ಸದಸ್ಯರು ತಮ್ಮ ಒಂದು ವರ್ತನೆಯಿಂದ ತಪ್ಪುಮಾಡಿದರೆ ಆ ಒಂದು ತಪ್ಪು ಪಾಠವನ್ನು ಹೊಸದಾಗಿ ಬಂದ ನಾವು ಕಲಿಯಬಹುದು. ಮೊನ್ನೆ ಮಾನ್ಯ ಶ್ರೀ ಚನ್ನಬಸಪ್ಪನವರು ಮಾತನಾಡುವ ಕಾಲಕ್ಕೆ 10-15 ವರ್ಷಗಳವರೆಗೆ ಸದಸ್ಯರಾಗಿರತಕ್ಕಂಥ ಹಾಗೂ ಮಂತ್ರಿಗಳಾಗಿರತಕ್ಕಂಥವರು, ಮುಖ್ಯ ಮಂತ್ರಿಗಳು, ಅರ್ಥಿಕ ಮಂತ್ರಿಗಳು, ಪಿ.ಡಬ್ಲ್ಯು.ಡಿ. ಮಂತ್ರಿಗಳು ಮಾಡಿದಂಥ ವರ್ತನೆ ನೋಡಿದರೆ ನಾನು ಒಂದು ಮಾತನ್ನು ಹೇಳಬೇಕೆನ್ನುತ್ತೇನೆ. ಹಳ್ಳಿಗಳಲ್ಲಿ ಹುಡುಗರು ಗೋಲಿಯಾಟ ಆಡುವಾಗ ಒಬ್ಬ ಹುಡುಗ ಇನ್ನೊಬ್ಬನಿಗೆ ಏನೋ ವಿಷಯವನ್ನು ಎತ್ತಿಕೊಂಡು ಕಳ್ಳನೆಂದರೆ ಆ ಹುಡುಗನಿಗೆ ನೀನೂ ಕಳ್ಳ ನನಗೇಕೆ ಅನ್ನುತ್ತಿ ಅಂದು ಗಳವು ಮಾಡಿಲ್ಲವೇ? ನನ್ನ ಕಳವನ್ನು ಎತ್ತಲು ನಿನಗೇನು ಅಧಿಕಾರ ಎಂದು ಒದರಿ ಅವನು ತಾನು ಮಾಡಿದ ತಪ್ಪನ್ನು ಎತ್ತದಂತೆ ಮಾಡಲು ಅಂಜಿಕಿಸುವಂತೆ ಇವರ ವರ್ತನೆ ಒಮ್ಮೊಮ್ಮೆ ನಮಗೆ ಅನಿಸುತ್ತದೆ—ಇಂಥ ದೊಡ್ಡವರು ಅನುಸರಿಸುತ್ತಿರುವ ಈ ರೀತಿ ಇದು ನಿಜವಾಗಿ ಪಾರ್ಲಿಮೆಂಟರಿ ಪದ್ಧತಿಯಾಗಿದೆಯೇ? ಅಥವಾ ನಮ್ಮ ದುರ್ದೈವದಿಂದ ಹೆಚ್ಚಿನ ಅನುಭವ ಪಡೆದ ಈ ದೊಡ್ಡ ಜನರು ಇಷ್ಟು ಕೆಳಮಟ್ಟದವರು ಆಗಿದ್ದಾರೆಯೋ ಎಂದು ನನಗೆ ಭಾಸವಾಗುತ್ತದೆ.

ಇನ್ನು ರಾಜ್ಯಪಾಲರು ಮಂಡಿಸಿದಂತಹ ಭಾಷಣದ ಬಗ್ಗೆ ನಾನು ಕೆಲವು ವಿಚಾರಗಳನ್ನು ವ್ಯಕ್ತಮಾಡುತ್ತೇನೆ. ಬಹಳವಾಗಿ ಆ ವಿಚಾರದ ಬಗ್ಗೆ ಹೇಳುವುದರಲ್ಲಿ ಅರ್ಥವಿಲ್ಲವೆಂದು ನನಗನ್ನಿಸುತ್ತದೆ. ಆದ್ದರಿಂದ ಕೇವಲ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮುಖ್ಯವಾಗಿ ನಾವು ಎಷ್ಟು ಹೇಳಿದರೂ ಆಡಳಿತ ಪಕ್ಷದಲ್ಲಿರುವವರು ಅವನ್ನೆಲ್ಲಾ ಒಂದು ಕಡೆಯ ಕಿವಿಯಲ್ಲಿ ಕೇಳಿ ಇನ್ನೊಂದು ಕಡೆಯ ಕಿವಿಯಲ್ಲಿ ಬಿಟ್ಟುಬಿಡುತ್ತಾರೆ. ಆದ್ದರಿಂದ ವಿಶೇಷವಾಗಿ ಹೇಳುವುದರಲ್ಲಿ ಏನೂ ಪ್ರಯೋಜನವಿಲ್ಲ. ಮುಖ್ಯವಾಗಿ ಈಗ ಆಹಾರ ಪರಿಸ್ಥಿತಿ ಮತ್ತು ಒಕ್ಕಲುತನದ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡುತ್ತೇನೆ. ಆಹಾರವಿತರಣೆಯ ಬಗ್ಗೆ ಒಳ್ಳೆಯ ಕ್ರಮ ನಡೆದಿದ್ದು, ತೃಪ್ತಿಯಾಗಿ ಆ ಮಿಷನರಿಯಿಂದ ಕೆಲಸ ನಡೆದಿದೆ, ಸಾಮಾನ್ಯವಾಗಿ ಜನರು ಕೆಲಮಟ್ಟಿಗೆ ತೃಪ್ತಿಯಾಗಿದ್ದಾರೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾನು ಹೇಳುವುದಾದರೆ ಜನ ಈ ವಿಷಯವಾಗಿ ಯಾವ ರೀತಿಯಲ್ಲಿಯೂ ತೃಪ್ತರಾಗಿಲ್ಲ ಆಹಾರಪದಾರ್ಥಗಳನ್ನು ಸೊಸೈಟಿಗಳು ಯಾವ ರೀತಿಯಲ್ಲಿ ವಿತರಣೆಮಾಡುತ್ತಿವೆಯೆಂದರೆ, ಅವು ಬ್ಲಾಕ್‌ಮಾರ್ಕೆಟ್ಟಿನ ಕೇಂದ್ರಗಳಾಗಿವೆ. ಆಹಾರ ಪದಾರ್ಥಗಳನ್ನು ಜನ ಸಾಮಾನ್ಯರಿಗೆ ಕೊಡುವುದಕ್ಕೆ ಬದಲು ಬಹುಮಟ್ಟಿಗೆ ಅವು ನೇರವಾಗಿ ಬ್ಲಾಕ್

ಮಾರ್ಕೆಟ್ಟಿಗೆ ಹೋಗುತ್ತವೆ. ಇದಕ್ಕಾಗಿ ಆಡಳಿತ ಪಕ್ಷದವರು ಆ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಬೇಕು. ಆಹಾರ ಪರಿಸ್ಥಿತಿಯನ್ನು ಬಗೆಹರಿಸಲು ಹಣ್ಣಿನ ಉಪಯೋಗ ಮಾಡಿಕೊಳ್ಳಬೇಕು, ಅದಕ್ಕಾಗಿ ಈಗಿನ ತಕ್ಕ ಆಹಾರ ಪದ್ಧತಿಯನ್ನು ಬದಲಾಯಿಸಬೇಕು ಎಂಬುದಾಗಿ ರಾಜ್ಯಪಾಲರೂ ಹೇಳಿದ್ದಾರೆ. ಇದನ್ನು ನೋಡಿದರೆ ವಿಚಿತ್ರವೆನಿಸುತ್ತದೆ. ಪರದೇಶದಿಂದ ಬಂದ ಆಹಾರಧಾನ್ಯ—ಅದರ ವಿತರಣೆ ಸರಿಯಾಗಿ ಇಲ್ಲ. ಸರಿಯಾದ ವ್ಯವಸ್ಥೆ ಇಲ್ಲವೆ ಪ್ರಿಯವಾಗುತ್ತಿದ್ದು ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುವ ಶಕ್ತಿಯನ್ನು ನಮ್ಮ ಜನರು ಹೊಂದಿಲ್ಲದೆ ಇರುವಾಗ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಜನ ಹೊಟ್ಟೆ ತುಂಬಿಕೊಳ್ಳಲು ನಿಜವಾಗಿ ಹಣ್ಣು ಹಂಪಲುಗಳನ್ನು ಕೊಳ್ಳುವ ಶಕ್ತಿಯನ್ನು ಪಡೆದಿದ್ದಾರೆಯೇ ಎಂದು ನಾನು ಕೇಳಬೇಕಾಗಿದೆ. ಆದ್ದರಿಂದ ಈ ಬಗ್ಗೆ ದೀರ್ಘವಾಗಿ ವಿಚಾರ ಮಾಡಿ ಜನಗಳಿಗೆ ಹೇಳಬೇಕು ಎಲ್ಲಕ್ಕಿಂತಲೂ ಮುಖ್ಯವಾಗಿ ನಮ್ಮ ಸರ್ಕಾರ ರೈತರ ಕಡೆ, ಒಕ್ಕಲುತನದ ಕಡೆ ಹೆಚ್ಚು ಗಮನಕೊಡಬೇಕು. ಪ್ರತ್ಯೇಕವಾಗಿ ಈ ವ್ಯವಸಾಯ ಖಾತೆಯನ್ನು ಒಬ್ಬ ಮಂತ್ರಿಗಳಿಗೇ ವಹಿಸಬೇಕಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಖಾತೆಗಳೊಂದಿಗೆ ಈಗ ಹೊಸದಾಗಿ ವ್ಯವಸಾಯ ಖಾತೆಯೊಂದನ್ನು ನಿರ್ವಹಿಸಿಕೊಳ್ಳುವುದಾದರೆ ಅದು ಸಾಧ್ಯವಿಲ್ಲ. ಅವರು ಯೋಗ್ಯ ರೀತಿಯಲ್ಲಿ ಸಂಘಟಿಸಲು ಸಾಧ್ಯವಿಲ್ಲವೆಂಬುದಾಗಿ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅದರ ಬದಲು ಪ್ರತ್ಯೇಕವಾಗಿ ವ್ಯವಸಾಯಕ್ಕೆ ಬೇರೆ ಒಂದು ಪೋರ್ಟ್‌ಫೋಲಿಯೊ ಮಾಡಬಹುದಾಗಿತ್ತು ಅಥವಾ ಆಹಾರ ಶಾಖೆಗೆ ಅದನ್ನು ಒಪ್ಪಿಸಿದ್ದರೆ ಅವರು ಅಲ್ಲಿ ಹೆಚ್ಚು ಸಂಘಟಿತವಾಗಿ ಮಾಡಿದರೆ ರೈತರ ಪರಿಸ್ಥಿತಿಯನ್ನು ಇನ್ನು ಹೆಚ್ಚಿಗೆ ಸುಧಾರಿಸಬಹುದು. ಆಗ ನಮ್ಮ ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದು ಹೆಜ್ಜೆಯನ್ನು ಮುಂದಿಟ್ಟ ಹಾಗೆ ಆಗುತ್ತದೆ. ಈ ವಿಷಯದಲ್ಲಿ ಯಾವುದೇ ಒಂದು ತರಹವಿರಲಿ, ಯಾವ ವಿಚಾರವೇ ಇರಲಿ, ಎಷ್ಟೇ ದುಡ್ಡು ಖರ್ಚು ಮಾಡಿ ಸುಮ್ಮನೆ ಹೀಗೆ ಮಾಡುತ್ತೇವೆಂದು ಹೇಳುವುದರಿಂದ ಯಾವ ಸಮಸ್ಯೆಗಳೂ ಪರಿಹಾರ ಆಗುವುದಿಲ್ಲ. ಮುಖ್ಯವಾಗಿ ಆಡಳಿತ ವರ್ಗ ಚೆನ್ನಾಗಿರಬೇಕು. ಮಾಡತಕ್ಕ ಕೆಲಸವೂ ಚೆನ್ನಾಗಿರಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇಬ್ಬರ ಇಲಾ-ಅಡ್ವೈಜಿನಲ್ಲಿದ್ದುಕೊಂಡು ಯಾವಾಗಲೂ ಆಡಳಿತವನ್ನು ಇಂತಹ ಮಟ್ಟಕ್ಕೆ ತಂದಿದ್ದಾರೆ. ಆ ಇಬ್ಬರು ಯಾರು ಎನ್ನುವ ವಿಷಯ ಇಡೀ ನಮ್ಮ ಕನ್ನಡ ನಾಡಿಗೆ ಗೊತ್ತಾಗಿದೆ. ಆ ಇಲಾ-ಅಡ್ವೈಜ್‌ನಿಂದ ಇವರು ದೂರವಿದ್ದರೆ ಅಭಿವೃದ್ಧಿಯನ್ನು ಅಷ್ಟಾಗಿ ಮಾಡದೇ ಇದ್ದರೂ ಸ್ವಲ್ಪಮಟ್ಟಿಗೆ ಒಳ್ಳೆಯದು ಮಾಡಬಹುದು. ಒಂದು ಕರಪ್ಷನ್, ಇನ್ನೊಂದು ಮಾಲ್ ಅಡ್ಮಿನಿಸ್ಟ್ರೇಷನ್. ಇವೆರಡನ್ನು ಬಿಟ್ಟರೆ ಸಹಜವಾಗಿ ಮೈಸೂರಿನ ಪರಿಸ್ಥಿತಿಯನ್ನು ಎಷ್ಟೋ ಮಟ್ಟಿಗೆ ಸುಧಾರಿಸಬಹುದು. ಆಡಳಿತ ಪಕ್ಷದವರ ಮೇಲೆ ಇರತಕ್ಕ ಆಪಾದನೆಗಳ ಬಗ್ಗೆ ಮಾನ್ಯ ಶ್ರೀ ಚನ್ನಬಸಪ್ಪನವರು 3 ಘಂಟೆ 50 ನಿಮಿಷಗಳ ಕಾಲ ಹೇಳಿದರು. ಲೋಕೋಪಯೋಗಿ ಶಾಖಾ ಸಚಿವರು ಸಹ ಅಂಕಿ ಅಂಶಗಳನ್ನು ತೆಗೆದುಕೊಂಡು 2½ ಅಥವಾ 3 ತಾಸು ಹೇಳಿದರು. ಅವರು ಸ್ವತಃ ಶ್ರೀ ಚನ್ನಬಸಪ್ಪನವರು ಹೀಗೆ ಮಾಡಿದ್ದಾರೆ ಹಾಗೆ ಮಾಡಿದ್ದಾರೆಂದು ಹೇಳಿ ಅವರ ಒಂದು ಕೃತ್ಯದಿಂದಲೇ ನಮ್ಮ ಬೆರಳುಗಳು ಸುಟ್ಟಿವೆ ಎಂಬುದಾಗಿ ಹೇಳಿದರು. ಅವರು ಅನೇಕ ಕಾಲದಿಂದ ಅಲ್ಲಿದ್ದುಕೊಂಡೇ ಆಡಳಿತದಲ್ಲಿ ಬೆರಳುಗಳು ಸುಟ್ಟಿವೆ ಎಂದು ಹೇಳಿದ್ದಾರೆ. ಈಗ ಆ ರೀತಿ 10 ಬೆರಳುಗಳು ಸುಟ್ಟಿವೆ ಎಂಬುದಾಗಿ ಮಾನ್ಯ ಶ್ರೀ ಚನ್ನಬಸಪ್ಪನವರು ಅಥವಾ ಮತ್ತಾರ ಕೃತಿಯಿಂದಾಗಲಿ ಇವರೂ ಒಪ್ಪಿಕೊಂಡಿರುವಾಗ ಆ ವಿಚಾರವನ್ನು ಒಂದು ಕಮಿಟಿಗೆ ಒಪ್ಪಿಸಬಹುದು ಮತ್ತು ಅದರ ಬಗ್ಗೆ ಏಕೆ ಒಂದು ಜುಡಿಷಿಯಲ್ ಎಂಕ್ವೈರಿ ಮಾಡಬಾರದು ಎಂದು ನಾನು ಕೇಳುತ್ತೇನೆ. ಆಗಲಾದರೂ ಇವರು ನಿಜವಿದ್ದರೆ ಆ ಒಂದು ವಿಪತ್ತಿನಿಂದ ಈ ದೇಶವಲ್ಲ ಮುಕ್ತರಾಗಬಹುದು. ಮಾನ್ಯ ಶ್ರೀ ಚನ್ನಬಸಪ್ಪನವರ ಭಾಷಣದಿಂದ ಇವರು ಕೈ ಬೆರಳನ್ನು ನಿಜವಾಗಿ ತಮ್ಮ ಬೇಕೆಂದಲೆ ಸುಟ್ಟುಕೊಂಡಿದ್ದಾರೆಂಬ ಮಾತು ಬಹುಶಃ ಸ್ಪಷ್ಟವಾಗಿ ಕಾಣುತ್ತಿದೆ. ಒಂದು ವೇಳೆ ಯಾವ ತರಹದ ಕಳಂಕವೂ ಇವರ ಮನಸ್ಸಿನಲ್ಲಿ ಇಲ್ಲದಿದ್ದರೆ, ಜುಡಿಷಿಯಲ್ ಎಂಕ್ವೈರಿಗೆ ಇವರು ತಯಾರಾಗಿರಬೇಕು, ಈ ವಿಷಯ 2-3 ಸಾರಿ ಇಲ್ಲಿ ಚರ್ಚೆಯಾಗಿದೆ. ಆದರೂ ಅದು ಸಹಜವಲ್ಲವೆಂದು ಜನತೆ ಪುನಃ ಪುನಃ ಹೇಳುವರು. ಇವರು ಇನ್ನೊಂದು ಮಾತನ್ನು ಹೇಳಬಹುದು. ಏಕೆಂದರೆ. ಜನತೆ ನಮ್ಮನ್ನು ವಿಶ್ವಾಸವಿಟ್ಟು ಆಡಳಿತ ನಡೆಸಲು ಕಳುಹಿಸಿದ್ದಾರೆ. ಕಾಂಗ್ರೆಸಿಗೆ ಶೇ. 48ರಷ್ಟು ಮತಬಿದ್ದಿದೆಯೆಂಬುದನ್ನು ಇವರೇ ಒಪ್ಪಿಕೊಂಡಿದ್ದಾರೆ.

48 ಪರ್ಸೆಂಟು ವೋಟು ಕಾಂಗ್ರೆಸ್ಸಿಗೆ ಪೋಲು ಬಿದ್ದದ್ದು ಹೇಗೆ ಎಂಬುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಅವರು ಆರಿಸಿ ಬರುವುದಕ್ಕೆ ಸರ್ವರೀತಿಯ ಪ್ರಯತ್ನವನ್ನು ಮಾಡಿದ್ದಾಗಿದೆ. 48 ಪರ್ಸೆಂಟ್ ವೋಟು ಕಾಂಗ್ರೆಸ್ಸಿಗೆ ಬೀಳುವುದಕ್ಕೆ ಚಿಂಚೋಳಿಯ ಪ್ರಕರಣ ಒಂದನ್ನು ಹೇಳಿದರೆ ಸಾಕು. ಚುನಾವಣೆಯ ಸಮಯದಲ್ಲಿ ಚಿಂಚೋಳಿಯಲ್ಲಿ ನಡೆದಂತಹ ಪ್ರಕರಣವನ್ನು ಹೇಳಿದರೆ ಚುನಾವಣೆಗೆ ಯಾರೂ ನಿಲ್ಲುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಪರಿಸ್ಥಿತಿಯನ್ನುಂಟು ಮಾಡಿದ್ದಾರೆ.

(ಶ್ರೀ ವಿಶ್ವನಾಥರೆಡ್ಡಿ ರಾಜನ್‌ಗೌಡ)

ಯಾದಗಿರಿಯಿಂದ ಹೋರೆ. ನನ್ನ ಕಡೆಯ ಕಾರ್ಯಕರ್ತರನ್ನ ಬಡಿದು ಜೀಪಿನಲ್ಲಿ ಆಂಧ್ರ ಪ್ರದೇಶದಲ್ಲಿರತಕ್ಕ ಅರಣ್ಯದಲ್ಲಿ ಬಿಟ್ಟಿದ್ದಾರೆ. ಈ ವಿಷಯವನ್ನು ಕೇಳಿದರೆ ಕಣ್ಣಿನಲ್ಲಿ ನೀರು ಬರುತ್ತವೆ. ಶ್ರೀಮಾನ್ ವೀರಣ್ಣ ಪಾಟೀಲರು ನನ್ನ ಮಿತ್ರರು. 4-5 ವರ್ಷಗಳ ಕಾಲ ನಾವು ಅವರು ಕಾಲೇಜಿನಲ್ಲಿ ಕೂಡಿ ಇದ್ದೆವೆ. ಅವರು ಮಂತ್ರಿಗಳಾಗಿ ಯಾದಗಿರಿಗೆ ಹೋದರೆ ಯಾವ ಟೈಮಿನಲ್ಲಿ ಏನಾಗುತ್ತದೆಯೋ ಎನ್ನುವ ಭಯ ಇದೆ. ಎಲ್ಲಾ ವಿಚಾರಗಳನ್ನು ಈಗ ಡೀಟೈಲಾಗಿ ಹೇಳುವುದಕ್ಕೆ ಸಮಯವಿಲ್ಲ. ಚಿಂಚೋಳಿ ಪ್ರಕರಣದ ಬಗ್ಗೆ ನಾನು ಮೊದಲೇ ಪ್ರಸ್ತಾಪಿಸಿದ್ದಂತೆ ಸೋಮವಾರ ಅಥವಾ ಮಂಗಳವಾರ ಉಪವಾಸ ಮಾಡುತ್ತೇನೆ. ಆಡಳಿತ ಪಕ್ಷದವರು ಚಿಂತೆಗಳನ್ನೆ ಮತ್ತು ದುರಾಡಳಿತದ ಬುದ್ಧಿವಾದವನ್ನು ತೆಗೆದುಕೊಳ್ಳುವುದನ್ನ ಬಿಟ್ಟು ಒಳ್ಳೆಯ ಸಲಹೆಯ ಪ್ರಕಾರ ನಡೆದರೆ ಎಷ್ಟೋ ಮಟ್ಟಿಗೆ ಆಡಳಿತ ಸುಧಾರಿಸುತ್ತದೆ. ಮತ್ತು ನಾಡಿನ ಕಲ್ಯಾಣವಾಗುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri P. B. NANDIHALI (Uchagaon).—Hon'ble Speaker Sir, I wish to state my observations on the Governor's speech before the Hon'ble House. My expectation about the Governor's speech was that it would be a clear picture of the success and failure of the Government machinery in the past and also a planning and guidance to get success in future. But it was nothing but a few praises in favour of the Government. I find the total absence of a progressive idea in the speech. I do agree that the seasonal conditions were not favourable last year especially in Belgaum and Khanapur Taluka and there was a famine. I learnt that the scarcity relief works were adopted in large scale in Mysore State. But in Khanapur Taluka and in some villages of Belgaum Taluka, people were actually starving, and especially in Jamboti Kanakumbi part there was nothing to eat except leaves and roots for the people there. I am very sorry to bring to the notice of the Hon'ble House that no help or no scarcity relief works were forthcoming. I do not know why that partiality was. May I bring it to your notice Sir, that the Government has purposely neglected the Marathi people in the border area, so that they should die and the Marathi population should be decreased. I have a right to say this because the ruling party in Belgaum has purposely did this to decrease the Marathi voters. I also surprised to listen that the programme of free distribution of wheat was launched. No help of such kind was provided to the poor people in Belgaum Taluka. On the other hand they were helplessly left to eat leaves, roots and "Konda" so that they should well remember the "Modern Congress Ramrajya".

The number of irrigation wells sanctioned by the Revenue Department is 41,000. But in Belgaum Taluka there are rare examples. The farmers must be encouraged to have irrigation wells. The Officers on the other hand are looting the farmers at the time of sanctioning the loans. The Government must solve the difficulties of the farmers and encourage them to grow more food. The concerned Officers must be ordered to behave as the servants and not as the looters and money-lenders. The wells, tanks, Pathbandharas, dams must be constructed wherever necessary. The Government must encourage the social workers who are trying for this in their constituencies. But there are so many cases where the honest workers are disappointed by the cruel and partial

behaviour of the Government policy. There must be some instructions given to local Officers to move the work or any application which comes through the Khadidhars - Congressmen only and reject the others. For example in the border areas of Belgaum, there is no scope to the Marathi Social workers at all to work for the border and to work for the development of the area. Whenever we go to any office, they are purposely neglecting us. The Officers of Mysore must be the servants of the people of the Nation, but especially in Belgaum they are working as the Congress Leaders trying to have Belgaum in Mysore State. They are Congress Pracharaks. This tendency must be stopped immediately. It is the responsibility of the Ruling Party to wipe out this terrible disgrace. All the schemes are full of corruption and nepotism. Before the sanction of the contract of a certain well, tank or dam there is a contract between the Officer and the Contractors and the white capped agent there. Otherwise no scheme though it is useful is sanctioned. For example in Belgaum Taluk there is a Bellary Nala. The flood of this Nala destroys the crops almost every year. It is a great loss. The people are requesting the Government to sanction this scheme for a number of years but it is neglected. I request the Government to undertake this scheme immediately and encourage the peasants to grow more food. The people of Belavatti, B das etc., are starving every year. They have no land. Their land came under the Rakaskop Dam in Belgaum Taluka. The City is far away. So they can not get the work. They have their only empty sheds. The Government had promised to give the nearest forest land. The then Chief Minister should remember his speech at the time of the opening ceremoney of the Belavatti Village and fulfil the promise immediately and give the people an opportunity to live. This promise should be fulfilled immediately because I am not certain that the Congress Ministry will servive for a long time, and definitely it is certain that it will not come into power after next election. Only due to the partial policy the Congress is losing ground and showing hatred in the hearts of the common people. I hope that the result of the election in the country will bring the Congress on the right path. Sir, the Department of Food and Civil Supplies is not working satisfactorily, at all. The distribution arrangements, the quality and quantity of foodgrains they are supplying, are not satisfactory. In Belgaum City I know that the poor people are treated as beggars. They have to stand before the shops for the whole day to get the rice full of small stones and worms. In the rural area there is no provision of rationing as it is in the urban area. There are many landless people in the villages. Their position is very miserable. They have no other way but to starve.

The distribution of sugar also is based on a wrong method. People in the rural area do not get sugar as the people in the urban area get. Why should there be this discrimination in the distribution of sugar?

I want to state about the compulsory collection of levy. It is nothing but drinking the blood of the poor farmers. It is black-marketing done by Government and encouragement to the officers for

(SRI P. B. NANDIHALI)

corruption. Before the collection of the compulsory levy, sufficient number of bags of paddy of the best quality go to the private use of the higher officers and then the big landlords are exempted from the levy. I need not go in detail into this as the Government are aware of this. I request the Government not to take levy from the farmers who have below or three acres of land.

Then Sir, it is said in the Governor's Address that the law and order situation in the State is satisfactory. But in Belgaum there is a special law for the police to suppress the Marathi people only. We the people of Belgaum are not in freedom, but are like prisoners in Mysore State. We are treated here as slaves. In the election of 1957 the Congress used all the worst means. The Police Department played a great part. All the officers started the propaganda of Congress candidates The police officers brought about the unity of goondas, robbers and hatbhattiwalas and blackmarketeers. They gave the ignorant people wine, money and threats. Yet the Maharashtra Ekikaran Samithi got success as it stands for truth, justice and democracy. The Congress Party was using trucks in the villages and in the city for election. After the announcement of the results and the defeat of the Congress, some Congress goondas began to throw stones at the houses of Harijans and the Marathi people in Khasbag. The Marathi people asked the police for protection, but the Police Sub-Inspector of Shahapur did not help the Marathi people, on the contrary he beat the Marathi people cruelly.

Sri S. V. AGNIHOTRI.—On a point of order, Sir. ಇವರು ಮಾನ್ಯ ಚವಾಣರಿಗೂ ಸಂಬಂಧಪಟ್ಟ ವಿಚಾರವನ್ನು ಮಾತನಾಡುತ್ತಿದ್ದಾರೆ. ಅದನ್ನು ಇಲ್ಲಿ ಈ ಮನೆಯೊಳಗೆ ಮಾತನಾಡಬಹುದೇ ?

Mr. SPEAKER.—I will give my ruling later on.

Sri P. B. NANDIHALI.—In Belgaum there is no democracy at all. There is the rule of the Police Department.

Sri R. M. DESAI (Bilgi).—Is the hon'ble member allowed to read his speech ?

Sri P. B. NANDIHALI.—The people and the leaders have demanded the transfer of the Police Sub-Inspector of Shahapur, but the Government have neglected thier request. I sent a telegram to the Hon'ble Home Minister, but he had no time to reply.

Sir, the Governor sang a sweet song about the progress of the Backward Classes. I request all the Ministers and all the leaders to camp at least once in a year in the Harijanwadas. I request the Hon'ble Ministers not to camp in the Rest or Guest Houses but in Harijanwadas or Dombariwadas so that they will understand the economic position and the miserable poverty of the Backward Classes and they will also understand what progress they have made in the last 20 years.

Sri K. H. SRINIVAS (Sagar).—The member is continuously reading his speech perhaps written for him by somebody else and perhaps sent to him from Maharashtra State. He is not allowed to read the speech.

Mr. SPEAKER.—A point of order has been raised here that the hon'ble member is reading the speech written by somebody else. That is not a good suggestion. There are two points, one is reading the speech and the second is to say that the speech was drafted by somebody else. Before raising objection, members must have at least in their own mind something more substantial than throwing out such suggestions. There is no point of order.

Sri P. B. NANDIHALI.—I came to know that the Government has sanctioned this year Rs. 25 per month to each student. It comes to 10 annas per day per student. What kind of good should the management provide in the sum of 10 annas per day? So I request the Government to increase this grant to at least Rs. 50 per student per month.

Mr. SPEAKER.—The time is over. He can preserve his other points for another occasion.

Sri P. B. NANDIHALI.—Lastly, before concluding I want to state about the dictatorship started in Belgaum Municipality. There have been no municipal elections for more than 10 years now. An Administrator is appointed there to murder democracy. Elections are necessary there. I request this hon'ble House to start a movement against this policy of Government not to conduct elections of municipalities and corporations. The municipal election is not going to take place in Belgaum because the Government knows that the Marathi people will then come to power in Belgaum Municipality. The Government knows that the Opposition party there is strong and so elections are not conducted. So I request elections must be conducted.

[Bell was rung]

I will conclude by saying one word about the Maharashtra-Mysore boundary dispute and the appointment of the Mahajan Commission. The Hon'ble Chief Minister has agreed that there is a dispute about the the border area of Belgaum and Karwar District and so he gave his consent to One Man Commission. Maharashtra Ekikaran Samithi has started its continuous movement peacefully for the last eleven years. The period of eleven years of "Vanarasi" to Marathi People is finished and hence the appointments of Mahajan Commission! It is known to all that on this very question the Maharashtra Ekikaran Samithi has succeeded in the elections. The Hon'ble House should admit this and send a report to the Mahajan Commission that Belgaum City with the Marathi villages should be transferred to Maharashtra.

Thank you.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧೀನಗರ).—ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸುವ ನಿರ್ಣಯವನ್ನು ಸಮರ್ಥಿಸುತ್ತಾ, ಒಂದೆರಡು ಮಹತ್ವ ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಬೆಂಗಳೂರಿನ ಅಂದ, ಚಂದ, ಆರೋಗ್ಯ ಅಭಿವೃದ್ಧಿಗೆ-ಶತ್ರುವಿನಂತಿರುವ ಕೊಳಚೆ ಪ್ರದೇಶ ನಿರ್ಮೂಲದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಬೇಕಾಗಿತ್ತೆಂದು ನನ್ನ ಭಾವನೆ. ರಾಜ್ಯಪಾಲರು ಬೆಂಗಳೂರಿನ ಕೊಳಚೆ ಪ್ರದೇಶಗಳನ್ನು ಪರಿಶೀಲಿಸಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಕೊಳಚೆ ಪ್ರದೇಶಗಳನ್ನು

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ರಾಜ್ಯಪಾಲರು ಒಮ್ಮೆ ವಿಮರ್ಶಿಸಿದಾಗ ಇಲ್ಲಿ ನನ್ನ ನಾಯಿಯನ್ನೂ ವಾಸಮಾಡಲು ಬಿಡಲಾರೆ, ಎಂದು ಕಳಕಳಿಯಿಂದ ಹೇಳಿ, ಆ ಪ್ರದೇಶದ ಜನತೆ ಬಗ್ಗೆ ಕರುಣತೆಯನ್ನೂ ತೋರಿಸಿದ್ದನ್ನೂ ಜನತೆ ಮರೆಯಲಾರದು. ಕೊಳಚೆ ಪ್ರದೇಶಗಳು ಬೆಂಗಳೂರಿಗೆ ಕರುಳಿನ ಹುಣ್ಣಿದ್ದಂತೆ. ಆ ಪ್ರದೇಶಗಳಲ್ಲಿ ಮಾನವರು ಮೃಗಗಳೋಪಾದಿಯಲ್ಲಿ ವಾಸಿಸುತ್ತಿದ್ದಾರೆ. ಖಾಲಿ ಸ್ಥಳ ಸರ್ಕಾರದ್ದೇ ಇರಲಿ, ಖಾಸಗಿಯವರದ್ದೇ ಇರಲಿ, ಮಠ ದೇವಸ್ಥಾನಗಳಿಗೇ ಸೇರಿರಲಿ, ಬೆಂಗಳೂರಿಗೆ ವಲಸೆ ಬಂದವರು ಗುಡಿಸಲುಗಳನ್ನು ಕಟ್ಟಿಕೊಂಡು ತಮ್ಮ ಹಕ್ಕುಬಾಧ್ಯತೆ ಕಲ್ಪಿಸಿಕೊಳ್ಳುತ್ತಿದ್ದಾರೆ. ಒಂದು ವೇಳೆ ಒಂದು ಕೊಳಚೆ ಪ್ರದೇಶದವರಿಗೆ ಸ್ಥಳ ಒದಗಿಸಿ ಕೊಟ್ಟರೆ, ಆ ಜಾಗ ಮಾರಿಕೊಂಡು ಮತ್ತೆ ಖಾಲಿ ಇರುವ ಜಾಗದಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳುತ್ತಾರೆ. ಸರ್ವತಂತ್ರ ಸ್ವತಂತ್ರತೆ ಏನಾದರೂ ಇದ್ದರೆ ಆ ಕೊಳಚೆ ಪ್ರದೇಶಗಳಲ್ಲಿ ಮಾತ್ರ ಇರುತ್ತದೆ. ಕಾರ್ಪೋರೇಷನ್, ನಗರಾಭಿವೃದ್ಧಿ ಮಂಡಲಿ ಮೇಲಾಗಿ ಸರ್ಕಾರ ವಿಚಾರ ಮಾಳ್ಪಿನಂತೆ ಅನಧಿಕೃತವಾಗಿ ಬೆಂಗಳೂರಿನ ಹೃದಯ ಮಧ್ಯದಲ್ಲಿ ಹುಟ್ಟಿರುವ, ಹಬ್ಬುತ್ತಿರುವ ಈ ಕೊಳಚೆ ಪ್ರದೇಶಗಳ ಸರ್ವತಂತ್ರ ಸ್ವತಂತ್ರತೆಯನ್ನು ನೋಡಿಕೊಂಡು ಕೈಕಟ್ಟಿ ಕುಳಿತುಕೊಂಡರೆ ಅನಾಹುತವಾಗುತ್ತದೆ. ಗಾಂಧೀನಗರದಲ್ಲಿರುವ, ತಿಪ್ಪಶೆಟ್ಟಿ ಮಠ, ಶಿವಾಲಯ ಟಾಕೀಸ್, ಟ್ಯಾಂಕ್ ಬಂಡ್ ರೋಡಿನ ಪಕ್ಕದಲ್ಲಿರುವ ಲಕ್ಷ್ಮಣಪುರಿ, ಶ್ರೀರಾಮಪುರದ ಅನೇಕ ಕೊಳಚೆ ಪ್ರದೇಶಗಳನ್ನು ನೋಡಿ ಅಯ್ಯೋ ದೇವರೇ, ಬೆಂಗಳೂರಿನ ಗತಿ ಏನಪ್ಪಾ? ಎಂಬುವಂತಿದೆ. ಕೆಂಪೇಗೌಡನೇನಾದರೂ ಬಂದು ಕನ ಡಾಂಬೆಯನ್ನು, ಕುರಿತು "ನಿನಗೇಕೆ ವ್ಯಥೆ ಏನಾಯಿತಮ್ಮ" ಎಂದು ಕೇಳಿದರೆ, ನಾನಿಲ್ಲಿ ಪರದೇಶಿಯಾದೆ ಎಂದು ಹೇಳುತ್ತಾಳೆ.

4·00 P.M.

ಬೆಂಗಳೂರಿನ ಅಂದಚೆಂದ ಕೆಡಲು ಬಹುಮಟ್ಟಿಗೆ ಹಲವಾರು ಕಾರ್ಪೋರೇಟರುಗಳೇ ಕಾರಣ. ಅಕ್ರಮ ಅನ್ಯಾಯ ಭ್ರಷ್ಟಾಚಾರ ವಗೈರೆಗಳಿಗೆಲ್ಲಾ ಬೆಂಗಳೂರು ಕಾರ್ಪೋರೇಷನ್ ಮಾತೃಸ್ಥಾನವಾಗಿತ್ತು. ದುಷ್ಕೃತ್ಯಗಳ ಅಧಿದೇವತೆ ಏನಾದರೂ ಕಲಿಯುವುದು ಉಳಿದಿದ್ದರೆ ಬೆಂಗಳೂರು ಕಾರ್ಪೋರೇಷನ್ನಿನಲ್ಲಿ ತರಬೇತಿ ತೆಗೆದುಕೊಳ್ಳಬೇಕಾಗಿತ್ತು. ಬೆಂಗಳೂರಿನಲ್ಲಿ ಕಟ್ಟಿರುವ ಅನಧಿಕೃತ ಕಟ್ಟಡಗಳು ನಿವೇಶನಗಳ ಅನಧಿಕೃತ ಆಕ್ರಮಣಗಳು, ಹಿಂದೂ ದೇಶದ ಇನ್ಯಾವ ನಗರಗಳಲ್ಲಿಯೂ ನಡೆದಿಲ್ಲವೆಂದು ಹೇಳಬಹುದು. ಮನೆ ಅಂಗಡಿಗಳ ಒಡೆಯರಿಗೆ ಫುಟ್‌ಪಾತನ್ನು ಸಹ ಕೊಡಿಸಿ ಅವರಿಂದ ಹೇರಳವಾದ ಸಂಭಾವನೆ ಪಡೆದವರೂ ಇದಾರೆ. ಟ್ರಸ್ಟ್ ಬೋರ್ಡಿನ ಸದಸ್ಯರಾಗಿ ಅಂಧಕಾರ್ ದರ್ಬಾರ್ ನಡೆಸಿ ಲಕ್ಷಾಂತರ ಆಸ್ತಿಪಾಸ್ತಿ ಮಾಡಿಕೊಂಡ ಮಹನೀಯರೂ ಉಂಟು. ಹೀಗೆ ಕಾರ್ಪೋರೇಷನ್ ಭ್ರಷ್ಟಾಚಾರದ ತವರ್ಮನೆಯಾಗಿತ್ತು. ಅಂತಹದನ್ನು ಸೂಪರ್‌ಸೀಡ್ ಮಾಡಿದರೆ ಪ್ರಜಾಪ್ರಭುತ್ವದ ಕೊಲೆಯೆಂದು ಗದ್ದಲ ಹಾಕುವ ಮಹನೀಯರೂ ಉಂಟು. ಕಾರ್ಪೋರೇಷನ್ನಿನ ಕೆಲವು ಅಧಿಕಾರಿಗಳ, ಹಲವು ಕಾರ್ಪೋರೇಟರುಗಳ ಅನ್ಯಾಯ ಅಕ್ರಮಗಳ ಬಗ್ಗೆ ತನಿಖಾ ಮಂಡಳಿ ಏರ್ಪಟ್ಟರೆ ಹತ್ತು ವರ್ಷಗಳ ಕಾಲ ಕಠಿಣ ಶಿಕ್ಷೆಯಾಗುವವರನ್ನು ಕಂಡು ಹಿಡಿಯಬಹುದು. ಇಂಥ ಮಹಾಶಯರುಗಳ ದೆಶೆಯಿಂದ ಬೆಂಗಳೂರಿನ ಗತಿ ಏನಾಗಿದೆ ಎಂದರೆ "ಬೆಂಗಳೂರಿನ ಕಥೆಯ ಕೇಳಬಲ್ಲಿರ ನೀವು. ಇದು ನಮ್ಮ ಕನ್ನಡದ ಗಂಡುಮೆಟ್ಟು ನೆಮ್ಮದಿಯ ಬಾಳುವೆಗೆ ನಮಗೆ ಇಂಬಿಲ್ಲ. ಬೇರೆಯವರ ಕೈಯಲ್ಲಿದೆ ನಮ್ಮ ಜುಟ್ಟು". ಹೀಗಾಗುತ್ತಿದೆ. ನಾವು ಪರದೇಶಿಗಳಾದೇವು ಈಗಲೇ ಈ ಬಗ್ಗೆ ಸರ್ಕಾರ ಎಚ್ಚರಿಕೆ ಸೂಕ್ತಕ್ರಮ ಕೈಗೊಳ್ಳದಿದ್ದರೆ ಬೆಂಗಳೂರು ಸರ್ವತಂತ್ರ ಸ್ವತಂತ್ರ ಕಲಬೆರಕೆ ನಗರವಾಗುತ್ತದೆಂಬುದನ್ನು ಹೇಳಬಯಸುತ್ತೇನೆ. ಕೋಟಿಗಟ್ಟಲೆ ಹಣ ಖರ್ಚಾದರೂ ಚಿಂತೆಯಿಲ್ಲ ಬೆಂಗಳೂರಿನ ಕನ್ನಡತನವನ್ನು ಉಳಿಸಬಲ್ಲ ಸರ್ವಾಧಿಕಾರಿಯನ್ನು ನೇಮಿಸಿದರೂ ಚಿಂತೆಯಿಲ್ಲ. ಏನಾದರೂ ಸರಿಯೆ ಕೊಳಚೆ ಪ್ರದೇಶ ನಿರ್ಮೂಲವಾಗಬೇಕು. ಕನ್ನಡನಾಡಿನ ಕನ್ನಡತನ ಉಳಿಸಬೇಕೆಂದು ಕಳಕಳಿಯಿಂದ ವಿನಂತಿಸುತ್ತೇನೆ. ಇನ್ನು ದೇಶದ ಜನಸಂಖ್ಯೆಯಲ್ಲಿ ಅರ್ಧಭಾಗದಷ್ಟಿರುವ ಮಹಿಳೆಯರ ಉನ್ನತಿಯ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸದಿದ್ದರೆ ಚೆನ್ನಾಗಿತ್ತು. ನಮ್ಮ ನಾಣ್ನುಡಿ ಏನು ಮಾತೃದೇವೋಭವ, ಆಮೇಲೆ ಪಿತೃದೇವೋಭವ, ಹಿಗಿವೆ. ವಿದ್ಯಾವಂತ ಮಹಿಳೆಯರಿಗೆ ಉದ್ಯೋಗ ಸ್ಥಾನಮಾನಗಳ ಬಗ್ಗೆ ಸಾಕಷ್ಟು ಪ್ರಾತಿನಿಧ್ಯ ಕೊಡಲು ಮರೆಯಬೇಡಿರೆಂದು ವಿನಂತಿಸುತ್ತೇನೆ. ಪರೀಕ್ಷಾರ್ಥವಾಗಿಯಾದರೂ ಒಬ್ಬ ಮಹಿಳೆಯರಿಗೆ ನ್ಯಾಯಾಧಿಕಾರಿಗಳ ಕೆಲಸ ಮತ್ತೆ ಪಬ್ಲಿಕ್ ಸರ್ವಿಸ್ ಕಮಿಷನ್ ಇವುಗಳಲ್ಲಿ ನೇಮಕ ಮಹಿಳೆಯರಿಗೆ ಅವಕಾಶ ಕೊಡಿ ಎಂದು ಹೇಳುತ್ತಿದ್ದೇನೆ. ಇನ್ನೂ ಸರ್ಕಾರ ಮನಸ್ಸು ಮಾಡಿಲ್ಲ. ಇನ್ನು ಮೇಲಾದರೂ ಗಮನದಲ್ಲಿಡುವರೆಂದು ಜ್ಞಾಪಿಸುತ್ತೇನೆ. ಶೇಕಡ ಇಂತಿಷ್ಟು ಕೆಲಸಗಳು ಮಹಿಳೆ

ಯರಿಗಿಂತಲೇ ಮೀಸಲಾಗಿಡಬೇಕೆಂತಲೂ ಈ ಪ್ರಸಂಗದಲ್ಲಿ ಒತ್ತಾಯಪಡಿಸುತ್ತೇನೆ. "ತೊಟ್ಟಿಲು ತೂಗುವ ಕೈ ರಾಷ್ಟ್ರವನ್ನೂ ತೂಗಬಲ್ಲದು" ಎಂಬ ವಾಕ್ಯವನ್ನು ಸರ್ಕಾರ ಮರೆತರೆ ಮಹಿಳಾ ವರ್ಗಕ್ಕೆ ಅಪಕಾರ ಮಾಡಿದಂತೆ ಎಂದು ಹೇಳಬೇಕಾಗುತ್ತದೆ. ಮಹಿಳಾ ವರ್ಗದ ಬಗ್ಗೆ ಸರ್ಕಾರ ಹೆಚ್ಚು ಹೆಚ್ಚು ಆಸಕ್ತಿ ವಹಿಸಬೇಕೆಂದು ವಿನಂತಿಸುತ್ತೇನೆ. ಇಂದು ನಮ್ಮ ಸರ್ಕಾರದ ಪರಿಸ್ಥಿತಿ ಹೇಗಿದೆ? ನಮ್ಮ ದೇಶದ ಪರಿಸ್ಥಿತಿ ಹೇಗಿದೆ? ಎಂಬುದನ್ನು ಸ್ವಲ್ಪ ಕಿವಿಗೊಟ್ಟು ಕೇಳಿ. ಇಂದು ವಿಧಾನ ಸಭೆಯ ಸದಸ್ಯರ ಪರಿಸ್ಥಿತಿ ಹೇಗಿದೆ! ಸ್ವಲ್ಪ ಕಣ್ಣು ಬಿಟ್ಟು ನೋಡಿ! ದೇಶದಲ್ಲಿ ನಾವು ಏನನ್ನು ಕಾಣುತ್ತಿದ್ದೇವೆ, ಹೇಳಬಲ್ಲಿರಾ ಎಂದು ಕೇಳಿದರೆ, ಓಹೋ ಹೇಳಬಲ್ಲೆ, ಒಂದು ಪಕ್ಷದಲ್ಲಿದ್ದಾಗ ಒಂದು ಭಾಷಣ, ಮತ್ತೊಂದು ಪಕ್ಷಕ್ಕೆ ಹೋದಾಗ ಮತ್ತೊಂದು ಭಾಷಣ. ಹೀಗೆ ನಾನಾ ರೀತಿಯ ಭಾಷಣಗಳನ್ನು ವೇಷ ಬದಲಾವಣೆಗಳನ್ನು ನೋಡುತ್ತಿದ್ದೇವೆಂದು ಯಾರಾದರೂ ಉತ್ತರ ಕೊಡಬಲ್ಲರು. ಅದೇ ರೀತಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಕಳೆದ ಎರಡು ಮೂರು ದಿವಸಗಳಿಂದಲೂ ಚರ್ಚೆಯಾಗುತ್ತಿದೆ. ಅದರಲ್ಲಿಯೂ ಭ್ರಷ್ಟಾಚಾರದ ಬಗ್ಗೆ ಅರಿತು, ನುರಿತ ಮಾನ್ಯ ಸದಸ್ಯ ಸೋದರ ಚೆನ್ನಬಸಪ್ಪನವರು, ತುಂಬಾ ಸ್ವಾರಸ್ಯವಾಗಿ ಘಂಟೆಗಳ ಕಾಲ ಮಾತನಾಡಿದ್ದಾರೆ ಮಾತನಾಡಿದಂತೆ ಎಲ್ಲರೂ ನಡೆದರೆ ಇದೀ ಪ್ರಪಂಚವೇ ರಾಮರಾಜ್ಯವಾಗುತ್ತಿದ್ದಿತು. ಇಲ್ಲ ಹಾಗಾಗುವುದಿಲ್ಲ, 'ಲೋಕೋಭಿನ್ನರುಚಿಃ' ಇರುವುದರಿಂದ ಲೋಕ ಮೆಚ್ಚಿ ನಡೆಯುವುದು ಮಾನ್ಯ ಚೆನ್ನಬಸಪ್ಪನವರಿಂದಲೂ ಸಾಧ್ಯವಾಗದ್ದರಿಂದ, ಮಾನ್ಯ ಸದಸ್ಯರಾದ ಚೆನ್ನಬಸಪ್ಪನವರು ಲೋಕಾಭಿರಾಮವಾಗಿ ಮಾತ್ರ ಮಾತನಾಡಿದ್ದಾರೆಂದು ನಾನು ಭಾವಿಸಿದ್ದೇನೆ.

"ಪ್ರಜಾಪ್ರಭುತ್ವದಲ್ಲಿ ಯಾರು ತಾಭ್ರಷ್ಟ,
ವಾದಿಯೋ ಪ್ರತಿವಾದಿಯೋ ಹೇಳುವುದೆ ಕಷ್ಟ,
ಈ ಇಬ್ಬರಲಿ ಜಗಳ ಬಂದರೆ ಮಾತ್ರ ಸ್ಪಷ್ಟ,
ರಾಜಿಯಾದರೆ ಅವರು ಸತ್ಯವೇ ನಷ್ಟ."

ಎಂದು ಬಲ್ಲವರು ಹೇಳಿದ್ದಾರೆ. ಈಗ ಮಾನ್ಯ ಸದಸ್ಯರಾದ ಚೆನ್ನಬಸಪ್ಪನವರು ವಾದಿ, ಸರ್ಕಾರ ಪ್ರತಿವಾದಿ. ನಿರ್ದಿಷ್ಟ ವಿಚಾರವಿದ್ದರೆ ಬೆಳಕಿಗೆ ಬರಲಿ ಎಂದು ನಾನೂ ಕುತೂಹಲಕಾರಿಯಾಗಿದ್ದೇನೆ.

ನಾವು ರಾಜಕಾರಣಿಗಳು, ನಮ್ಮ ಜೀವಿತ ವಿಮರ್ಶೆಯನ್ನು ಮೊದಲು ಮಾಡಿಕೊಳ್ಳಬೇಕು. ನಮಗಿಂತಲೂ ಜನಸಾಮಾನ್ಯರಲ್ಲಿ ಪ್ರಾಮಾಣಿಕತೆ ಉಂಟು. ಜನತೆ ದೇವರಾದರೆ ರಾಜಕಾರಣಿಗಳು ಪೂಜಾರಿಗಳು. ದೇವರ ಅಸ್ತಿತ್ವ ಪೂಜಾರಿಯ ಕೈಯಲ್ಲಿರುತ್ತದೆ. ಕಾರಣ ನಾವು "ಏಕೇನ ಪ್ರಕಾರೇಣ ಪ್ರಸಿದ್ಧೋಪುರುಷೋಭವ" ಎಂಬಂತೆ ವರ್ತಿಸಬಾರದೆಂಬುದು ಎಲ್ಲರೂ ಒಪ್ಪುವ ವಿಚಾರವೆಂದು ತಿಳಿದಿದ್ದೇನೆ. ಅಂತೆಯೇ——

"ನಿನ್ನ ಬುದ್ಧಿಯ ನೀನು ಹಿಡಿತದಲ್ಲಿಟ್ಟಿರಲು,
ನಿನಗೆ ನೀನೇ ನೀನು ಅನುಮಾನವಿಲ್ಲ,
ನೀನು ನೀನೆರಡಾಗಿ ನಿನ್ನೊಳಗೆ ಕಿತ್ತಾಡಿ,
ನಿನ್ನತನ ಗೆದ್ದಾಗ ನಿನಗೆ ಸಮರಿಲ್ಲ."

ಎಂದು ಬಲ್ಲವರು ಹೇಳಿರುವುದನ್ನು ನಾವು ರಾಜಕಾರಣಿಗಳು ಅನುಷ್ಠಾನಕ್ಕೆ ತಂದರೆ ಎಲ್ಲರಿಗೂ ಒಳಿತಾಗುವುದೆಂದು ನನ್ನ ಭಾವನೆ.

ಭ್ರಷ್ಟಾಚಾರದ ಬಗ್ಗೆ ಮಾನ್ಯ ಸದಸ್ಯ ಸೋದರ ಚೆನ್ನಬಸಪ್ಪನವರು ಸರ್ಕಾರದ ಮೇಲೆ ಸವಾಲ್ ಹಾಕಿ ಕುಸ್ತಿಯ ಅಖಾಡಕ್ಕೆ ಇಳಿದಿದ್ದಾರೆ. ಈ ವಿಚಾರದಲ್ಲಿ ಜಗಜಟ್ಟಿ ಎಂಬ ಭಾವನೆ ಅವರಿಗೆ ಇದ್ದಂತೆಂದು ಕಾಣುತ್ತದೆ. ಇವರನ್ನು ಸೋಲಿಸಲು ಕಿರಿಜಟ್ಟಿ ಮಾನ್ಯ ಜತ್ತಿಯವರಂತಹವರೂ ಈ ಕಡೆ ಇದ್ದಾರೆ ಎಂಬುದನ್ನು ಮರೆಯಬಾರದು. ಇವರ ವರಸೆ, ಪಟ್ಟು, ಕಟ್ಟುಗಳೆಲ್ಲಾ ಅವರಿಗೆ ಗೊತ್ತುಂಟೆಂದು ನನ್ನ ಭಾವನೆ.

ಮಾನ್ಯ ಸೋದರ ಸದಸ್ಯರಾದ ಚೆನ್ನಬಸಪ್ಪನವರು ತುಂಬಾ ಕಷ್ಟಪಟ್ಟು ಭ್ರಷ್ಟಾಚಾರದ ಬಗ್ಗೆ ಅಧಿಕೃತವೋ—ಅನಧಿಕೃತವೋ, ಅದು ಮುಂದೆ ನಿರ್ಣಯವಾಗುವ ವಿಚಾರ, ಅಂತೂ ವಿಷಯ ಸಂಗ್ರಹಿಸಿದ್ದಾರೆ. ಶರಾವತಿಯ ಮಸ್ತಿಗೆ ಹೇಗೆ ಕನ್ನ ಕೊರೆದಿದ್ದಾರೆ! ಕೃಷ್ಣೆ, ಕಾವೇರಿಯರ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಕನ್ನಡ ನಾಡಿನ ನೀರಿನ ಪಾಲು ಹೇಗೆ ಬೇರೆಯವರು ತೆಗೆದುಕೊಂಡು ಅನ್ಯಾಯ ಮಾಡಿದ್ದಾರೆ! ಈ ಅನ್ಯಾಯಕ್ಕೆಲ್ಲಾ ಈಗಿನ ಸರ್ಕಾರವೇ ಹೊಣೆ ಎಂದು ಹೇಳಿದ್ದಾರೆ. ಶರಾವತಿ, ಕೃಷ್ಣೆ, ತುಂಗಭದ್ರಾ ಕಾವೇರಿಯರ ಬಗ್ಗೆ ವಿಷಯ ಸಂಗ್ರಹಿಸಿರುವ ಮಾನ್ಯ ಚೆನ್ನಬಸಪ್ಪನವರು ಆ ವಿಚಾರದಲ್ಲಿ ತಾಂತ್ರಿಕ ತಜ್ಞರೆಂದೇ ಹೇಳಬಹುದು. ಇದಕ್ಕೆ ಪರಿಹಾರವನ್ನು ತಜ್ಞರಾದ ಚೆನ್ನಬಸಪ್ಪನವರೇ ಕಂಡುಹಿಡಿದು ಈ ಎರಡನೆ ಮಹಾಯುದ್ಧದ ಕಷ್ಟವನ್ನು ಪರಿಹರಿಸಬೇಕೆಂದು ಅಪೇಕ್ಷಿಸುತ್ತೇನೆ. ಸರ್ಕಾರದವರೂ ಸಹ ಈ ಬಗ್ಗೆ ಬೆಂಬಲ ಕೊಟ್ಟಿಲ್ಲ ಯಾವ ಯಾವ ಮಂತ್ರಿಮಂಡಲದ ಆಡಳಿತದಲ್ಲಿ ಎಷ್ಟೆಷ್ಟು ಅಕ್ರಮಗಳಾಗಿವೆ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಮಾನ್ಯ ಸದಸ್ಯರಾದ ಚೆನ್ನಬಸಪ್ಪನವರು ಮಂತ್ರಿಮಂಡಲದಲ್ಲಿದ್ದಾಗ ಆ ಮಂತ್ರಿಮಂಡಲದ ಮೇಲೆ ಆಪಾದನೆ ಮಾಡಿದವರಲ್ಲ ಏನೂ ಭಂಗ ಯಾಗಿದ್ದೆ. ಅಕ್ರಮ, ಅನ್ಯಾಯಗಳ ಪರಂಪರೆಯನ್ನು ಅಂಕಿಸಂಖ್ಯೆಗಳ ಮೂಲಕ ಇಟ್ಟಿದ್ದೆ. ಈಗಲೂ ಇವೆ.

ಶ್ರೀ ಎಸ್. ಶಿವಪ್ಪ.—ಅಂಕಿಸಂಖ್ಯೆಗಳನ್ನು ಹೇಳಿ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಅಂಕಿ ಸಂಖ್ಯೆಯನ್ನು ಇಟ್ಟಿದ್ದೇನೆ. ಪ್ರಸಂಗ ಬಂದಾಗ ಹೇಳುತ್ತೇನೆ. ಒಬ್ಬ ಮಂತ್ರಿ ಉಪಮಂತ್ರಿಗಳು ತಾವೇ ತಲೆವಾಗಿ ಮೆರೆದು ಅಹಂಭಾವದಿಂದ ದೇಶದಲ್ಲ ಅಶಾಂತಿಯುಂಟಾಗುವ ಪರಿಸ್ಥಿತಿ ತಂದೊಡ್ಡಿದರು. ಮಹಿಳಾ ಶಾಸಕರು ರಕ್ಷಣೆ ಕೇಳ ಬೇಕಾಯಿತು. ಅವರ ಮಂತ್ರಿಮಂಡಲ ಮೊಗಲಾಯಿ ಆಡಳಿತದ ಸ್ಮರಣೆ ತರುವಂತೆ ಇದ್ದಿತು. ಹೀಗಿದ್ದರೂ ಆ ಮಂತ್ರಿಮಂಡಲ ಆಪಾದನೆಗಳಿಂದ ಮುಕ್ತತೆ ಹೊಂದಲಿಲ್ಲ. ರಾಜಿ ಸಂಧಾನದಿಂದ ಮಂತ್ರಿಮಂಡಲ ವಿಸ್ತರಿಸಿಕೊಂಡರು. ತನ್ನ ಎಲೆಯಲ್ಲಿ ಹೆಗ್ಗಣ ಸತ್ತು ಬಿದ್ದಿರುವಾಗ ಮತ್ತೊಬ್ಬರ ಎಲೆಯಲ್ಲಿ ನೊಣ ಬಿದ್ದದ್ದಕ್ಕೆ ಆಂದೋಲನ ಮಾಡಿದಂತೆ, ಮಾನ್ಯ ಚೆನ್ನಬಸಪ್ಪನವರು ಆಂದೋಲನಕ್ಕೆ ಹೊರಟಿದ್ದಾರೆ. ಜನತೆ ದಡ್ಡರಲ್ಲ, ಕಣ್ಣಿದೆ, ಕಿವಿಯಿದೆ, ಬುದ್ಧಿ ಇದೆ. ಅವರು ಏನೇನು ಮಾಡಿದರೆಂದು ಅರ್ಥ ಮಾಡಿಕೊಳ್ಳಬಲ್ಲರು. ಇಂತಹ ವಾದ ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿ ದಂತಾಗುತ್ತದೆ. ನಾನು ಇಷ್ಟು ಮಾತ್ರ ಹೇಳಬಲ್ಲೆ:

"ಉರಿಯುತಿರೆ ಹೊಟ್ಟೆ ಕಿಚ್ಚಾರಿಸಲು ನೀರೆಲ್ಲಿ,
ನರಕದಡಿಯಲ್ಲಿ ನೆಲಸೆ ನಿದ್ದೆಗೆಡೆಯಲ್ಲಿ,
ಹೆರಸಲಪ್ಪುದೆ ನರರ ಮಚ್ಚರಿಯ ಸಂಕಟವ,
ಕರುಬಿದನ ಹರಿಪೊರೆಗೆ ಮಂಕುತಿಮ್ಮ"

ಎಂದು ಹೇಳಿ, ಅಧ್ಯಕ್ಷರು ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ನನ್ನ ಮುಖ ನೋಡಿ ಅವರು ಮಂಕುತಿಮ್ಮ ಅಂದರು, ನನಗೆ ಬೇಸರವಾಯಿತು. (ನಗು).

†ಶ್ರೀ ಎಂ. ನಾಗಪ್ಪ (ರಾಯಚೂರು).—ಮಾನ್ಯ ಅಧ್ಯಕ್ಷರೇ, ಮತ್ತು ಮಾನ್ಯ ಸದಸ್ಯರೇ, ಮುಖ್ಯವಾಗಿ ರಾಯಚೂರು, ಹೈದರಾಬಾದ್ ಸಂಸ್ಥಾನದಲ್ಲಿದ್ದು ಸ್ವಾತಂತ್ರ್ಯ ಬಂದನಂತರ, ಅಂದರ, 1956 ರಲ್ಲಿ ಮೈಸೂರು ರಾಜ್ಯಕ್ಕೆ ಸೇರಿದೆ. ನಿಜಾಮರ ಕಾಲದಲ್ಲಿ ರಾಯಚೂರು ಬೆಳವಣಿಗೆ ಯಾಗುತ್ತಿತ್ತು. ಆದರೆ ಈ ಕಾಂಗ್ರೆಸ್ ಸರ್ಕಾರ ಬಂದ ಮೇಲೆ, ಇವರ ಕೈಯಲ್ಲಿ ರಾಯಚೂರಿನಲ್ಲಿ ಯಾವ ಅಭಿವೃದ್ಧಿಯೂ ಆಗಿಲ್ಲ. ಏಕೆಂದರೆ, ವಿದ್ಯಾ ದೃಷ್ಟಿಯಿಂದ ನೋಡಿದರೆ, ರಾಯಚೂರಿನಲ್ಲಿ ಹೆಂಗಸರದ್ದು ಎರಡು ಪರ್‌ಸೆಂಟ್ ಇದೆ, ಗಂಡಸರದ್ದು 13 ಪರ್‌ಸೆಂಟ್ ಇದೆ. ಸ್ಕೂಲ್‌ಗಳಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಈಗ ರಾಯಚೂರಿನಲ್ಲಿ 14-15 ಶಾಲೆಗಳಿದ್ದರೂ ಸಹ, ಒಂದು ಅಥವಾ ಎರಡು ಶಾಲೆಗಳನ್ನು ಬಿಟ್ಟರೆ ಉಳಿದವಕ್ಕೆ ಸ್ವಂತ ಕಟ್ಟಡಗಳೇ ಇಲ್ಲ. ಇಡೀ ರಾಯಚೂರು ಜಿಲ್ಲೆಯಲ್ಲಿ 10 ತಾಲ್ಲೋಕುಗಳಿದ್ದು, ಎರಡು ಮಾತ್ರ ಹೈಸ್ಕೂಲ್‌ಗಳು ಹೆಂಗಸರಿಗಾಗಿ ಇವೆ. ಅವಕ್ಕಿಂತ ಹೆಚ್ಚು ಹೈಸ್ಕೂಲ್‌ಗಳು ಹೆಂಗಸರಿಗಾಗಿ ಇಲ್ಲ. ಅವೂ ಅಲ್ಲದೆ ರಾಯಚೂರು ಜಿಲ್ಲೆಯ ತುಂಗಭದ್ರಾ ಪ್ರಾಜೆಕ್ಟ್ ಬಳಿ ವ್ಯವಸಾಯದ ಕಾಲೇಜು ಒಂದನ್ನು ಕೇಳಿದ್ದೆವು. ಮಾನ್ಯ ರಾಜ್ಯಪಾಲರು ಅಲ್ಲಿಗೆ ದಯಮಾಡಿಸಿದ್ದಾಗ ಕೊಡಿಸುತ್ತೇವೆಂದು ವಾಗ್ದಾನ ಮಾಡಿದ್ದರು. ಆದರೆ ಆ ವಿಷಯ ಯಾವ ಕಾರ್ಯರೂಪಕ್ಕೂ ಇದುವರೆಗೆ ಬಾರದಿರುವುದು ವಿಷಾದಕರ.

ಅಲ್ಲಿ ನೀರಾವರಿ ಯೋಜನೆಗಳಿಗೆ ಹೆಚ್ಚು ಸೌಲತ್ತಿದೆ. ಆದುದರಿಂದ ಅಗ್ರಿಕಲ್ಚರ್ ಕಾಲೇಜನ್ನು ಅಲ್ಲಿ ಸ್ಥಾಪಿಸಬೇಕೆಂದು ಸೂಚಿಸುತ್ತೇನೆ. ಅಲ್ಲದೆ ರಾಯಚೂರು ವಿದ್ಯೆಯಲ್ಲಿ ಹಿಂದೆ ಬಿದ್ದಿರುವುದಕ್ಕೆ ಕಾರಣ ಅಲ್ಲಿ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಸರಕಾರಿ ಕಾಲೇಜು ಒಂದೂ ಇಲ್ಲ. ಹೈದರಾಬಾದ್ ಭಾಗ ಸ್ವಲ್ಪ ಆಂಧ್ರದಲ್ಲಿ ಸೇರಿದೆ, ಅಲ್ಲಿ ಎರಡು ಮೆಡಿಕಲ್ ಕಾಲೇಜುಗಳಿವೆ, ಅವುಗಳಲ್ಲಿ ಆಂಧ್ರದವರಿಗೆ ಇಷ್ಟು ಸ್ಥಾನಗಳನ್ನು ಕೊಡಬೇಕೆಂದು ಕಾನೂನು ಮಾಡಿದ್ದಾರೆ. ಆ ರೀತಿಯ ಸೌಲತ್ತನ್ನು ಮೈಸೂರಿನ ರಾಯಚೂರು, ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಗಳವರಿಗೆ ಒದಗಿಸಿಲ್ಲ. ಇದಲ್ಲದೆ ಗುಲ್ಬರ್ಗದ ಮೆಡಿಕಲ್ ಕಾಲೇಜಿನಲ್ಲಿ ಆಂಧ್ರದವರೇ, ಶೇಕಡ 80 ಮಂದಿ ಇದ್ದಾರೆ, ನಮ್ಮ ಜಿಲ್ಲೆಯವರಿಗೆ ಸಾಕಷ್ಟು ಸ್ಥಾನಗಳು ದೊರೆತಿಲ್ಲ. ಇದಕ್ಕೇನು ಕಾರಣವೋ ತಿಳಿಯದು. ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ರಾಯಚೂರು ಜಿಲ್ಲೆಯಲ್ಲಿ ಒಂದು ಶಾಲೆಯಿದೆ. ಅದನ್ನು ಬಿಟ್ಟರೆ ಟೆಕ್ನಿಕಲ್ ವಿದ್ಯಾಶಾಲೆ ಅಲ್ಲಿ ಯಾವುದೂ ಇಲ್ಲ. ಕೈಗಾರಿಕೆ ವಿಚಾರ ಹೇಳಬೇಕಾದರೆ ಒಂದು ಕಾರ್ಖಾನೆ ಸ್ಥಾಪಿಸಬೇಕೆಂದು ಸಾಧಾರಣವಾಗಿ 8—10 ವರ್ಷಗಳಿಂದ ಕೇಳುತ್ತಿದ್ದೇವೆ. ಆದರೆ ಆ ಕಾರ್ಖಾನೆಯನ್ನು ಇನ್ನೂ ಪ್ರಾರಂಭಿಸಿಲ್ಲ. ಇದುವರೆಗೆ ಅದು ಆಗಬೇಕಾಗಿತ್ತು. ಆದರೆ ನಿಜಲಿಂಗಪ್ಪನವರು ಬಾಗಲಕೋಟೆಯಿಂದ ಆರಿಸಿ ಬಂದನಂತರ ಅದನ್ನು ಹಿಂದಕ್ಕೆ ಹಾಕಿದರು. ಮೊನ್ನೆ ಮುಖ್ಯಮಂತ್ರಿಗಳಿಗೆ ರಾಯಚೂರಿನವರು ಕಲಿಯುಗದ ಉತ್ತರ ಎಂದು ಬಿರುದು ಕೊಟ್ಟಿದ್ದಾರೆ. ಇಡೀ ಆ ಜಿಲ್ಲೆಯಲ್ಲಿ ಸಣ್ಣದಾಗಲಿ ಅಥವಾ ದೊಡ್ಡದಾಗಲಿ ಯಾವ ಕೈಗಾರಿಕೋದ್ಯಮವೂ ಇಲ್ಲ. ಅಲ್ಲಿ ಸುಮಾರು 20 ಸಾವಿರ ಜನರಿಗೆ 2—3 ತಿಂಗಳು ಮಾತ್ರ ಕಾರ್ಖಾನೆಯಲ್ಲಿ ಕೆಲಸವಿದ್ದು ಉಳಿದ ಕಾಲದಲ್ಲಿ ಕೆಲಸವಿಲ್ಲದೆ ಉಪಜೀವನಕ್ಕೆ ಮಾರ್ಗವಿಲ್ಲದಂತಾಗಿದೆ. ಆಗ ಕಾಲ ಕಳೆಯುವುದೇ ಕಷ್ಟ. ಆ ಕಾಲದಲ್ಲಿ ಕೆಲಸಮಾಡಿ ಹೊಟ್ಟೆ ಹೊರೆಯಲು ಯಾವ ಸೌಲಭ್ಯವೂ ಇಲ್ಲ. ಇದಲ್ಲದೆ ರಾಯಚೂರು ಇಡೀ ಭಾರತದಲ್ಲಿ ಹತ್ತಿಯ ಸಲುವಾಗಿ ಮೂರನೆಯ ದೊಡ್ಡ ಮಾರ್ಕೆಟ್ ಸ್ಥಳವಾಗಿದೆ. ಅಂಥ ಭಾಗದಲ್ಲಿ ಯಾವ ಯೋಜನೆಯನ್ನಾದರೂ ಹಾಕಿ ಜನರಿಗೆ ಅನುಕೂಲಮಾಡದಿರುವುದು ನಿಜವಾಗಿಯೂ ಕೂಡ ವಿಷಾದಕರವಾಗಿದೆ. ತುಂಗಭದ್ರಾ ಪ್ರಾಜೆಕ್ಟಿನ ಕೆಲಸ ಮುಂದುವರಿಸಿ ಅದರಿಂದ ಜಾಗ್ರತೆ ಅನುಕೂಲ ಮಾಡುತ್ತಾರೆಂದು ಭಾವಿಸುತ್ತೇನೆ. ಆ ಪ್ರಾಂತಕ್ಕೆ ಒಂದು ಸೇತುವೆ ಬೇಕೆಂದು ಬಹಳ ದಿನಗಳಿಂದ ಕೇಳಿದರೂ ಮಾಡಿಕೊಡದೆ ಬೇರೆ ಕಡೆ ಎರಡು ಸೇತುವೆಗಳನ್ನು 17 ಮೈಲಿ ಅಂತರದಲ್ಲಿ ಕಟ್ಟಿದ್ದಾರೆ. ನ್ಯಾಷನಲ್ ಹೈವೇನಲ್ಲಿ ಎರಡನೆ ಯುದ್ಧದ ಕಾಲದಿಂದ ಇದ್ದ ಸೇತುವೆಯನ್ನು ಬದಲಾಯಿಸಿದ್ದಾರೆ. ಆದರೆ 10 ವರ್ಷಗಳಿಂದ ಕೇಳಿದ ಸೇತುವೆಯನ್ನು ಮಾಡಿರುವುದಿಲ್ಲ. ಹೀಗೆ ಜನರಿಗೆ ಬೇಕಾಗಿರುವುದನ್ನು ಬಿಟ್ಟು ಬೇರೆ ಯಾವುದನ್ನೋ ಮಾಡುತ್ತಿದ್ದಾರೆ. ನೇರವಾಗಿ ಬೆಂಗಳೂರಿಗೆ ಹೋಗುವ ಹಾದಿಯಲ್ಲಿ ಒಂದು ಸೇತುವೆ ಕಟ್ಟಿಸಬೇಕೆಂದು ಹೇಳಿದರೆ ಅದನ್ನು ಕಟ್ಟಿಸದೆ ಶಿರಗುಪ್ಪ ಮತ್ತು ಕಂಪಲಿ ಹತ್ತಿರ ಕಟ್ಟಿಸಿದ್ದಾರೆ.

ಇನ್ನು ಪ್ರೊಕ್ಯೂರ್‌ಮೆಂಟ್ ವಿಚಾರದಲ್ಲಿ ಅನ್ಯಾಯ ಮಾಡಿದ್ದಾರೆ. ಒಂದು ಎಕರೆಗೆ ರೈತರು ಇಷ್ಟು ಕೊಡಬೇಕೆಂದು ಗೊತ್ತುಮಾಡಿರುವುದರ ಜೊತೆಗೆ ಮತ್ತೆ ಶೇಕಡ 30ರಷ್ಟು ಕೊಡಬೇಕೆಂದು ಹೇಳಿದ್ದಾರೆ. ಆ 30ರಲ್ಲಿ ರೈತ ಶೇಕಡ 20 ಭಾಗ, ವ್ಯಾಪಾರಿ ಒಂದು ಭಾಗ ಕೊಡಬೇಕು. ಶೇಕಡ 10 ಭಾಗ ಕೊಡುವುದಕ್ಕೆ ವ್ಯಾಪಾರಿ ಸರಕಾರದ ದರ ಕೊಡುತ್ತಾನೆ. ಇದರಿಂದ ಶೇಕಡ 50 ಭಾಗ ವ್ಯಾಪಾರಗಾರರಿಗೆ ಹೋಗಿ ರೈತರಿಗೆ ಲಾಭವಾಗಿಲ್ಲ. ಈಗ ಎರಡು ವರ್ಷಗಳಿಂದ 8—10 ಹದ ಮಳೆ ಆಗಿರುವುದರಿಂದ ರೈತರಿಗೆ ಅನುಕೂಲವಾಗಿಲ್ಲ. ಆದುದರಿಂದ ಭೂ ಕಂದಾಯವನ್ನು ವಜಾಮಾಡಬೇಕು.

ಇನ್ನು ನೀರಾವರಿ ಯೋಜನೆ ಬಗ್ಗೆ ಹೇಳಬೇಕಾದರೆ ದೇವದುರ್ಗ ತಾಲ್ಲೂಕಿನಲ್ಲಿ 12 ನೂರು ಬಾವಿಗಳಿದ್ದರೆ 13 ಬಾವಿಗಳಿಗೆ ಮಾತ್ರ ಎ. ಸಿ. ಮತ್ತು ಡಿ. ಸಿ. ಪಂಪುಗಳನ್ನು ಕೊಟ್ಟಿದ್ದಾರೆ. ಸಾಕಾದಷ್ಟು ಪಂಪುಗಳನ್ನು ಕೊಟ್ಟಿಲ್ಲ. ತುಂಗಭದ್ರಾ ನಾಲೆ ರಾಯಚೂರಿನ ಮೇಲುಭಾಗದಲ್ಲಿ ಬಂದರೆ ಬೇಕಾದಷ್ಟು ಹಳ್ಳಿಗಳಿಗೆ ಅನುಕೂಲವಾಗುತ್ತದೆ. ಆದರೆ ಹಾಗೆ ಮಾಡದೆ ಅರ್ಧಭಾಗಕ್ಕೆ ಮಾತ್ರ ಅನುಕೂಲವಾಗುವಂತೆ ಮಾಡಿದ್ದಾರೆ.

ವಿದ್ಯುಚ್ಛಕ್ತಿ ವಿಚಾರ ನೋಡಿದರೆ, ತುಂಗಭದ್ರಾ ಪ್ರಾಜೆಕ್ಟ್ ಆದಮೇಲೆ 100 ಮೈಲಿ ದೂರದಿಂದ ಕರೆಂಟನ್ನು ಒದಗಿಸಲು ಅನುಕೂಲವಾಯಿತು. ಆದರೆ ಕೇವಲ 8 ಹಳ್ಳಿಗಳಿಗೆ ಮಾತ್ರ ಕರೆಂಟನ್ನು ಕೊಟ್ಟು ವೀರೇಂದ್ರ ಪಾಟೀಲರು ತಮಗೆ ಬೇಕಾದ ಕಡೆಗೆ ಒದಗಿಸಿದ್ದಾರೆ. ಇದು ಬಹಳ ವಿಷಾದಕರ. ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri DIGAMBARA RAO BALAWANTA RAO (Aland).—Mr. Speaker, Sir, on going through the Address delivered by the Governor, I was distressed to find out that the Governor's Address is nothing but a collection of reports from various departments of the Government. As far as policy matters are concerned, there is nothing to show in this lengthy address. If at all they are to be termed, it may only reflect certain welfare activities of the Government. But the Congress which has been professing that it stands for democratic socialism has failed to show any concrete proposals towards that goal.

As far as problems of food, shelter, cloth and other matters are concerned, which are the basic necessities of our people, the Address utterly fails to satisfy that it has taken account of these necessities of life.

Now, coming to certain points, because the time at my disposal is very limited, as far as food and civil supplies is concerned, I have to submit that the Government has utterly failed to provide food and other finished goods at reasonable rates. As far as food is concerned, it was said that of course there is discrimination when they give 8 kgs. in cities, they give only 5 kgs. in certain towns. And as far as Gulbarga is concerned, I say that they are not giving more than 4 kgs. which is not at all sufficient for the population.

Then, regarding prices, I can say, Sir, that the prices have been soaring high like anything. 3 or 4 years back sugar was available at the rate of one rupee and eighteen paise per K. G. and now it is one rupee and forty paise. This is how prices of necessary things are going up.

4-30 P.M.

Regarding agriculture, I have to submit, in order to please the henchmen of the Congress, the Government has deliberately failed to implement certain projects which were very necessary and which were found to be economic by experts. There was a project near Mahagaon village called Bennethra Project. According to American experts, if this project had been constructed, it would have been able to give water for the taluks of Chincholi and Chitapur areas. Not only that, it would have been an important source of water supply to Gulbarga. But, though representation was made by my Party in the year 1957, giving all statistics regarding the economic aspect of it and though on the floor of the House, the Chief Minister Sri Nijalingappa also stated that it would be implemented, what came in the way of its implementation was that there are some henchmen whom they had to satisfy and so they had to shift the ground of the project. That was one of the major projects in the State. I do not know whether the same project is included in the Fourth Plan. As has been stated in the Address, we have come into the Fourth Plan and we are yet to complete the 11 Major and 25 Medium Irrigation Projects which were taken up during the three plan periods. It is a sad thing. As the Minister for P. W. D. stated, it may take fifty years for completing all these projects. It is colossol disregard and it is a very deliberate attempt in not implementing certain important projects

Regarding law and order, I fail to understand that only two sentences are given here in respect of this very important matter of law and order in our State.

> "The law and order situation in the State during the year 1966, continued to be satisfactory."

But, I may submit, there has been no department of the Government, which is considered as the Home Department as it has failed to maintain the necessary atmosphere in the State as regards law and order. In my taluk which is a border taluk of Maharastra State, many representations have been made regarding controversion of food orders and regarding collusion of the Police Department with the white caps and the mercantile class in smuggling foodgrains across the Maharastra State, but none of the representations were heard so far. It has been a daily practice for the police not only to collude with the black-marketeers and smugglers but are practically partners with the traders. When this is the state of affairs, I fail to understand how the food problem would be solved and how it can be claimed by Government that they are vigilant in this respect. My submission is, the party in power, in order to maintain its power and position is not only neglecting these things but actually supporting its own benchmen and gives a deaf ear to the complaints made against the Police Department that the police are actively engaged in the anti-social activity of black-marketing.

Regarding education, my submission is, there is a Hyderabad Karnatak Education Society at Gulbarga and this Society, instead of catering to the needs of the people of Hyderabad Karnatak area, gives admission to people who come from Andhra, Madras and Kerala because they are getting capitation fee ranging from Rs. 3,000 to Rs. 15,000 per student. The people of our area had contributed for the construction of the building with the hope they will have the facility of getting seats in the college for their boys. What I see now is, none of the students from that area get entry there and most of the students that get entry there are from outside by giving capitation fee and who are in the good books of the Administrators and the Chairman of that Institution. The Karnatak Education Society affair is an open thing to all and this is how the Congress is conducting such Institutions. My humble submission is, all such Institutions should be taken over by Government and have them under their control and see that there is free scope for poor and meritorious students of the area. To-day, in this Congress Raj, this has been denised.

Regarding land revenue, before general elections, the Congress Government came out with a promise that land revenue would be abolished. After elections, the mood of the Congress has changed and to-day they say that they are going to examine as to the feasibility of abolishing land revenue. It is said that the peasant are getting good price for their produce. But, on the other hand, they are in entire poverty. It is only people owning hundreds of acres who get all the facilities like the takkavi and other loans and the small holders are

(SRI DIGAMBARA RAO BALAWANT RAO)

completely neglected and they feel that the Government has utterly failed to solve their problems. I submit, the land revenue is a fuedal remnant of the past and this has to be abolished and some other ways and means should be found out and such levies should be only on those who could afford to pay the taxes. With these words, I thank you for the opportunity given to me for making a few observations.

ಶ್ರೀ ಜಿ. ಆರ್. ಹಾಲಸ್ವಾಮಿ (ಜಗಳೂರು).—ಮಾನ್ಯ ಸಭಾಪತಿಗಳವರೇ, ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ಸಮರ್ಥಿಸಿ ಕೆಲವು ಅಂಶಗಳನ್ನು ಸಭೆಯ ಮುಂದೆ ಹೇಳಬಯಸುತ್ತೇನೆ. ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಸರಕಾರದವರು ಇದುವರೆಗೆ ಪ್ರಗತಿ ಸಾಧಿಸಿರುವುದನ್ನು ಹೇಳಿ ಇನ್ನುಮುಂದೆ ಬರುವ ಐದು ವರ್ಷಗಳ ಕಾಲದಲ್ಲಿ ಏನೇನು ಸಾಧನೆ ಮಾಡಬೇಕಾಗಿದೆ ಎಂಬುದಕ್ಕೆ ಎಲ್ಲಾ ವಿಷಯಗಳ ಒಂದು ಸುಂದರವಾದ ನಕ್ಷೆಯನ್ನು ನಮಗೆ ನೀಡಿದ್ದಾರೆ. ವಿರೋಧಪಕ್ಷದ ಅನೇಕ ಸದಸ್ಯರು ಇದುವರೆಗೆ ಭಾಷಣ ಮಾಡುತ್ತಾ ರಾಜ್ಯಪಾಲರವರು ಇಂಥ ವಿಷಯವನ್ನು ಪ್ರಸ್ತಾಪ ಮಾಡಿಲ್ಲ, ಈ ವಿಷಯವನ್ನು ಭಾಷಣದಲ್ಲಿ ತಿಳಿಸಬೇಕಾಗಿತ್ತು ಎಂದು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಸರಕಾರದವರು ಮಾಡಬೇಕಾದಂಥ ಎಲ್ಲಾ ವಿಷಯಗಳನ್ನೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಬೇಕಾಗಿಲ್ಲ. ಇರತಕ್ಕ ವಿಷಯಗಳಲ್ಲಿ ಅತಿ ಮುಖ್ಯವಾದ ವಿಷಯಗಳ ವಿಚಾರದಲ್ಲಿ ಸರಕಾರ ಸಾಧಿಸಿರತಕ್ಕಂಥ ಪ್ರಗತಿ ಪಡೆದ ಅಂಶಗಳನ್ನೊಳಗೊಂಡ ಒಂದು ಸುಂದರವಾದ ಚಿತ್ರವನ್ನು ಅವರು ನಮಗೆ ನೀಡಿದ್ದಾರೆ. ಇದಲ್ಲದೆ ಶ್ರೀಮಾನ್ ಘೋರ್ಪಡೆಯವರು ಈ ಮಾನ್ಯ ಸಭೆಯಲ್ಲಿ ಈ ವಂದನಾರ್ಪಣೆ ನಿರ್ಣಯವನ್ನು ಮಂಡಿಸುತ್ತಾ ಅಂಕಿಅಂಶಗಳನ್ನು ವಿವರವಾಗಿ ತಿಳಿಸಿ ರಾಜ್ಯಪಾಲರ ಭಾಷಣವನ್ನು ಸಮರ್ಥಿಸಿ ಮಾತನಾಡಿದ್ದಾರೆ.

ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಶರಾವತಿ ಪ್ರಕರಣದ ಬಗ್ಗೆ ಬಹು ದೀರ್ಘವಾಗಿ ಭಾಷಣ ಮಾಡಿದರು. ಬಹು ಜನ ಸದಸ್ಯರು ಇದು ಶರಾವತಿ ನಾಟಕ ಎಂದು ವರ್ಣಿಸಿ ಹೇಳಿದ್ದಾರೆ. ಅವರ ಭಾಷಣಕ್ಕೆ ಸರಿಯಾದ ಉತ್ತರವನ್ನು ಪಿ.ಡಬ್ಲ್ಯೂ.ಡಿ. ಸಚಿವರಾದ ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ಎರಡೂವರೆ ಗಂಟೆ ಕಾಲ ಮಾತನಾಡುತ್ತಾ ಏನೇನು ನಡೆದಿದೆ ಎಂಬುದಕ್ಕೆ ಒಂದು ಸುಂದರ ಚಿತ್ರವನ್ನು ಜನತೆಗೆ ಈ ಸಭೆಯ ಮೂಲಕ ತಿಳಿಸಿದ್ದಾರೆ. ಶ್ರೀ ಚನ್ನಬಸಪ್ಪನವರ ಭಾಷಣ ಕೇಳಿದಾಗ್ಗೆ ಅದರಲ್ಲಿ ಏನೋ ಮಹಾ ರಹಸ್ಯ ನಡೆದಿದೆ ಎಂದು ಭಾವನೆ ಬರುವಂತ ಅವರು ಮಾತನಾಡಿದ್ದರು. ಆದರೆ ಶ್ರೀ ವೀರೇಂದ್ರ ಪಾಟೀಲ್ ಅವರ ಭಾಷಣ ಕೇಳಿದ ಮೇಲೆ ಅವರು ಹೇಳಿರುವುದರಲ್ಲಿ ಏನೂ ಹುರುಳು ಇಲ್ಲಾ ಎಂಬುದು ಎಲ್ಲರ ಗಮನಕ್ಕೆ ಬಂದಿದೆ. ಕಳೆದ 20 ವರ್ಷಗಳ ಕಾಲ ನಮ್ಮ ಸರಕಾರ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿದೆ. ಅನೇಕ ದೊಡ್ಡ ದೊಡ್ಡ ಕಾಮಗಾರಿಗಳನ್ನು ಸಣ್ಣಪುಟ್ಟ ನೀರಾವರಿ ಯೋಜನೆಗಳನ್ನು ಶರಾವತಿ ವಿದ್ಯುತ್‌ಶಕ್ತಿ ಯೋಜನೆಯನ್ನು ಕೈಗೊಂಡು ಆಗಿರತಕ್ಕಂಥ ಪ್ರಗತಿ ಅವರ ಕಣ್ಣು ಕೋರೈಸುತ್ತಿದೆಯೋ ಏನೋ? ಪಾಶ್ಚಾತ್ಯರು ಯಾರೇ ಬರಲಿ ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಾಗ್ಗೆ ಈ ಪ್ರಗತಿಯನ್ನು ತುಂಬಾ ಹೊಗಳಿದ್ದಾರೆ. ಇಷ್ಟು ಪ್ರಗತಿ ಸಾಧಿಸಿದ್ದರೂ ಕೂಡ ಒಂದಾದರೂ ರಚನಾತ್ಮಕ ಸಲಹೆ ಮಾಡದೇ, ಮಾಡಿರತಕ್ಕಂಥ ಒಳ್ಳೇ ಕಾರ್ಯವನ್ನು ಹೊಗಳದೆ, ಬರೀ ಟೀಕೆ ಮಾಡುತ್ತಿರುವುದು ಬಹಳ ವಿಷಾದಕರ. ವಿರೋಧ ಪಕ್ಷದ ಸದಸ್ಯರಿಗೆ ಕಾಮಾಲೆ ರೋಗ ಬಂದ ಹಾಗೆ ಇದೆ. ದೋಷ ಮಾತ್ರ ಕಾಣುತ್ತದೆ, ಒಳ್ಳೇ ಚಿತ್ರ ಅವರಿಗೆ ಕಾಣುತ್ತಿಲ್ಲ. ಇದು ಅವರ ಭಾಷಣದಿಂದ ಗೊತ್ತಾಗುತ್ತದೆ. ಕಳೆದ ವರ್ಷ ಸಕಾಲದಲ್ಲಿ ಮಳೆ ಬಾರದೆ ಇದ್ದುದರಿಂದ ಅಭಾವ ಪರಿಸ್ಥಿತಿ ಇದ್ದರೂ ಕೂಡ ಸರಕಾರವು ಬಹು ದಕ್ಷತೆಯಿಂದ ಹೊರಗಿನ ದೇಶಗಳಿಂದ ಆಹಾರ ಧಾನ್ಯ ತರಿಸಿಕೊಂಡು ಸರಿಯಾಗಿ ವಿತರಣೆ ಮಾಡಿದ್ದಾರೆ. ಅನೇಕ ರಿಲೀಫ್ ಕಾಮಗಾರಿಗಳ ಮೂಲಕ ಲಕ್ಷಾಂತರ ಜನರಿಗೆ ಕೂಲಿ ಒದಗಿಸಿ ಕಷ್ಟಕಾಲ ಎದುರಿಸಿದ್ದಾರೆ ಎಂಬುದು ನಾವೆಲ್ಲರೂ ಹೆಮ್ಮೆ ಪಡತಕ್ಕಂಥ ವಿಷಯವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬರೀ ಟೀಕೆ ಮಾಡುವುದರಿಂದ ಯಾವ ಯೋಜನೆಯೂ ಯಶಸ್ವಿಯಾಗಲಾರದು. ಯೋಜನೆಗಳು ಯಶಸ್ವಿಯಾಗುವಂತೆ ಸಕ್ರಿಯ ಪಾತ್ರ ವಹಿಸಬೇಕು ಎಂದು ಈ ಸಭೆಯ ಮೂಲಕ ಎಲ್ಲ ವಿರೋಧ ಪಕ್ಷದ ಮಾನ್ಯ ಸದಸ್ಯರಿಗೆ ಕೇಳಿಕೊಳ್ಳುತ್ತೇನೆ. ಇಂದು ದೇಶದಲ್ಲಿ ಜೀವನ ಮಟ್ಟ ಹೆಚ್ಚಿದೆ. ಸಹಕಾರ ಸಂಘಗಳ ಬಗ್ಗೆ ಒಂದು ಮಾತು ಹೇಳುತ್ತೇನೆ. ಸಹಕಾರ ಸಂಘಗಳಲ್ಲಿ ಏನಾದರೂ ಅನ್ಯಾಯ

ನಡೆದರೆ ಕೂಡಲೇ ತನಿಖೆ ಮಾಡಿ ಶೀಘ್ರವಾಗಿ ಸೂಕ್ತ ಕ್ರಮ ಕೈಕೊಳ್ಳಬೇಕು. ಆಡಿಟ್‌ಮಾಡಿ ತನಿಖೆ ಕ್ರಮ ಕೈಕೊಳ್ಳಲು ಬಹಳ ವಿಳಂಬವಾಗುತ್ತಿದೆ. ಇಂಥ ಸಂದರ್ಭದಲ್ಲಿ ಕೂಡಲೇ ಹೊಸ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಭೆಯ ಮೂಲಕ ಸರಕಾರಕ್ಕೆ ಪ್ರಾರ್ಥಿಸುತ್ತೇನೆ.

ವಿರೋಧ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲ್ ಅವರು State Industrial co operative Bank. ವಿಷಯ ಪ್ರಸ್ತಾಪ ಮಾಡಿ ಇಂಡಸ್ಟ್ರಿಯಲ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಬಹಳ ಅನ್ಯಾಯ ನಡೆದಿದೆ ಎಂದು ಭಾಷಣದಲ್ಲಿ ಪ್ರಸ್ತಾಪ ಮಾಡಿದರು. ಇದನ್ನು ವಿರೋಧಪಕ್ಷದ ಸದಸ್ಯರಾದ ಮತ್ತು ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕ್ ಡೈರಕ್ಟರಾದ ಶ್ರೀ ಜ್ವಾಲನಯ್ಯನವರನ್ನು ಕೇಳಿ. ಅದರ ಆ ರೀತಿ ಏನೂ ಅನ್ಯಾಯ ನಡೆದಿಲ್ಲ. ಇಂಡಸ್ಟ್ರಿಯಲ್ ಪ್ರಗತಿಗಾಗಿ ಸರಕಾರದಿಂದ ನೆರವು ಬರುವಂತೆ ಅವರ ಅಧ್ಯಕ್ಷರು ಬಹಳ ಪ್ರಯತ್ನ ಮಾಡುತ್ತಿದ್ದಾರೆ.

ಇನ್ನೊಂದು ವಿಷಯ ಶ್ರೀಮಾನ್ ಕೆ. ಎಚ್. ಪಾಟೀಲ್ ಅವರು ಹೇಳಿದ್ದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಜಿಲ್ಲಾ ಬ್ಯಾಂಕುಗಳಿಗೆ ಸಾಕಷ್ಟು ಹಣ ನೀಡುತ್ತಿಲ್ಲ ಎಂಬುದು ನಿಜವಾಗಿದೆ. ಜಿಲ್ಲಾ ಬ್ಯಾಂಕುಗಳು ಸರಿಯಾಗಿ ಅಸ್ತಿತ್ವಕ್ಕೆ ಬರಬೇಕಾದರೆ ಹೆಚ್ಚು ನೆರವು ನೀಡಬೇಕು ಎಂದು ಸರಕಾರಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

ಹರಿಜನರಿಗೆ ಮನೆ ಕಟ್ಟುವುದಕ್ಕೆ ಸಾಲ ಕೊಡುವುದನ್ನು ನಿಲ್ಲಿಸಿದ್ದಾರೆ ಎಂದು ಶ್ರೀಮಾನ್ ಜೈ ಪ್ರಕಾಶ ನಾರಾಯಣ ಅವರು ಹೇಳಿದರು. ಇದು ತಪ್ಪು. ಗೃಹ ನಿರ್ಮಾಣದ ಬಗ್ಗೆ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಮೇಲೆ ಮೂರುವರೆ ಕೋಟಿ ರೂಪಾಯಿಗಳಲ್ಲಿ 93 ಲಕ್ಷ 45 ಸಾವಿರ ರೂಪಾಯಿ ಮಂಜೂರುಮಾಡಿ ಖರ್ಚು ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಎರಡು ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಮನೆ ಕಟ್ಟುವ ಕೆಲಸ ಪ್ರೋಗ್ರೆಸ್ಸಿನಲ್ಲಿದೆ. ಹರಿಜನ ಹೌಸ್ ಬಿಲ್ಡಿಂಗ್ ಕಾರ್ಪೊರೇಷನ್ ಅಧ್ಯಕ್ಷಗಿರಿಯನ್ನು ನಾನ್-ಅಫೀಷಿಯಲ್ ಅವರಿಗೆ ವಹಿಸಿ ಕೊಡಬೇಕು ಎಂದು ಅವರು ಸೂಚಿಸಿದರು. ಆದರೆ ಇನ್ನೂ ಕೆಲವು ಕಾಲ ಡೆವಲಪ್‌ಮೆಂಟ್ ಕಮಿಷನರ್ ಅವರೇ ಅಧ್ಯಕ್ಷರಾಗಿ ಹತ್ತಿರವೇ ಇದ್ದರೆ ಅನುಕೂಲವಾಗುತ್ತದೆ. ಎಸ್.ಇ.ಎಸ್, ಸೂಪರ್‌ವೈಜರ್ಸ್ ಬೇಗನೆ ತನಿಖೆ ಮಾಡಿ ಎರಡು ಮೂರು ಇನ್‌ಸ್ಟಾಲ್‌ಮೆಂಟುಗಳಲ್ಲಿ ಹಣ ಪಡೆಯುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಡೆವಲಪ್‌ಮೆಂಟ್ ಕಮೀಷನರ್ ಅವರೇ ಅಧ್ಯಕ್ಷರಾಗಿ ಮುಂದುವರೆಯುವುದು ಅವಶ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮುಖ್ಯವಾದ ವಿಚಾರ ಒಂದು ಹೇಳಬೇಕಾದುದು ಅಂದರೆ, ನೀರಾವರಿ ಬಾವಿಗಳ ಬಗ್ಗೆ ಇದೆ. ಭೂಸಾರ ಸಂರಕ್ಷಣಾ ಯೋಜನೆಯನ್ನು ಸರಕಾರದವರು ಯಾವ ರೀತಿ ಮಾಡಿದ್ದಾರೋ ಅದೇ ರೀತಿಯಲ್ಲಿ ಸರಕಾರದವರೆ, ನೀರಾವರಿ ಬಾವಿಗಳನ್ನು ಮಾಡಿಸಿಕೊಟ್ಟು ಕಂದಾಯ ರೂಪದಲ್ಲಿ ಹಣ ವಸೂಲ್ಮಾಡಬಹುದು ಎಂದು ಹೇಳುತ್ತೇನೆ. ಈಗಾಗಲೇ 41 ಸಾವಿರ ಬಾವಿಗಳನ್ನು ಕೊಟ್ಟಿದ್ದಾರೆ, ಆದರೆ ಎಷ್ಟೋ ಬಾವಿಗಳು ಅರ್ಧಂಬರ್ಧವಾಗಿವೆ. ಸರಕಾರದವರು ಬಾವಿ ಕೆಲಸ ಪೂರ್ತಿಯಾಗುವ ಹಾಗೆ ಹಣ ಒದಗಿಸಿ ಕೊಟ್ಟು ಆ ಹಣವನ್ನು ಕಂದಾಯ ರೂಪದಲ್ಲಿ ವಸೂಲ್ಮಾಡಿದರೆ ಅನುಕೂಲವಾಗುತ್ತದೆ. ಪದೇ ಪದೇ ದೇಶದಲ್ಲಿ ಕ್ಷಾಮ ಬರುವುದರಿಂದ ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಕ್ಷಾಮ ಪರಿಹಾರಕ್ಕಾಗಿ ಒಂದು ಖಾಯಂ ಯೋಜನೆ ಮಾಡಬೇಕು ಎಂದು ಸರಕಾರಕ್ಕೆ ಈ ಸಭೆಯ ಮೂಲಕ ಪ್ರಾರ್ಥಿಸುತ್ತೇನೆ. ಇಷ್ಟನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರತಕ್ಕಂಥ ಸಭಾಪತಿಗಳಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸನ್ಮಾನ್ಯ ಸಭಾಪತಿಯವರೇ, ಇದುವರೆಗೂ ನನ್ನ ಮಾನ್ಯ ಮಿತ್ರರನೇಕರು ರಾಜ್ಯಪಾಲರ ಭಾಷಣದ ಬಗ್ಗೆ ಟೀಕೆಮಾಡಿ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ನಾನಾದರೂ ಬೆಂಗಳೂರಿನ ಒಂದು ಭಾಗದ ಪ್ರತಿನಿಧಿಯಾಗಿ ಶೋಚನೀಯವಾಗಿ ಹೇಳಬೇಕಾದರೆ ರಾಜ್ಯಪಾಲರ 25 ಪುಟಗಳ ಭಾಷಣದಲ್ಲಿ ರಾಜ್ಯದ ರಾಜಧಾನಿಯಾದ ಬೆಂಗಳೂರಿನ ಬಗ್ಗೆ 15 ಲಕ್ಷ ಪ್ರಜೆಯಿರುವ ಈ ನಗರದ ನಾಗರೀಕರ ಬಗ್ಗೆ ಅಲಕ್ಷ ತೋರಿಸಿರುವುದು ವಿಷಾದಕರವೆಂದು ಹೇಳಿದರೆ ತಪ್ಪಾಗಲಾರದೆಂದು ನಾನು ತಿಳಿದಿದ್ದೇನೆ. ಈ 25 ಪುಟಗಳಲ್ಲಿ ಕ್ರಮವಾಗಿ ಅಥವ ಅಕ್ರಮವಾಗಿ ನಡೆಯುವ ಜನತಾ ಬಜಾರಿನ ವಿಚಾರ, ಡೆಂಟಲ್ ಕಾಲೇಜಿನಲ್ಲಿ ಅದಂಥವಾಗಿರುವ ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್ ವಿಚಾರ, ಬೆಂಗಳೂರು ನಾಗರೀಕರಿಗೆ ಕೊಡುವ 8 ಕೆ.ಜಿ ಪಡಿತರ ಕೊಡುವುದು-ಇವನ್ನು ಬಿಟ್ಟರೆ ಇನ್ನೇನೂ ಕಾಣಿಸದಿರುವುದು ಬೆಂಗಳೂರಿನ ನಾಗರಿಕರ ದೌರ್ಭಾಗ್ಯ. ಅದರಲ್ಲೂ ಏಕೀಕರಣವಾದಮೇಲೆ ಬೆಂಗಳೂರಿನ ನಾಗರಿಕರಿಗೆ ನಿಜವಾಗಿಯೂ ಶೋಚನೀಯ ಪರಿಸ್ಥಿತಿ ಉಂಟಾಗಿದೆ. ದಿವಾನ್ ಮಿರ್ಜಾರವರಿದ್ದಾಗ ಅವರು ಬೆಂಗಳೂರು ನಗರದಲ್ಲಿ ವಾರಕ್ಕೊಂದು ಸಲ ಕುದುರೆಯಮೇಲೆ ಸುತ್ತಾಡಿ ನಾಗರಿಕರ ಕಷ್ಟಸುಖಗಳನ್ನು ವಿಚಾರಿಸಿ ಬೆಂಗಳೂರಿನ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಡುತ್ತಿದ್ದರು. ಆದಾದಮೇಲೆ

(ಶ್ರೀ ಟಿ. ಆರ್ ಶಾಮಣ್ಣ)

ಹನುಮಂತಯ್ಯನವರು ನಾಗರಿಕರ ಬಗ್ಗೆ ಆಸಕ್ತಿವಹಿಸಿ ಬೆಂಗಳೂರಿನ ಪ್ರಗತಿಯನ್ನು ಹೆಚ್ಚಿಸಲು ಪ್ರಯತ್ನಪಟ್ಟರು. ಈಗಿರುವ ನಮ್ಮ ಮುಖ್ಯ ಮಂತ್ರಿಗಳಾದರೋ ಸಾಕಾದಷ್ಟು ಮಾತನಾಡುತ್ತಾರೆ, ಸಾಕಷ್ಟು ಆಸಕ್ತಿಯಿರುವಂತೆ ನಟನೆಮಾಡುತ್ತಾರೆ. ಆದರೆ ಬೆಂಗಳೂರು ನಾಗರಿಕರ ಬಗ್ಗೆ ಅವರಿಗೆ ಒಂದು ಕ್ರೋಧವಿದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಅವರು ಅಧಿಕಾರಕ್ಕೆ ಬಂದ ಮೇಲೆ ಯಾವವಿಧವಾದ ಸೌಕರ್ಯವನ್ನೂ ಮಾಡಿಲ್ಲ. ಅಮೇಲೆ ಬೆಂಗಳೂರಿನ ಬಗ್ಗೆ ಅವರ ಹೆಸರು ಚಿರಸ್ಥಾಯಿಯಾಗಿರುವಹಾಗೆ ನೂರು ವರ್ಷಗಳ ಕಾಲದಿಂದಿದ್ದ ಸ್ಥಳೀಯ ಸಂಸ್ಥೆಯ ಅಧಿಕಾರವನ್ನು ಸೂಪರ್ ಸೀಡ್ ಮಾಡಿಸಿದ್ದಾರೆ. ಈ ಸೂಪರ್‌ಸೆಷನ್ ಬಗ್ಗೆ ನಿಜವಾಗಿಯೂ ಕೂಡ ನನಗೆ ಮಾತನಾಡುವುದಕ್ಕೆ ಅಧಿಕಾರವಿದೆಯೆಂದು ತಿಳಿದಿದ್ದೇನೆ. ಕಾರ್ಪೊರೇಷನ್ನಿನಲ್ಲಿ ನಾನು ಕಾಂಗ್ರೆಸ್ ಪಕ್ಷ ಮತ್ತು ವಿರೋಧ ಪಕ್ಷಗಳ ನಾಯಕನಾಗಿದ್ದೆ. ಐದಾರು ವರ್ಷ ಹಣಕಾಸಿನ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿದ್ದೆ, ನನಗೆ ಕೈಬಾಯಿ ಶುದ್ಧಿಯಿದೆ. ಆದುದರಿಂದ ಈ ಸೂಪರ್‌ಸೆಷನ್ನಿಗೆ ಮೂಲ ಕಾರಣ ಕಾಂಗ್ರೆಸ್ ಎಂದು ಹೇಳಿದರೆ ತಪ್ಪಲ್ಲ. ಮಾನ್ಯ ನಾಗಣ್ಣನವರು ಮೇಯರ್ ಆಗಿದ್ದಾಗ ಕಾರ್ಪೊರೇಷನ್ ಆಡಳಿತ ಚೆನ್ನಾಗಿತ್ತೆಂದು ನಾಗರಿಕರು ಹೆಮ್ಮೆ ಪಟ್ಟರು. ಆದರೆ 26 ಜನ ಕಾಂಗ್ರೆಸಿನ ಸದಸ್ಯರು ಮೇಯರ್ ಪದವಿ ಪಡೆಯುವುದಕ್ಕೆ ನಡೆಸಿರುವ ಅನಾಚಾರ ಅಕ್ರಮ ವಿವರಿಸಿದರೆ ತಲೆತಗ್ಗಿಸಬೇಕಾಗುತ್ತದೆ. ಲಾಲ್ ಬಹದ್ದೂರ್ ಶಾಸ್ತ್ರಿಯವರು ನಿಧನರಾದಾಗ ಶೋಕ ದಿನದಲ್ಲಿ ಕುಂಬಳಗೋಡಿಗೆ ಕೆಲವರನ್ನು ಕರೆದುಕೊಂಡುಹೋಗಿ ಕುಡಿಸಿ ಹಣ ಕೊಟ್ಟು ಅಪಚಾರಮಾಡಿದರು, ಮೇಯರ್ ಪದವಿ ವಿಚಾರದಲ್ಲಿ ಒಂದು ಕಥೆ ಬರೆಯಬಹುದು. ನಾನೂ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿ ಸೋತೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಮಾತಾಡಲು ಇಷ್ಟಪಡುವುದಿಲ್ಲ.

ನೀರಿನ ವಿಚಾರದಲ್ಲಿ ವಿಷಯ ಓದಿ ಪ್ರೊಸೀಡಿಂಗ್ಸ್ ಸರಿಯಾಗಿ ನಡೆಸದೆ ಸಬ್ಜೆಕ್ಟ್ ಪಾಸ್ ಆಯಿತು ಎಂದು ಹೇಳಿದರು. ನಂತರ ಒಂದರಿಂದ 80 ರವರೆಗಿನ ಸಬ್ಜೆಕ್ಟುಗಳು ಸಭೆ ಮುಂದೆ ತಂದು ಅವೂ ಕೂಡ ಪಾಸ್ ಆದುವು ಎಂದು ಹೇಳಿದರು. ಸರಿಯಾಗಿ ಸದಸ್ಯರ ಒಪ್ಪಿಗೆ ಪಡೆಯದೆ ಹೀಗೆ ಸುಮ್ಮನೆ ವಿಷಯ ಹೇಳಿ ಪಾಸ್ ಆಯಿತು ಎಂದರೆ ಸುಮ್ಮನಿರಲು ಸಾಧ್ಯವೇ ? 200 ಸೈಟುಗಳೇನು ಇದ್ದುವು ಅವನ್ನು ಬೇಕಾದವರಿಗೆ ಹಂಚಲು ಅದಕ್ಕೆ ಸಂಬಂಧಪಟ್ಟ ಸಬ್ಜೆಕ್ಟ್ ಪಾಸ್ ಆಯಿತೆಂದು ಸುಮ್ಮನೆ ಹೇಳಿಬಿಟ್ಟರೆ ಅದನ್ನು ವಿರೋಧಪಕ್ಷ ಪ್ರತಿಭಟಿಸಬೇಡವೇ ? ಸುಮಾರು 6-7 ಲಕ್ಷ ರೂಪಾಯಿ ಬೆಲೆಬಾಳುವ ಸ್ಮಶಾನದ ಜಾಗ ಒಬ್ಬ ಕಾಂಗ್ರೆಸ್ಸಿನವರು ತೆಗೆದುಕೊಳ್ಳಲು ಪ್ರಯತ್ನಮಾಡಿದಾಗ ಆ ಸಬ್ಜೆಕ್ಟ್ ಪಾಸ್ ಆಗುವಾಗ ಕೇಳಿದಕ್ಕೆ ವಿರೋಧ ಪಕ್ಷದ ಒಬ್ಬರಿಗೆ ಕಪಾಳಕ್ಕೆ ಏಟುಬಿತ್ತು. ಕಾಂಗ್ರೆಸ್ ಸದಸ್ಯರು ಈ ರೀತಿ ಮಾಡಬಹುದೇ? ಹೀಗೆ ಅಕ್ರಮಗಳು ನಡೆಯುತ್ತಿದ್ದರೆ ವಿರೋಧ ಪಕ್ಷದವರು ಸುಮ್ಮನೆ ಕೈಕಟ್ಟಿ ಕೂಡುವುದಕ್ಕೆ ಸಾಧ್ಯವೇ? ಹರಿಜನರಿಗೆ ಮೀಸಲಾಗಿಟ್ಟಿದ್ದ 80 ಸೈಟುಗಳನ್ನು ಕಾಂಗ್ರೆಸ್ ಕಚೇರಿ ಸಂದೇಶದ ಮೇಲೆ ಮಂಡಲ ಕಾಂಗ್ರೆಸ್ ಸದಸ್ಯರಿಗೆ ಹಂಚಿದ್ದಾರೆ. ಈ ಬಗ್ಗೆ ದಾಖಲೆಯಿದೆ; ರುಜುವಾತಿದೆ, ನೋಡಬಹುದು. ಈ ಬಗ್ಗೆ ಹೆಚ್ಚು ವಿವರ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಕಾರ್ಪೊರೇಷನ್ ಸೂಪರ್‌ಸೆಷನ್ ಬಗ್ಗೆ ಒಂದು ರಿಟ್ ಹಾಕಲಾಗಿದೆ. ಆದಕ್ಕಾಗಿ ನಾನು ಆ ವಿಚಾರದಲ್ಲಿ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ.

ಇನ್ನು ಬೆಂಗಳೂರು ನಾಗರಿಕರ ವಿಚಾರದಲ್ಲಿ ಸಾಕಾದಷ್ಟು ಅನ್ಯಾಯ ಮಾಡಿದ್ದಾರೆ, ಈ ವಿಚಾರದಲ್ಲಿ ಅಂಕಿ ಅಂಶ ಕೊಡಬಲ್ಲೆ. ಒಂದನೆಯದಾಗಿ ಕಾರ್ಪೊರೇಷನ್ನಿಗೆ ಸಂಬಂಧಪಟ್ಟಂತೆ ಮೊನ್ನೆ ಒಂದು ಸರಕಾರಿ ಆಜ್ಞೆ ಹೊರಡಿಸಿದ್ದಾರೆ, ಅದರಲ್ಲಿ ದೇಶದ ಎಲ್ಲಾ ಕಡೆಯೂ ಇರುವ ಸ್ಥಳೀಯ ಸಂಸ್ಥೆಗಳಿಗೆ ಸೇಕಡ 5ರಷ್ಟು ತುಟ್ಟಿಭತ್ಯಕ್ಕೆ ಸಂಬಂಧಪಟ್ಟಂತೆ ಹಣ ಕೊಡುವುದಾಗಿ ತಿಳಿಸಿರುವುದರಲ್ಲಿ ಕಾರ್ಪೊರೇಷನ್ನನ್ನು ಬಿಟ್ಟಿದ್ದಾರೆ. ಹೀಗೆ ಮಾಡಲು ಬೆಂಗಳೂರು ಏನು ಅನ್ಯಾಯ ಮಾಡಿದೆ? ಎರಡನೆಯದಾಗಿ ಸುಮಾರು ಒಂದೂ ಕಾಲು ಕೋಟಿ ರೂಪಾಯಿ ಮೋಟಾರು ವಾಹನಗಳ ತೆರಿಗೆ ವಸೂಲು ಮಾಡುವುದರಲ್ಲಿ ಕಾರ್ಪೊರೇಷನ್ನಿಗೆ 5 ಲಕ್ಷ ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಕಾರ್ಪೊರೇಷನ್ನವರು ಸುಮಾರು 60-70 ಲಕ್ಷ ರೂಪಾಯಿಗಳನ್ನು ರಸ್ತೆಗಳಿಗಾಗಿ ಖರ್ಚುಮಾಡುತ್ತಿದ್ದಾರೆ, ಆದುದರಿಂದ ತೆರಿಗೆಯಲ್ಲಿ ಕೊಡುವ ಪಾಲು ಸಾಲದು ಎಂದು ನೂರಾರು ಸಲ ನಿರ್ಣಯಮಾಡಿ ಕಳಿಸಿ ಮಂತ್ರಿಗಳನ್ನು ಹೋಗಿ ನೋಡಿದರೂ ಕೂಡ ಈ ಸಮಸ್ಯೆ ಬಗೆಹರಿದಿಲ್ಲ. ಇದರಿಂದ ಕಾರ್ಪೊರೇಷನ್ ವಿಚಾರದಲ್ಲಿ ಸರ್ಕಾರಕ್ಕೆ ಎಷ್ಟು ಆಸಕ್ತಿಯಿದೆಯೆಂಬುದು ಗೊತ್ತಾಗುತ್ತದೆ. ಕಾರ್ಪೊರೇಷನ್ನಿಗೆ ಸೇರಿದ 3 ಕೋಟಿ ರೂಪಾಯಿಗಳ ಆಸ್ತಿಯನ್ನು ವಾಟರ್ ಬೋರ್ಡಿಗೆ ಕೊಡಲಾಗಿದೆ. ಅದಕ್ಕೆ ಬಡ್ಡಿಯನ್ನು ಸಹ ಕೊಡುತ್ತಿಲ್ಲ. ಕಾರ್ಪೊರೇಷನ್ ಬಗ್ಗೆ ಹೇಗೆ ಲಕ್ಷ್ಯ ಕೊಡುತ್ತಿದ್ದಾರೆ, ಎಷ್ಟು

ಆಸಕ್ತಿಯಿದೆಯೆಂಬುದು ಇದರಿಂದ ವ್ಯಕ್ತವಾಗುತ್ತದೆ. ಕಾರ್ಪೊರೇಷನಿಗೆ ಸೇರಿದ ಧರ್ಮಾಂಬುದಿ ಕೆರೆಯ ಪ್ರದೇಶವನ್ನು ಒಂದುಕಾಲು ಕೋಟಿ ರೂಪಾಯಿಗಳಿಗೆ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಕಾರ್ಪೊರೇಷನ್ ಅನುಮತಿ ಇಲ್ಲದೆ ಮಾರಿದರು. ಅದು ತಮ್ಮದೆಂದು ಕಾರ್ಪೊರೇಷನಿನವರು ಹೇಳಿದಾಗ ಆಕ್ಟನ್ನೇ ಬದಲಾಯಿಸಿದರು. ಇದು ನ್ಯಾಯವೇ ? ಬೇರೆ ಸರ್ಕಾರಗಳವರು ಸರಕಾರಿ ಕಟ್ಟಡಗಳಮೇಲೆ ಕಾರ್ಪೊರೇಷನ್ನಿಗೆ ತೆರಿಗೆ ಕೊಡುತ್ತಾರೆ. ಆದರೆ ನಮ್ಮ ಸರಕಾರ ಆಕ್ಟನ್ನು ಮೊನ್ನೆ ಬದಲಾಯಿಸಿ ಇಂಡಸ್ಟ್ರಿಯಲ್ ಪ್ರಾಪರ್ಟಿಗೆ ಮಾತ್ರ ತೆರಿಗೆ ಕೊಡಬೇಕೆಂದು ಗೊತ್ತುಮಾಡಿದ್ದಾರೆ. ಇದು ಸರಿಯಲ್ಲ, ಕಾರ್ಪೊರೇಷನ್ ಪ್ರದೇಶದಲ್ಲಿ ಸರಕಾರಿ ಕಟ್ಟಡವಾಗಲಿ ಅಥವಾ ಖಾಸಗಿ ಕಟ್ಟಡವಾಗಲಿ ಯಾವುದೇ ಇದ್ದರೂ ತೆರಿಗೆ ಅದಕ್ಕೆ ಕೊಡಬೇಕು. ಸರ್ಕಾರಿ ಕಟ್ಟಡ ಕಟ್ಟಲು ಲೈಸೆನ್ಸ್ ಕೂಡ ತೆಗೆದುಕೊಳ್ಳುತ್ತಿಲ್ಲ, ಅದಕ್ಕೆ ತಕ್ಕಂತೆ ನಿಯಮವನ್ನು ರಚಿಸಿ ಕೊಂಡಿದ್ದಾರೆ. ಹೆಲ್ತ್ ಸೆಸ್, ಎಜುಕೇಷನ್ ಸೆಸ್ ಬಾಬ್ತು ಆರೂಮುಕ್ಕಾಲು ಲಕ್ಷ ಕಾರ್ಪೊರೇಷನ್ ಕೊಡುತ್ತಿತ್ತು, ಮೊನ್ನೆ 28 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಗೊತ್ತುಮಾಡಿದ್ದಾರೆ. 34 ಹಳ್ಳಿಗಳನ್ನು ಕಾರ್ಪೊರೇಷನ್ ಪ್ರದೇಶಕ್ಕೆ ಸೇರಿಸಿದರು, ಅದಕ್ಕೆ ಬೇಕಾದ ಸೌಕರ್ಯ ನೀಡಲು ಆಗುವ ಖರ್ಚನ್ನು ಸರಕಾರ ವಹಿಸಬೇಕೆಂದು ಹೇಳುತ್ತಿದ್ದರೂ ಇದುವರೆಗೆ ಮೂರು ಕಾಸನ್ನೂ ಕೊಟ್ಟಿಲ್ಲ. ಇದಕ್ಕೆ ವರ್ಷಕ್ಕೆ 4—5 ಲಕ್ಷ ರೂಪಾಯಿ ಖರ್ಚಾಗುತ್ತದೆ. ಹೀಗೇನಾದರೂ ಹೇಳಿದರೆ ಆಕ್ಟನ್ನೇ ಬದಲಾಯಿಸುತ್ತಾರೆ. ಹೀಗೆ ಮಾಡಿದರೆ ಎಷ್ಟು ತೊಂದರೆಯಾಗುವುದೆಂಬುದನ್ನು ಯೋಚನೆ ಮಾಡಬೇಕು. ಕಾಲಾವಕಾಶವಿದ್ದಿದ್ದರೆ ಇನ್ನೂ ಹೆಚ್ಚಿನ ಅಂಕಿಅಂಶ ಹೇಳುತ್ತಿದ್ದೆ.

ಬೆಂಗಳೂರಿನ ನಾಗರಿಕರಿಗೆ ಅತಿ ಮುಖ್ಯವಾಗಿ ಬೇಕಾಗಿರುವುದು ನೀರು. ಕಾವೇರಿ ನೀರನ್ನು ತರಲು ಎರಡೂವರೆ ವರ್ಷಗಳ ಕೆಳಗೆ ವಾಟರ್ ಬೋರ್ಡ್ ರಚಿಸಲಾಯ್ತು. ಆದರೆ ಇದುವರೆಗೆ ಯಾವ ಸರಿಯಾದ ಪ್ರಯತ್ನವೂ ಆ ದಿಶೆಯಲ್ಲಿ ಆಗಿಲ್ಲ. ತೀರ್ಮಾನವಾದ

5-00 P.M.

ತಕ್ಷಣ ವಾಟರ್ ಸಪ್ಲೈ ಬೋರ್ಡ್ ತಯಾರು ಮಾಡಿ, ಮಗು ಹುಟ್ಟುವುದಕ್ಕಿಂತ ಮುಂಚೆ ಕುಲಾವಿ ಹೊಲಿಸಿದರು ಅನ್ನುವ ಹಾಗೆ ಅದಕ್ಕೆ ಮೊದಲೇ ಹೆಚ್ಚಿನ ಸಿಬ್ಬಂದಿಯನ್ನು ಗೊತ್ತುಪಡಿಸಲಾಗಿದೆ. ಒಬ್ಬ ಸೂಪರ್‌ಇಂಟೆಂಡಿಂಗ್ ಇಂಜನಿಯರು, ಇಬ್ಬರು ಎಕ್ಸಿಕ್ಯೂಟಿವ್ ಇಂಜನಿಯರುಗಳು, ನಾಲ್ಕು ಜನ ಅಸಿಸ್ಟೆಂಟ್ ಇಂಜನಿಯರುಗಳು ಇದ್ದರು. ಲೋನ್ ಮಂಜೂರಾಗಿ ಕೆಲಸ ತೆಗೆದುಕೊಳ್ಳುವುದಕ್ಕೆ ಮುಂಚೆಯೇ ಒಬ್ಬ ಚೇರ್ಮನ್‌ರು ಮತ್ತು ಒಬ್ಬ ಚೀಫ್ ಇಂಜನಿಯರು ಅದರ ಜೊತೆಗೆ ಒಂದು ದೊಡ್ಡ ಎಸ್ಟಾಬ್ಲಿಷ್‌ಮೆಂಟ್ ಇಟ್ಟು ಇದುವರೆಗೂ ಕೂಡ ಬೆಂಗಳೂರು ನಗರದ ನಾಗರಿಕರ ಯಾವ ಒಂದು ಸಮಸ್ಯೆಯೂ ಕೂಡ ಪರಿಹಾರವಾಗಿಲ್ಲ. ಇದುವರೆಗೂ ಕೂಡ ನೀರಿನ ದರ ಯಾವ ರೀತಿ ಇರಬೇಕು ಎಂಬುದನ್ನು ನಿಗದಿ ಮಾಡಿಲ್ಲ, ಈಗ ಅವರು ಚಾರ್ಜ್ ಮಾಡುತ್ತ ಇರತಕ್ಕ ರೇಟ್ ಜಾಸ್ತಿಯಾಗಿದೆ, ಮಾಡುತ್ತಾ ಇರತಕ್ಕ ಕ್ರಮ ಸರಿಯಾಗಿಲ್ಲ, ಅನೇಕ ಕಡೆ ಮೀಟರ್‌ಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿ ಈ ಎಲ್ಲಾ ವಿಷಯಗಳನ್ನೂ ತಿಳಿಸುವುದಕ್ಕೆ ಚೀಫ್ ಮಿನಿಸ್ಟರ್‌ರವರ ಆಫೀಸಿಗೂ ಹತ್ತಾರು ಬಾರಿ ಓಡಾಡಿದ್ದು ಆಯಿತು, ಮೆರವಣಿಗೆ ಮಾಡಿದ್ದು ಆಯಿತು, ಅನೇಕ ಕಡೆ ಬೆಂಗಳೂರಿನ ಬೇರೆ ಬೇರೆ ಪ್ರದೇಶಗಳಲ್ಲಿ ಪಬ್ಲಿಕ್ ಮೀಟಿಂಗ್ ಮಾಡಿದ್ದು ಆಯಿತು. ಬೆಂಗಳೂರು ಬಂದ್ ಮಾಡಿದ್ದೂ ಆಯಿತು. ಏನೇ ಮಾಡಿದರೂ ಕೂಡ ಯಾವ ಪ್ರಯೋಜನವೂ ಆಗಿಲ್ಲ. ಅದೇಹಿಂದೆ ಇದ್ದ ಬ್ರಿಟಿಷ್ ಸರ್ಕಾರವಾಗಿದ್ದರೆ ಯಾವುದಾದರೂ ಒಂದು ನಿರ್ದಿಷ್ಟವಾದ ತೀರ್ಮಾನ ಮಾಡುತ್ತಾ ಇದ್ದರು. ಬೆಂಗಳೂರಿನ ನಾಗರಿಕರ ಬಗ್ಗೆ ಸರ್ಕಾರದವರಿಗೆ ಸ್ವಲ್ಪವೂ ಆಸಕ್ತಿ ಇಲ್ಲ. ಆಗಲಿ ನೋಡೋಣ ಎಂದು ಅನ್ನತಕ್ಕ ಮನೋಭಾವ ತಳೆದಿರತಕ್ಕ ಈ ಸರ್ಕಾರದವರಿಗೆ ಅನೇಕ ಸಾರಿ ನಾಗರಿಕರು ತಮ್ಮ ಪ್ರತಿಭಟನೆಯನ್ನು ತೋರಿಸಿದ್ದಾರೆ. ಅನೇಕ ಮನೆಗಳಿಗೆ ಎರಡು ಸಾವಿರ, ಸಾವಿರದ ಐನೂರು ರೂಪಾಯಿಗಳ ವಾಟರ್ ಬಿಲ್ ಕಳುಹಿಸಿದ್ದಾರೆ, ಯಾರೂ ಕೂಡ ಅದನ್ನು ಇದುವರೆಗೂ ಕೊಟ್ಟಿಲ್ಲ. ಅದಕ್ಕೆ ಯಾವ ಆಸಕ್ತಿಯನ್ನೂ ತೋರಿದದೆ ನಿರ್ಲಕ್ಷ್ಯರಾಗಿರುವುದನು ನಾವು ನೋಡುತ್ತಿದ್ದೇವೆ.

ಸ್ಲಂ ಹೋಗಬೇಕೆಂದು ಅನೇಕ ಸಂದರ್ಭಗಳಲ್ಲಿ ಮಾತನಾಡುತ್ತಾ ಇದ್ದಾರೆ. ಈಗ ಅವರು ಡಿಕ್ಟೇಟರ್ಸ್ ಆಗಿದ್ದಾರೆ ಏನು ಬೇಕಾದರೂ ಮಾಡಬಹುದು. ಸ್ಲಂಸ್ ಆದರೂ ತೆಗೆದು ಪುಣ್ಯ ಕಟ್ಟಿಕೊಳ್ಳಲಿಕ್ಕೆ ಅವರಿಂದ ಸಾಧ್ಯವಿದೆ.

ಇನ್ನು ಬೆಂಗಳೂರಿನ ಆಸ್ಪತ್ರೆಗಳ ವಿಚಾರ. ಅಲ್ಲಿಗೆ ಹೋಗಬೇಕಾದರೆ ಹಣವಂತರಾಗಿರಬೇಕು ಇಲ್ಲದೇ ಹೋದರೆ ಶಿಫಾರಸು ಇರಬೇಕು. ಇವೆರಡೂ ಇಲ್ಲದೇ ಹೋದರೆ ಯಾವ ವಿಧವಾದ ಚಿಕಿತ್ಸೆಯಾಗಲಿ, ಅನುಕೂಲತೆಯಾಗಲಿ ಸಿಕ್ಕುವುದಿಲ್ಲ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದು

(ಶ್ರೀ ಟಿ. ಆರ್. ಶಾಮಣ್ಣ)

ಕೊಳ್ಳುತ್ತಾರೋ ನೋಡಬೇಕು. ಆಸ್ಪತ್ರೆ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟಿನವರು ಯಾವ ರೀತಿ ನಡೆದುಕೊಳ್ಳುತ್ತಾರೆ ಎನುವುದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ನರಸಿಂಹರಾಜ ಕಾಲೋನಿಯಲ್ಲಿ ಇಬ್ಬರು ಜಗಳವಾಡಿದರು, ಯಾರೋ ಹೋಗಿ ಪೋಲೀಸ್‌ನವರನ್ನು ಕರೆದುಕೊಂಡು ಬಂದರು, ಅವರಿಬ್ಬರ ಪೈಕಿ ಒಬ್ಬನ ತಲೆಯ ಮೇಲೆ ಲಾಠಿಯಿಂದ ಹೊಡೆದು ತಲೆ ಒಡೆಯಿತು ಆಸ್ಪತ್ರೆಗೆ ಹೋದರು, 25 ರೂಪಾಯಿ ಕೊಟ್ಟರೆ ಸರ್ಟಿಫಿಕೇಟು ಕೊಡುತ್ತೇನೆ ಎಂದು ಅಲ್ಲಿ ಹೇಳಿದರಂತೆ. ತೊಂದರೆಗೆ ಸಿಕ್ಕುವ ಸಂದರ್ಭ ಬಂದಾಗ ಪೋಲೀಸ್‌ನವರು 50 ರೂಪಾಯಿ ಕೊಟ್ಟು ರಾಜಿ ಮಾಡಿಕೊಂಡರು. ಹೀಗಿರುವಾಗ ಆಸ್ಪತ್ರೆಗಳು ಪೋಲೀಸ್ ಇಲಾಖೆ ಎಷ್ಟು ಚೆನ್ನಾಗಿ ನಡೆಯುತ್ತವೆ ಎಂಬುದನ್ನು ನೀವೇ ನೋಡಿಕೊಳ್ಳಿ.

ಆಮೇಲೆ ಫ್ಯಾಮಿಲಿ ಪ್ಲಾನಿಂಗ್ ವಿಷಯ. ಇದಕ್ಕೆ ಸಾಕಾದಷ್ಟು ಖರ್ಚು ಮಾಡುತ್ತಾ ಇದ್ದೇವೆ, ಜನಸಂಖ್ಯೆ ಮಾತ್ರ ಬೆಳೆಯುತ್ತಾ ಇದೆ.

ಎಲೆಕ್ಟ್ರಿಸಿಟಿ ಟ್ಯಾರಿಫ್ ಬಹಳ ಹೆಚ್ಚು. ಬೇಕಾದಷ್ಟು ಸ್ಕೀಂಗಳನ್ನು ಹಾಕಿದ್ದೇವೆ. ಬೇಕಾದಷ್ಟು ವಿದ್ಯುಚ್ಛಕ್ತಿ ಇದ್ದರೂ ಕೂಡ ಮೊದಲು ಎರಡೂವರೆ ರೂಪಾಯಿ ಕೊಡುತ್ತಾ ಇದ್ದ ಮನೆಯವರು ಇವತ್ತು ಹತ್ತು ರೂಪಾಯಿ ಕೊಡಬೇಕಾಗಿದೆ. ಈ ದರವನ್ನು ಕಡಿಮೆ ಮಾಡಬೇಕು.

ಪ್ಲಾನಿಂಗ್ ಬಗ್ಗೆ ಹೇಳುತ್ತಾ ಇರುವುದೆಲ್ಲಾ ಬರೀ ಬಾಯಿ ಮಾತು ಆಗಿದೆ. ಕಾರ್ಯತಃ ಯಾವ ಪ್ರಯೋಜನವೂ ಆಗಿಲ್ಲ. ಏಕೆಂದರೆ ಜನಗಳಿಗೆ ಹೊಟ್ಟೆಗೆ ಇಲ್ಲ, ಬಟ್ಟೆ ಇಲ್ಲ, ವಾಸ ಮಾಡುವುದಕ್ಕೆ ಜಾಗ ಇಲ್ಲ, ಇಂತಹ ಪ್ಲಾನ್ ಮಾಡಿದ್ದರಿಂದ ಏನು ಪ್ರಯೋಜನವಾದ ಹಾಗೆ ಆಯಿತು? ಅನುಕೂಲವಾದದ್ದಕ್ಕೆ ಆಸಿಡ್ ಟೆಸ್ಟ್ ಎಂದರೆ ದುಡ್ಡು ಖರ್ಚು ಮಾಡಿದ್ದಕ್ಕೆ ತಕ್ಕ ಪ್ರತಿಫಲ ಜನರಿಗೆ ದೊರೆಯಬೇಕು ಅದು ಆಗದೇ ಇರುವಂತಹ ಪ್ಲಾನ್ ನಡೆದುಕೊಂಡು ಬರುವುದು ನಿಜವಾಗಿಯೂ ಖಂಡನೀಯವಾದದ್ದು. ಗೌರ್‍ನರ್ ಅಡ್ರೆಸ್‌ನಲ್ಲಿ ಜನಗಳ ಸೌಖ್ಯದ ಬಗ್ಗೆ, ಅನುಕೂಲ, ಕ್ಷೇಮದ ಬಗ್ಗೆ ಹೆಚ್ಚು ಗಮನ ಕೊಟ್ಟು ಈ ಅಡ್ರೆಸ್ ಕೊಟ್ಟಿದ್ದರೆ ಚೆನ್ನಾಗಿತ್ತು. ಆ ರೀತಿ ಮಾಡದೇ ಸುಮ್ಮನೆ ಕೆಲವು ಅಂಕಿ ಅಂಶಗಳನ್ನು ಕೊಟ್ಟು ಅಡ್ರೆಸ್ ಕೊಟ್ಟಿರುವುದು ಅಷ್ಟು ಹಿತಕರವಾಗಿಲ್ಲ ಎಂದು ಹೇಳುತ್ತೇನೆ. ಈಗಲಾದರೂ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ನಗರಾಡಳಿತ ಮಂತ್ರಿಗಳು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಜನಗಳು ತಿರುಗಿ ಬೀಳುವುದಕ್ಕೆ ಮುಂಚೆ ಬೆಂಗಳೂರಿನ ನಾಗರಿಕರಿಗೆ ಉಂಟಾಗಿರುವ ಕಷ್ಟವನ್ನು ಪರಿಹಾರ ಮಾಡಲು ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇ ಇದ್ದರೆ ದೇವರು ನಿಮಗೆ ಒಳ್ಳೆಯದು ಮಾಡುವುದಿಲ್ಲ, ಈಗಲಾದರೂ ನಿಮಗೆ ದೇವರು ಒಳ್ಳೆಯ ಬುದ್ಧಿಯನ್ನು ಕೊಡಲಿ ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಜಾಲಿಸತಗಿ (ಭಟ್ಕಳ್).—ವಿರೋಧ ಪಕ್ಷದ ಸದಸ್ಯರು ಟೀಕೆ ಬಗ್ಗೆ ಟೀಕೆ ಮಾಡುತ್ತಾರೆ ಎಂದು ನಮ್ಮ ಮಿತ್ರರು ಕೆಲವರು ಹೇಳಿದರು. ವೈಯಕ್ತಿಕವಾಗಿ ನಾವು ಯಾವುದನ್ನೂ ಟೀಕೆ ಮಾಡುವುದಿಲ್ಲ. ಮತ್ತೊಬ್ಬ ಸದಸ್ಯರು ನಾವು ಅರಿಶಿನ ಬಣ್ಣದ ಗಾಜನ್ನು ಹಾಕಿಕೊಂಡು ನೋಡುತ್ತೇವೆ. ನಮಗೆ ಕಾಣುವುದೆಲ್ಲಾ ಬಣ್ಣಬಣ್ಣವಾಗಿಯೇ ಕಾಣುತ್ತದೆ ಎಂದು ಹೇಳಿ ಟೀಕೆ ಮಾಡಿದರು. ನಾವು ಕಂಡದ್ದು ಕಂಡ ಹಾಗೆ ಹೇಳಿದರೆ ತಮಗೆ ಕೆಂಡದಂತಹ ಕೋಪ ಬರುತ್ತದೆ, ಕುಂಡೆ ಉರಿಯಾಗುತ್ತದೆ ಎಂದು ಹೇಳಿ ನಾನು ಅವರಿಗೆ ಹೇಳಬಯಸುತ್ತೇನೆ.

ದಕ್ಷಿಣ ಕನ್ನಡದ ಪುತ್ತೂರಿನ ಮಾನ್ಯ ಸದಸ್ಯರು ಕಾಂಗ್ರೆಸ್‌ನಲ್ಲಿ ಪಂಚಮದಳ ಆಗಿ ಕಾಂಗ್ರೆಸ್ ಸೋಲುವ ಹೊತ್ತು ಬಂತು ಎಂದು ಹೇಳಿದರು, ಅದು ಕಾಂಗ್ರೆಸ್‌ನ ಪಂಚಮದಳದಿಂದ ಅಲ್ಲ, ಕಾಂಗ್ರೆಸ್‌ನವರು ಮುಖ್ಯವಾದ ಸಮಸ್ಯೆಗಳನ್ನು ಬಿಡಿಸಲಿಕ್ಕೆ ಹತ್ತಿ ಅದರಲ್ಲಿ ವಿಫಲರಾದದ್ದರಿಂದ ಆ ರೀತಿ ಆಯಿತು. ಹಸಿದ ಜನತೆಗೆ ಅವರು ಊಟಕ್ಕೆ ಕೊಡಲಿಲ್ಲ, ಅದರಿಂದ ಅವರು ನಿರಾಶರಾಗಿ ವಿರೋಧ ಪಕ್ಷದವರಿಗೆ ಓಟು ಕೊಟ್ಟರು ಎಂದು ಹೇಳಿ ಅವರಿಗೆ ಹೇಳಬಯಸುತ್ತೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ರೀತಿ ಆಗಿದೆ ಎಂಬುದನ್ನು ಅವರೇ ನೋಡಿಕೊಳ್ಳಲಿ. ಈ ಚುನಾವಣೆಯಲ್ಲಿ ಜನತೆ ಬೇಸತ್ತು ನಿರಾಶರಾಗಿ ಕಾಂಗ್ರೆಸ್ ಪಕ್ಷದ ಅನೇಕ ಸದಸ್ಯರನ್ನು ಸೋಲಿಸಿ ವಿರೋಧಪಕ್ಷದವರನ್ನು ಚುನಾವಣೆ ಮಾಡಿಕಳುಹಿಸಿದ್ದಾರೆ. ಇನ್ನು ಐದು ವರ್ಷಗಳಲ್ಲಿ ಚೆನ್ನಾಗಿ ಕೆಲಸ ಮಾಡದಿದ್ದರೆ ಈಗ ಚುನಾವಣೆಯಾಗಿ ಬಂದಿರತಕ್ಕ ಕಾಂಗ್ರೆಸ್ಸಿನವರೂ ಕೂಡ ಅಲ್ಲಿ ಚುನಾಯಿತರಾಗಿ ಬರುವುದಿಲ್ಲ ಎಂದು ಹೇಳಿ ಜನತೆಯ ಪತಿಯಿಂದ ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಮಂಗಳೂರು ಮತ್ತು ಹಾಸನ ರೈಲ್ವೆ ಕೆಲಸ ಆಗುತ್ತಿದೆ. ಎಲ್ಲಾ ಇಂಡಸ್ಟ್ರೀಸ್ ಡೀಸೆಂಟ್ರಲೈಸ್ ಮಾಡಬೇಕೆಂದು ಕಾಂಗ್ರೆಸ್‌ನವರು ಹೇಳುತ್ತಾರೆ, ಆದರೆ ಅದಕ್ಕೆ ಬದಲಾಗಿ ಎಲ್ಲವನ್ನೂ ಸೆಂಟ್ರಲ್‌ಲೈಸ್ ಮಾಡುತ್ತಾ ಇದ್ದಾರೆ. ಫಲವತ್ತಾದ ಬೇಕಾದಷ್ಟು ಆಹಾರವನ್ನು ಬೆಳೆಯುವಂತಹ

ಸ್ಥಳವನ್ನು ತಮಗೆ ಬೇಕು ಎಂದು ಹೇಳಿ ಆಕ್ವೈರ್ ಮಾಡಿಕೊಂಡಿರುತ್ತಾರೆ, ಇದು ಯಾವ ನ್ಯಾಯ? ಈ ನಾಲ್ಕನೆಯ ಚುನಾವಣೆಯಲ್ಲಿ ನಮ್ಮ ಪ್ರದೇಶದವರು ಮತ್ತು ಮಲೆನಾಡಿನವರು ಸರ್ಕಾರದವರಿಗೆ ಒಳ್ಳೆಯ ಮಾರ್ಗದರ್ಶನ ಮಾಡಿದ್ದಾರೆ. ಬರುವ ಐದು ವರ್ಷದಲ್ಲಿ ಕಾಂಗ್ರೆಸ್‌ನವರು ಸರಿಯಾಗಿ ಕೆಲಸ ಮಾಡದಿದ್ದರೆ ಬಯಲು ಸೀಮೆಯವರೂ ಕೂಡ ನಮ್ಮ ಜೊತೆಯಲ್ಲಿ ಸೇರಿಕೊಂಡು ಸರಿಯಾಗಿ ಬುದ್ಧಿ ಕಲಿಸುತ್ತಾರೆ ಎಂದು ನಾನು ಅವರಿಗೆ ಹೇಳಬಯಸುತ್ತೇನೆ. ಹಿಂದಿನ ಮಂತ್ರಿಮಂಡಲದಲ್ಲಿ ತರುಣರೂ ಉತ್ಸಾಹಶಾಲಿಗಳೂ ಆಗಿದ್ದಂಥ ರಾಮಕೃಷ್ಣ ಹೆಗ್ಗಡೆಯವರೂ ಮತ್ತು ವೀರೇಂದ್ರ ಪಾಟೀಲರೂ ಇದ್ದರು. ಈಗಿರತಕ್ಕ ಮಂತ್ರಿಮಂಡಲದಲ್ಲೂ ಅವರಿದ್ದಾರೆ. ಇವರು ಸಮಾಜವಾದೀ ಸ್ವರೂಪದ ಸಮಾಜವನ್ನು ಕಟ್ಟುತ್ತಾರೆಂದು ನಾವೆಲ್ಲರೂ ಅಂದು ಕೊಂಡಿದ್ದೆವು. ಆದರೆ ಇಲ್ಲಿಯವರೆಗೂ ಹಾಗೆ ಕೆಲಸ ಮಾಡಲಿಲ್ಲ. ನಾವು ಏನನ್ನು ನಿರೀಕ್ಷಿಸಿದ್ದೆವೋ ಅದಕ್ಕೆ ಪ್ರತಿಯಾಗಿ ಇವರಿಂದ ದೇಶದಲ್ಲಿ ಆಗಬಾರದ ಅನಾಚಾರಗಳೂ ಅತ್ಯಾಚಾರಗಳೂ ಆದವು. ನಾನು ಅವುಗಳನ್ನು ಹೇಳಬಯಸುವುದಿಲ್ಲ; ಯಾಕೆ ಎಂದರೆ ಇನ್ನಾದರೂ ಇವರು ತಮ್ಮ ಲೋಪದೋಷಗಳನ್ನು ತಿದ್ದಿಕೊಂಡು ಉತ್ತಮ ಸೇವೆಯಲ್ಲಿ ನಿರತರಾಗಲಿ ಕಳೆದ 5 ವರ್ಷಗಳಲ್ಲಿಯೂ ಮತ್ತು ಬರಲಿರುವ ಮುಂದಿನ 5ವರ್ಷ ಗಳಲ್ಲಿಯೂ ನಮ್ಮ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ನೀರಾವರಿ ಕಾಂಗಾರಿಗಳ ಬಗ್ಗೆ ಹಾಗೂ ಏರುತ್ತಿರುವ ಬೆಲೆಗಳನ್ನು ತಡೆಗಟ್ಟುವ ವಿಚಾರದಲ್ಲಿ ಮತ್ತು ನಿರುದ್ಯೋಗಿಗಳ ಸಮಸ್ಯೆಯನ್ನು ಪರಿಹರಿಸತಕ್ಕ ವಿಷಯದಲ್ಲಿ ಏನನ್ನಾದರೂ ಈ ವರದಿಯಲ್ಲಿ ಹೇಳಿದ್ದಾರೇನೋ ಎಂದು ನೋಡಿದರೆ ಇದರಲ್ಲೇನೂ ಹೇಳಿರುವುದಿಲ್ಲ.

ಇನ್ನು ದೇಶದಲ್ಲಿ ನೀರಾವರಿ ಸೌಲಭ್ಯಗಳನ್ನು ಉತ್ತಮಗೊಳಿಸಿ ಹೆಚ್ಚು ಆಹಾರ ಉತ್ಪಾದನೆಗೆ ಸಹಾಯಕವಾಗುವಂತೆ ಮಂತ್ರಿಗಳಿಗೆ ಪೋರ್ಟ್‌ಫೋಲಿಯೋಗಳ ಹಂಚಿಕೆಯಾಗಿಲ್ಲ. ಅರಣ್ಯ ಶಾಖೆ ಹಾಗೂ ವ್ಯವಸಾಯ ಖಾತೆ ಇವು ಒಬ್ಬೊಬ್ಬರಲ್ಲಿ ಒಂದೊಂದು ಸೇರಿಕೊಂಡಿವೆ. ಈ ಎರಡೂ ಒಬ್ಬರಲ್ಲೇ ಇದ್ದರೆ ಚೆನ್ನಾಗಿತ್ತು. ಆದುದರಿಂದ ಶ್ರೀಮಾನ್ ನಿಜಲಿಂಗಪ್ಪನವರು ಅರಣ್ಯ ಇಲಾಖೆಯನ್ನು ತಾವೆ ಇಟ್ಟುಕೊಳ್ಳಬೇಕು, ಇಲ್ಲವೆ ಇವರು ತಮ್ಮಲ್ಲಿರತಕ್ಕ ವ್ಯವಸಾಯ ಖಾತೆಯನ್ನು ಶ್ರೀ ಬಿ. ರಾಚಯ್ಯನವರಿಗೆ ವಹಿಸಿದರೆ ಈ ಕಾರ್ಯ ಸುಗಮವಾಗಿ ನಡೆಯುವುದೆಂದು ನನಗೆ ನನಿಸುತ್ತದೆ. ಇನ್ನು ನಮ್ಮಲ್ಲಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿಕೊಡತಕ್ಕ ಬಗ್ಗೆ ಹೆಚ್ಚಿನ ಅವಕಾಶವಿದೆ. ಅಲ್ಲಿ ಶರಾವತಿ ಯೋಜನೆಯ ಕೆಲಸಗಳಾದ ನಂತರ ಶರಾವತಿ ವ್ಯಾಲಿಯಿಂದ ಕೆಳಕ್ಕೆ 12 ಮೈಲಿಗಳತನಕ ಅಂದರೆ ನಗರಬಸ್ತಿಕೇರಿಯಿಂದ ಇಡಗುಂಜಿಯವರೆಗೂ ನೀರಾವರಿ ಕಾಮಗಾರಿಗೆ ಬಹಳ ಅನುಕೂಲವಿದೆ. ಆ ಪ್ರದೇಶವನ್ನು ಈ ಕೆಲಸಕ್ಕೆ ಉಪಯೋಗಿಸಿಕೊಂಡರೆ ಹೆಚ್ಚಿನ ಅನುಕೂಲವಾಗುತ್ತದೆ. ಶರಾವತಿಯ ಅಣೆಕಟ್ಟೆಯನ್ನು ಹಾಕಿದ ಮೇಲೆ ಅಲ್ಲಿ ಸೀನೀರು ಆಗಿದೆ. ಅಲ್ಲಿ ಮಳೆ ಹೆಚ್ಚು ಬಿದ್ದಾಗ ಕೆಲವು ವೇಳೆ ಶರಾವತಿಯ ನೀರನ್ನು ಏಕಾಏಕಿ ಬಿಡುವುದರಿಂದ ಕೆಳಗಿನ ರೈತರ ಪೀಕೆಲ್ಲಾ ಹಾಳಾಗಿ ಹೋಗುತ್ತಿದೆ. ಆದುದರಿಂದ ಅಲ್ಲಿಗೆ ವಿದ್ಯುಚ್ಛಕ್ತಿಯನ್ನು ಮತ್ತು ಪಂಪಸೆಟ್ಟುಗಳನ್ನೂ ಒದಗಿಸಬೇಕೆಂದು ಹಿಂದೆ ಅಲ್ಲಿಗೆ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಬಂದಿದ್ದಾಗ್ಗೆ ನಾನು ಘಂಟಾಘೋಷವಾಗಿ ತಿಳಿಸಿದ್ದೆನು. ಚುನಾವಣೆ ಪ್ರಚಾರದ ಕಾಲಕ್ಕೆ ಅವರು ಸದ್ಯದಲ್ಲಿ ಜಲವಳ್ಳಿಯವರೆಗೆ ಸೌಲಭ್ಯಗಳನ್ನು ಒದಗಿಸುವುದಾಗಿ ಭರವಸೆಯನ್ನು ಕೊಟ್ಟಿದ್ದರು. ಇಲ್ಲಿಯವರೆಗೂ ಅವರ ಭರವಸೆ ಫಲಪ್ರದವಾಗಿಲ್ಲ. ಅಲ್ಲಿರತಕ್ಕ ರೈತರಿಗೆ ಸರ್ಕಾರದವರು ಈ ಸೌಲಭ್ಯಗಳನ್ನು ಪುಕ್ಕಟ್ಟೆಯಾಗಿ ಒದಗಿಸಬೇಕಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ಸರ್ಕಾರದವರು ನಮ್ಮ ಹೊನ್ನಾವರ ತಾಲ್ಲೂಕಿನ ಶರಾವತಿ ಕೊಳ್ಳದಲ್ಲಿ ಏನೂ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಶ್ರೀಮಾನ್ ವೀರೇಂದ್ರ ಪಾಟೀಲರವರು ಇನ್ನೂ ತರುಣರು, ಅವರು ಇನ್ನೂ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡಿದರೆ ಅವರ ಪ್ರತಿಭೆ ದೇಶದಲ್ಲಿ ಇನ್ನೂ ಹೆಚ್ಚಾಗುವುದು. ಆದುದರಿಂದ ಅವರು ಈ ಕಾರ್ಯಗಳ ಕಡೆಗೆ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಕೊಡಲಾಗಿದ್ದ ವೇಳೆಯ ಅವಧಿ ಪೂರೈಸಿತು. ಈಗ ಶ್ರೀಮಾನ್ ಬೆಲ್ಲದ ನಾಗಪ್ಪನವರಿಗೆ ಮಾತನಾಡಲು ಅವಕಾಶ ಕೊಡಲಾಗಿದೆ.

ಶ್ರೀ ಎನ್. ಎಲ್. ಬೆಲ್ಲದ (ರಾಣೆಬೆನ್ನೂರು).—ಸಭಾಪತಿಯವರೇ, ಮೊನ್ನೆ ರಾಜ್ಯಪಾಲರು ಮಾಡಿದಂಥ ಭಾಷಣವನ್ನು ಕೇಳಿದ ಕರ್ನಾಟಕದ ಜನತೆಯು ಬಹಳ ನಿರಾಶರಾಗಬೇಕಾಗಿದೆ. ಈ ರಾಜ್ಯದಲ್ಲಿ ಕಳೆದ 20 ವರ್ಷಗಳಿಂದಲೂ ಒಂದೇ ಒಂದು ರಾಜಕೀಯ ಪಕ್ಷ ದೇಶಾಡಳಿತವನ್ನು ನಡೆಸಿಕೊಂಡು ಬಂದಿದೆ. ಈ ಆಡಳಿತ ಪಕ್ಷ ರಾಜ್ಯದ ಬಹು ಮುಖ್ಯ ಸಮಸ್ಯೆಗಳಾದ ಆಹಾರದ ಕೊರತೆಯನ್ನು ನಿವಾರಿಸುವ ಬಗ್ಗೆ, ದೇಶದಲ್ಲಿರತಕ್ಕ ನಿರುದ್ಯೋಗವನ್ನು ನಿವಾರಣೆ ಮಾಡುವ ಬಗ್ಗೆ ಅಂದರೆ ಈ ಸಮಸ್ಯೆಗಳನ್ನು ಬಿಡಿಸಲಿಕ್ಕೆ ಇವರಿಂದ ಸಾಧ್ಯವಾಗಿಲ್ಲ ಎಂಬುದು ಎದ್ದು ಕಾಣುತ್ತಿದೆ. ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದ ಕಾಲದಿಂದಲೂ ಇಲ್ಲಿಯವರೆಗೆ ಮೂರು ಮಹಾ ಯೋಜನೆಗಳು ಮುಗಿದು ನಾವು ಇಂದು ನಾಲ್ಕನೆಯ ಮಹಾಯೋಜನೆಯಲ್ಲಿ ಕಾಲಿಡತಕ್ಕ

(ಶ್ರೀ ಎನ್. ಎಲ್. ಬೆಲ್ಲದ)

ಸಮಯದಲ್ಲಿ ಸರ್ಕಾರದವರು ದೇಶದಲ್ಲಿ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡತಕ್ಕ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಅನ್ನುವುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಪ್ರಸ್ತಾಪ ಮಾಡಿಲ್ಲ. ನನಗಾದರೂ ಇದರಿಂದ ಏನು ಕಂಡುಬರುತ್ತಿದೆಯೆಂದರೆ, ಕಳೆದ 20 ವರ್ಷಗಳಿಂದಲೂ ರಾಜ್ಯಾಡಳಿತವನ್ನು ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಹೊರ ರಾಷ್ಟ್ರಗಳಿಂದ ಸಾಲಮಾಡಿ ತಂದಿರತಕ್ಕ ಹಣವನ್ನು ಅದನ್ನೂ ಖರ್ಚುಮಾಡಿ ಅದೂ ಸಾಲದೆ, ದೇಶದಲ್ಲಿದ್ದ ರೈತವಾರಿ ಜನರ ಮೇಲೂ ಹಾಗೂ ಇತರರ ಮೇಲೂ ಹೊರಲಾರದಷ್ಟು ಕರಭಾರಗಳನ್ನು ಹೇರಿ ಅವರಿಂದ ವಸೂಲ್ಮಾಡಿದ ಹಣವನ್ನೂ ಖರ್ಚುಮಾಡಿ ಏನು ಇವರು ಒಂದು ಪ್ರಗತಿಯನ್ನು ಸಾಧಿಸಿದ್ದಾರೋ ಈ ಎರಡನ್ನೂ ಹೋಲಿಕೆ ಮಾಡಿದರೆ ಇವರು ಮಾಡಿದ ಪ್ರಗತಿ ಪ್ರಗತಿಯಲ್ಲವೆಂದೇ ಬಹಳ ವಿಷಾದದಿಂದ ಹೇಳಬೇಕಾಗಿದೆ. ಕಳೆದ ಮೂರು ಯೋಜನೆಗಳಿಂದ ಇವರು ಖರ್ಚು ಮಾಡಿರತಕ್ಕ ಹಣಕ್ಕೂ ಸಾಧಿಸಿರತಕ್ಕ ಪ್ರಗತಿಗೂ ತಾಳೆ ಹಾಕಿದರೆ ಈ ಪ್ರಗತಿ ಗಣನೆಗೆ ಬಾರದಂಥದು. ನಮ್ಮ ರಾಜ್ಯದಲ್ಲಿ ಸುಮಾರು ಶೇಕಡ 70ರಷ್ಟು ರೈತವಾರಿ ಜನರಿದ್ದಾರೆ. ಇವರು ವ್ಯವಸಾಯವೊಂದನ್ನೇ ಅವಲಂಬಿಸಿರತಕ್ಕ ಜನ. ಇವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾಗಿತ್ತು. ಆದರೆ ಅತ್ತ ಕಡೆ ಸರ್ಕಾರ ಅಲಕ್ಷ್ಯ ಮನೋಭಾವವನ್ನು ತಾಳಿದೆ. ಆದುದರಿಂದಲೇ ದೇಶದಲ್ಲಿ ಮೂರು ಮಹಾ ಯೋಜನೆಗಳು ಮುಗಿದಾಗ್ಯೂ ಜನರಿಗೆ ತಿನ್ನುವುದಕ್ಕೆ ಅನ್ನವಿಲ್ಲ, ದೇಶದಲ್ಲಿ ಎಲ್ಲಿ ನೋಡಿದರಲ್ಲಿ ಕ್ಷಾಮ ಅಶಾಂತತೆ ತಲೆದೋರಿದೆ. ಇನ್ನಾದರೂ ಸರ್ಕಾರ ತನ್ನ ಅಲಕ್ಷ್ಯ ಮನೋಭಾವವನ್ನು ಬಿಟ್ಟು ವ್ಯವಸಾಯದ ಕಡೆಗೆ ಹೆಚ್ಚಿನ ನಿಗಾ ವಹಿಸಬೇಕೆಂದು ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆಯ ಬಗ್ಗೆ ರೈತರಿಗೆ ಬಾವಿಗಳನ್ನು ಮಾಡಿಸಿಕೊಳ್ಳಲು ಸರ್ಕಾರ ಎಷ್ಟರಮಟ್ಟಿಗೆ ಸಹಾಯ ನೀಡಿದೆ ಎಂಬುದನ್ನು ವಿಚಾರ ಮಾಡೋಣ: ಬಾವಿಗೆ ಸಾಲ ಕೊಡತಕ್ಕ ಅವಕಾಶವನ್ನು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ವಹಿಸಿಕೊಡಲಾಗಿದೆ. ಆ ಭೂ ಅಭಿವೃದ್ಧಿ ಬ್ಯಾಂಕಿನ ಕಾನೂನು ಸಾಲ ಕೊಡತಕ್ಕ ವಿಚಾರದಲ್ಲಿ ಬಹಳ ಕಠಿಣವಾಗಿದೆ. ಅದನ್ನು ನೋಡಿ ರೈತರು ಸಾಲ ಕೇಳುವುದನ್ನೇ ಕೈಬಿಡುವುದಕ್ಕೆ ಹೊರಟಿದ್ದಾರೆ. ಅಲ್ಲಿ ಸಾಲ ಪಡೆಯಬೇಕಾದರೆ ರೈತನು ತನ್ನ ಜಮೀನಿಗೆ ಸಂಬಂಧಪಟ್ಟ 12 ವರ್ಷಗಳ ದಾಖಲಾತಿಗಳನ್ನು ಹಾಜರ್ಮಾಡಬೇಕಾಗಿದೆ, ಇದಕ್ಕೆ ಹೆಚ್ಚು ಹಣವನ್ನು ವ್ಯಯಮಾಡದೆ ಅವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ಇನ್ನು ಅಲ್ಲಿ ಸಾಲಪಡೆಯುವುದಕ್ಕೆ ಅರ್ಹತೆಯನ್ನು ಗಳಿಸಬೇಕಾಗಿದ್ದರೆ ನೂರು ರೂಪಾಯಿ ಸಾಲಕ್ಕೆ 10 ರೂಪಾಯಿಗಳನ್ನು ಕೊಟ್ಟು ಒಂದು ಷೇರನ್ನು ಪಡೆಯಬೇಕು. ಎಷ್ಟು ಸಾಲ ಬೇಕಾದರೂ ಆ ಪ್ರಮಾಣದಲ್ಲಿ ಸಾಲಗಾರನು ಷೇರುಗಳನ್ನು ಪಡೆದಿರಬೇಕು. ಅಷ್ಟೇ ಅಲ್ಲ ಅದರ ಜೊತೆಗೆ ರೂರಲ್ ಡಿಬೆಂಚರೆಂತ ನೂರಕ್ಕೆ 5 ರೂಪಾಯಿಗಳ ಪ್ರಕಾರ ಇದನ್ನೂ ಕೊಡಬೇಕು. ಇಷ್ಟೆಲ್ಲಾ ಆದಮೇಲೆ ಅಲ್ಲಿ ಭೂಮಿಯ ಕಿಮ್ಮತ್ತನ್ನು (ವ್ಯಾಲ್ಯು) ನಿಗದಿಮಾಡಲು ಬರತಕ್ಕವರಿಗೂ ಮತ್ತು ಸಾಲ ಕೊಡತಕ್ಕ ವಿಚಾರದಲ್ಲಿ ಲೆಕ್ಕಪತ್ರಗಳನ್ನು ನೋಡತಕ್ಕ ಲೀಗಲ್ ಅಡ್ವೈಜರಿಗೂ ಫೀಸನ್ನು ಬೇರೆ ಕೊಡಬೇಕು. ಇಷ್ಟೆಲ್ಲಾ ಖರ್ಚುಗಳನ್ನು ನಾವು ಜಮಾಹಿಡಿದು ನೋಡಿದರೆ ಒಬ್ಬ ಮನುಷ್ಯನು ಒಂದು ಬಾವಿಗೆ ಸಾಲ ಪಡೆಯುವುದಕ್ಕಾಗಿ ಕನಿಷ್ಟಪಕ್ಷ 500—600 ರೂಪಾಯಿಗಳನ್ನು ದಂಡದ ರೂಪದಲ್ಲಿ ತೆರಬೇಕಾಗಿದೆ. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಎಷ್ಟು ಉದಾರತ್ವ ತೋರಿಸಿದ್ದಾರೆಂಬುದನ್ನು ಈಗ ತಾವೆಲ್ಲರೂ ಅರ್ಥಮಾಡಿಕೊಳ್ಳಬಹುದು. ಅಷ್ಟೇ ಅಲ್ಲ. ನೀರಾವರೀ ಬಾವಿಗಳಿಗೆ ಭೂ ಅಭಿವೃದ್ಧಿ ಬ್ಯಾಂಕಿನವರು ಸಾಲ ಕೊಡುವುದು ಹೇಗೆ ಅಂದರೆ ರೈತನು ತನ್ನ ಯಾವ ಒಂದು ಜಮೀನಿನ ಮೇಲೂ ಸಹ ಯಾವ ತರಹ ಕಾರಣ, ಗೋಜ ಇರಬಾರದು, ಅಂತಹ ಜಮೀನುಗಳನ್ನು ಅವರು ಒತ್ತೇ ಇರಿಸಿಕೊಳ್ಳುತ್ತಾರೆ. ಇವತ್ತು ಪ್ರತಿಯೊಂದು ಗ್ರಾಮದಲ್ಲಿಯೂ ಪ್ರಾಥಮಿಕ ಸಹಕಾರ ಸಂಘಗಳಿರುತ್ತವೆ. ಪ್ರತಿಯೊಬ್ಬ ರೈತ ಮತ್ತು ಅವನ ಕುಟುಂಬದವರು ಹೊಂದಿರತಕ್ಕ ಜಮೀನಿಗೆ ಅನುಗುಣವಾಗಿ ಸಹಕಾರ ಸಂಘಗಳು ಸಾಲ ಕೊಡತಕ್ಕದೆಂದೂ ಅಂದರೆ ಒಂದು ಪತ್ತು ಎಂಬುದಾಗಿ ನಿರ್ಧಾರಮಾಡುತ್ತಾರೆ. ಅವರು ಒಬ್ಬ ರೈತನಿಗೆ 500 ಅಥವಾ ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಡಬಹುದು. ಆದರೆ ರೈತನ ಎಲ್ಲಾ ಜಮೀನುಗಳಿಗೆ ಎಷ್ಟು ಪತ್ತು ಎಂಬುದಾಗಿ ಮೊದಲು ಸಹಕಾರ ಸಂಘಗಳಲ್ಲಿ ನಿರ್ಣಯ ಮಾಡುತ್ತಾರೋ ಅಷ್ಟು ಸಾಲವನ್ನು ಅವನಿಗೆ ಕೊಡುವ ಪೂರ್ವದಲ್ಲಿ ಎಲ್ಲಾ ಜಮೀನುಗಳ ಮೇಲೆ ಬೋಜ್ ಕೂಡ್ರಿಸುತ್ತಾರೆ. ಹೀಗಾಗಿ ರೈತನ ಎಲ್ಲ ಜಮೀನುಗಳು ಸಹಕಾರಿ ಸಂಘಗಳ ಸಾಲಕ್ಕೆ ಒತ್ತೆಯಾಗಿ ತಕ್ಕೊಳ್ಳಲಾಗಿರುತ್ತವೆ. ರೈತನಾದವನು ಕೇವಲ 10 ಎಕರೆ ಮೇಲ್ಪಟ್ಟರೆ ಅವನು ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲವನ್ನು ಪಡೆಯಬಹುದು. ಇಲ್ಲದಿದ್ದರೆ ಇಲ್ಲ. ಅದ್ದರಿಂದ ದೊಡ್ಡ ದೊಡ್ಡ ಜಮೀನ್ದಾರರಿಗೆ ಇದರ ಸೌಲಭ್ಯವಾಗುತ್ತದೆ ಎನ್ನುವುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ

ಹೆಚ್ಚು ನೀರಾವರಿ ಮಾಡಬೇಕು. ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಯಬೇಕು ಎನ್ನುವ ನಿಜವಾದ ಉದ್ದೇಶ ಸರ್ಕಾರಕ್ಕೆ ಇದ್ದರೆ ಜಮೀನು ಕೊಡುವ ಚಿಕ್ಕ ಹಿಡುವಳಿದಾರರಿಗೂ ಸಾಲ ದೊರೆಯುವ ಅವಕಾಶಬೇಕು. ನಾನು ಭೂ ಅಭಿವೃದ್ಧಿ ಬ್ಯಾಂಕು ಮೂಲಕ ನೀರಾವರಿಗೆ ಸಾಲವನ್ನು ಕೊಡಬಾರದು ಎಂದು ಹೇಳುವುದಿಲ್ಲ. ಅದರ ಬಗ್ಗೆ ಇರತಕ್ಕ ಕಾನೂನು ಅಡಚಣೆಗಳನ್ನು ಸ್ವಲ್ಪ ಮಟ್ಟಿಗಾದರೂ ಸಡಿಲಮಾಡಬೇಕು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬರಗಾಲ ಸಂದರ್ಭದಲ್ಲಿ ರೈತರಿಗೆ ಬೀಜಗಳನ್ನು ಸಹಕಾರ ಸಂಘಗಳ ಮೂಲಕ ಹಂಚುವುದರಲ್ಲಿ ಯಶಸ್ವಿಯಾಯಿತೆಂದು ಬಹಳ ನಿರ್ಧಾರವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಇವತ್ತು ಸಹಕಾರ ಸಂಘಗಳ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂಬುದನ್ನು ವಿಚಾರಮಾಡಿದರೆ ಯಾವ ಸಹಕಾರ ಸಂಘಗಳಲ್ಲಿಯೂ ಬೀಜ ಸಂಗ್ರಹಣೆಯಾಗಲೀ, ಗೊಬ್ಬರ ಸಂಪ್ರಹಣೆಯಾಗಲೀ ಮಾಡುವ ಅರ್ಥಿಕ ಪರಿಸ್ಥಿತಿ ಇರುವುದಿಲ್ಲ. ಕ್ಯಾಶ್ ಕ್ರೆಡಿಟ್ ಸಾಲವನ್ನು ಕೊಟ್ಟರೆ ಮಾತ್ರ ಈ ವ್ಯವಹಾರಗಳನ್ನು ಮಾಡಬಲ್ಲವು ಅದರೆ ಈ ಸಾಲಗಳನ್ನು ತೆಗೆದುಕೊಳ್ಳತಕ್ಕ ಮತ್ತು ಕೊಡತಕ್ಕ ಒಂದು ಸಂಬಂಧ ಬ್ಯಾಂಕಿನವರಿಗೂ ಮತ್ತು ಸಹಕಾರ ಸಂಘಗಳಿಗೂ ಇದ್ದೇ ಇರುತ್ತದೆ. ಆದರೆ ಬ್ಯಾಂಕಿನವರು ಸಾಲವನ್ನು ಮಂಜೂರುಮಾಡುವಂತಹ ಕಾಲದಲ್ಲಿ ಬೀಜಗಳು ದೊರೆಯುವುದಿಲ್ಲ. ಬೀಜಗಳು ಸಿಗುವಂತಹ ಕಾಲದಲ್ಲಿ ಬ್ಯಾಂಕಿನ ಸಾಲ ಮಂಜೂರಾಗಿರುವುದಿಲ್ಲ. ಅದ್ದರಿಂದ ಎಷ್ಟುಮಟ್ಟಿಗೆ ಬೀಜಗಳು ಸೊಸೈಟಿ ಮೂಲಕ ಹಂಚಿಕೆಯಾಗಿದೆ ಎನ್ನುವುದನ್ನು ಯೋಚನೆ ಮಾಡಬೇಕು. ಅದಕ್ಕಾಗಿ ಸುಧಾರಿತ ಬೀಜಗಳನ್ನು ಸುರಕ್ಷಿತವಾಗಿ ಕಾಯಬೇಕು. ಜಾಗಬೇಕು ಅದಕ್ಕೆ ಬೇಕಾದಂಥ ಕ್ರಿಮಿನಾಶಕ ವಸ್ತುಗಳನ್ನು ಪ್ರತಿಯೊಂದು ಸಹಕಾರ ಸಂಘದಲ್ಲಿಯೂ ಇಟ್ಟಿರಬೇಕು. ಸರಕಾರ ಇವುಗಳಿಗೆ ಅವಕಾಶ ಮಾಡಿಲ್ಲ. ಒಟ್ಟಿನಲ್ಲಿ ನಮ್ಮ ದೇಶದಲ್ಲಿ ಬಹುತೇಕ ಯಾವ ಸಹಕಾರ ಸಂಘವೂ ಬೀಜ ಸಂಗ್ರಹಣೆಯ ಕಾರ್ಯವನ್ನು ಮಾಡುತ್ತಾ ಇಲ್ಲ. ಅಷ್ಟೇ ಅಲ್ಲ. ಬೀಜ ಹಂಚುವಿಕೆ ಸಹಕಾರ ಸಂಘಗಳ ಮೂಲಕ ತೃಪ್ತಿಕರವಾಗಿ ನಡೆದಿದೆ ಎನ್ನುವುದನ್ನು ನಂಬಲಿಕ್ಕೆ ಬಾರದಂತಹ ಮಾತಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಅಧಿಕವಾಗಿ ವ್ಯವಸಾಯಕ್ಕೆ ಬೇಕಾದ ರಾಸಾಯನಿಕ ಗೊಬ್ಬರವನ್ನು ಯಾವ ರೀತಿಯಲ್ಲಿ ಹಾಗು ಎಷ್ಟು ಉತ್ಪತ್ತಿ ಮಾಡಿದ್ದಾರೆಂಬ ಬಗ್ಗೆ ಈ 20 ವರ್ಷಗಳ ಅವಧಿಯಲ್ಲಿ ಅದರ ಬಗ್ಗೆ ಇದ್ದ ನಿಜವಾದ ಚಿತ್ರವನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೊಡಲಿಲ್ಲ. ಮುಂದೆಯೂ ಸಹ ವ್ಯವಸಾಯಕ್ಕೆ ಬೇಕಾದ ಗೊಬ್ಬರವನ್ನು ಯಾವರೀತಿ ರೈತರಿಗೆ ಒದಗಿಸಲು ವ್ಯವಸ್ಥೆ ಮಾಡಿದ್ದಾರೆ ಮತ್ತು ಎಷ್ಟು ಕ್ಷೇತ್ರಗಳಿಗೆ ರಾಸಾಯನಿಕ ಗೊಬ್ಬರವನ್ನು ಒದಗಿಸಬಹುದೆನ್ನುವ ವಿಷಯವನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಲಿಲ್ಲ. ಅಷ್ಟೇ ಅಲ್ಲದೆ ಮಿಶ್ರ ತಳಿ ಜೋಳದ ಬೆಳೆಯನ್ನು ಬಡ ರೈತರು ಬೆಳೆಯಲಿಕ್ಕೆ ಮುಂದೆ ಬಂದಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ದೇಶದಲ್ಲಿ ಮಿಶ್ರತಳಿ ಜೋಳದ ಬೆಳೆ ಹೆಚ್ಚಿಗೆ ಬೇಕು. ಅಂತಹ ಬೆಳೆಗಳ ಅವಶ್ಯಕವನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ಆದರೆ ರೈತರು ಮಿಶ್ರತಳಿ ಜೋಳದ ಬಗ್ಗೆ ಈಗ ಅನಾಸಕ್ತಿಯನ್ನು ತೋರಿಸುತ್ತಿದ್ದಾರೆ. ಅದು ಸರ್ಕಾರಕ್ಕೆ ಗೊತ್ತಿರಬಹುದು. ಎಷ್ಟೋ ಜನರು ಮಿಶ್ರತಳಿ ಜೋಳವನ್ನು ಬೆಳೆಯುವುದಕ್ಕೆ ಕಷ್ಟವಾಗುತ್ತಿರುವುದು ಎಂದು ಹೇಳಿದರು. ಸಾಕಾದಷ್ಟು ಗೊಬ್ಬರ ಮತ್ತು ಕ್ರಿಮಿನಾಶಕ ಸಲಕರಣೆಗಳು ನಮ್ಮಲ್ಲಿ ಇಲ್ಲದ್ದರಿಂದ ಮಿಶ್ರತಳಿ ಬೆಳೆಗಳು ನಮ್ಮ ಕೈಲಿ ಹತ್ತುವುದು ಕಷ್ಟವಾಗಿದೆ. ಅಂದಮೇಲೆ ಸರ್ಕಾರದವರು ಈ ದಿಸೆಯಲ್ಲಿ ಏನೂ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಸಾಕಷ್ಟು ರಾಸಾಯನಿಕ ಗೊಬ್ಬರ ಮತ್ತು ಉಪಕರಣಗಳು ರೈತರಿಗೆ ದೊರೆಯಲಿಲ್ಲ. ಆದಕಾರಣ ಬೆಳೆಗಳನ್ನು ಬೆಳೆದಂಥ ರೈತರು ನಷ್ಟಕ್ಕೆ ಒಳಗಾಗಿದ್ದರೂ ಅವರ ಕಡೆಗೆ ಹೆಚ್ಚು ಲಕ್ಷ್ಯ ಕೊಡುವುದರಲ್ಲಿ ಸರ್ಕಾರದವರು ಅನಾದರಣೆ ಮಾಡುತ್ತಿದ್ದಾರೆ. ಸರ್ಕಾರ ಇದನ್ನು ಗಮನಿಸಬೇಕು. ಅದೇ ರೀತಿಯಾಗಿ ವಿದ್ಯುಚ್ಛಕ್ತಿ ಸರಬರಾಜಿನ ವಿಷಯದಲ್ಲಿ ಬಹಳ ಬೆಂಬಲವನ್ನು ಕೊಡುತ್ತಿದ್ದೇವೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇವರು ಈಗಾಗಲೇ ಪಕ್ಕದ ರಾಜ್ಯಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಿದ್ದಾಗಿ ಹೇಳಿದ್ದಾರೆ. ಆದರೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ವಾರಕ್ಕೆ 3 ಸಲ ವಿದ್ಯುತ್ ಸರಬರಾಜು ಆಗುವುದೇ ಇಲ್ಲ. ಇಂತಹ ಒಂದು ಕೆಟ್ಟ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ವಿದ್ಯುತ್ ಸರಬರಾಜು ಮಾಡುವುದರಲ್ಲಿದೆ. ಇಷ್ಟೊಂದು ವಿದ್ಯುತ್ ಪಂಪುಸೆಟ್ಟುಗಳನ್ನು ಹಾಕಿದ್ದರೂ, ಇಷ್ಟೊಂದು ವಿದ್ಯುತ್ ಸಂವೃದ್ಧಿ ನಮ್ಮ ರಾಜ್ಯದಲ್ಲಿ ಆಗಿದ್ದರೂ ಸರಿಯಾಗಿ ವಿದ್ಯುತ್ ಸರಬರಾಜು ಆಗುತ್ತಿಲ್ಲ ಎನ್ನುವುದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ಇನ್ನು ಇದರ ಜೊತೆಗೆ ಚಿಕ್ಕಪುಟ್ಟ ನೀರಾವರಿ ಎಷ್ಟರಮಟ್ಟಿಗೆ ಮಾಡಿದ್ದಾರೆಂಬದನ್ನು ಗಮನಕ್ಕೆ ತೆಗೆದುಕೊಂಡರೆ ನಾನು ತಿಳಿದಿರುವ ಹಾಗೆ ಚಿಕ್ಕಪುಟ್ಟ ನೀರಾವರಿ ಯೋಜನೆಗಳನ್ನು ಇವರು ನೀರು ಇರುವ ಜಾಗದಲ್ಲಿ ಮಾಡಿದ್ದಾರೆಯೋ ಅಥವಾ ನೀರು ಇಲ್ಲದೇ ಇರುವ ಜಾಗದಲ್ಲಿ ಮಾಡಿದ್ದಾರೆಯೋ ಗೊತ್ತಿಲ್ಲ. ಹಣವೇನೋ ಖರ್ಚಾಗಿದೆ. ಅದನ್ನು ಇಲ್ಲಿ ಸೇರಿಸಿದ್ದಾರೆನ್ನುವ ಕಲ್ಪನೆ ನನಗಿದೆ.

(ಶ್ರೀ ಎನ್. ಎಲ್. ಬೆಲ್ಲದ)

ಉದಾಹರಣೆಗೆ ಹೇಳುವುದಾದರೆ ರಾಣಿಬೆನ್ನೂರು ತಾಲ್ಲೂಕಿನ ಹನುಮಾಪುರವೆಂಬ ಗ್ರಾಮ, ಅಲ್ಲಿ ಒಂದು ಕೆರೆಯನ್ನು ಕಟ್ಟಿದ್ದಾರೆ. ಎಂಟು ವರ್ಷಗಳಾದುವು. ಅದಕ್ಕೆ 4 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದರೂ ಒಂದು ಎಕರೆಗೆ ನೀರಾವರಿಯಾಗಿಲ್ಲ. ಇವೆಲ್ಲವನ್ನೂ ಸುಮ್ಮನೆ ಕಾಗದದಲ್ಲಿ ಮಾಡಿದ್ದೇವೆಂದು ಹೇಳುತ್ತಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ನಿಜವಾಗಿ ಇದರಿಂದ ಲಾಭ ಬರುವುದಿಲ್ಲ. ಈ ವಿಚಾರವನ್ನು ಅನೇಕ ತಜ್ಞರ ಗಮನಕ್ಕೂ ತಂದಿದ್ದೇವೆ. ಇದಕ್ಕೆ ಕ್ಯಾಚ್‌ಮೆಂಟ್ ಏರಿಯಾ ಸಾಕಷ್ಟಿಲ್ಲ ಅನ್ನುತ್ತಾರೆ. ಅಲ್ಲಿ ಆಗಿದ್ದ ಇಂಜನಿಯರ್ ಬೇರೆ ವರ್ಗವಾಗಿದ್ದಾರೆ ಈ ರೀತಿಯಾಗಿ ನಮ್ಮ ಯೋಜನೆಗಳು ನಡೆದರೆ ಇವರು ಬರೀ ಕಾಗದದಲ್ಲಿ ಮಾತ್ರ ಪ್ರಗತಿಯನ್ನು ತೋರಿಸಬಹುದೇ ವಿನಹ ನಿಜವಾಗಿ ಆಹಾರ ಸಮಸ್ಯೆಯನು ಬಿಡಿಸಲಿಕ್ಕೆ ಸಾಧ್ಯವಿಲ್ಲ. ಜನರಿಗೆ ಕಲ್ಯಾಣ ಮಾಡುವುದಕ್ಕೂ ಸಾಧ್ಯವಿಲ್ಲ. ಇಂತಹ ವಿಷಯಗಳ ಕಡೆಗೆ ಸರ್ಕಾರದವರು ಹೆಚ್ಚು ಗಮನಕೊಟ್ಟು ನೀರಾವರಿ ಯೋಜನೆಗಳ ಅಭಿವೃದ್ಧಿ ಮಾಡಬೇಕು. ಮಳೆ ಬಂದಾಗ ನೀರು ಬರ ತಕ್ಕಂಥ ಕೆರೆಗಳನ್ನು ಕಟ್ಟಲು ಪ್ರಯತ್ನ ಪಟ್ಟಿದ್ದಾರೆ. ನಮ್ಮಲ್ಲಿ ತುಂಗಭದ್ರಾ ಮತ್ತು ಕುಮುದ್ವತಿ ಬಹಳ ದೊಡ್ಡ ನದಿಗಳು. ಆ ನದಿಗಳ ಮೂಲಕ ಯಾತ-ನೀರಾವರಿ ಯೋಜನೆಯನ್ನು ಮಾಡಿದರೆ ಬರೀ ರಾಣಿಬೆನ್ನೂರು ತಾಲ್ಲೂಕಿಗೆ ಅಲ್ಲ, ಧಾರವಾಡ ಜಿಲ್ಲೆಗೂ ನೀರು ಸರಬರಾಜು ಮಾಡಬಹುದು. ಕಣ್ಣಿಗೆ ಕಾಣುವ ನೀರನ್ನು ಬಿಟ್ಟು ಕಣ್ಣಿಗೆ ಕಾಣಿಸದೆ ಇರತಕ್ಕ ನೀರನ್ನು ದೊರಕಿಸಿಕೊಳ್ಳಲು ಸರ್ಕಾರ ದವರು ಪ್ರಯತ್ನ ಮಾಡುತ್ತಾ ಇರುವುದರಿಂದ ಈ ಯೋಜನೆಗಳು ಯಶಸ್ವಿಯಾಗಿಲ್ಲವೆಂದು ಹೇಳ ಬಹುದು. ಇದರ ಜೊತೆಗೆ ಆಹಾರ ಸಮಸ್ಯೆಯನ್ನು ಬಿಡಿಸುವುದಕ್ಕಾಗಿ ಈಗ ಫಲಪುಷ್ಪ ವಗೈರೆ ಇಲಾಖೆ ಒಂದಿದೆ. ಈಗ ಇವೆಲ್ಲಾ ಹೊಸ ಇಲಾಖೆಗಳು ಹೆಚ್ಚಿಗೆ ಬೆಳೆಯುತ್ತಾ ಇವೆ. ಈಗಿನ ಆರ್ಥಿಕ ಮುಗ್ಗಟ್ಟಿನ ದೃಷ್ಟಿಯಿಂದ ಅವೆಲ್ಲವೂ ಭಾರ ಎಂದು ಅನ್ನಿಸುತ್ತದೆ. ಇವರನ್ನೇನಾದರೂ ಕೇಳಿದರೆ ನಮಗೆ ಸಾಕಷ್ಟು ಗೊಬ್ಬರ ಸಿಗುತ್ತಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಏನೂ ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅಭಿವೃದ್ಧಿ ಅಧಿಕಾರಿಗಳ ಕಡೆ ಹೋಗಿ ಕೇಳಿ ಎಂದು ಹೇಳುತ್ತಾರೆ. ಅಲ್ಲಿ ಹೋದರೆ ಧಾರವಾಡದಲ್ಲಿ ಇಂಥಾದ್ದು ಒಂದು ಕಚೇರಿ ಇದೆ ಅಲ್ಲಿ ಅವರು ಅದನ್ನು ಸರಬರಾಜು ಮಾಡುತ್ತಾರೆಂದು ಹೇಳುತ್ತಾರೆ. ಆದರೆ ಅಲ್ಲಿನ ಅಭಿವೃದ್ಧಿ ಅಧಿಕಾರಿಗಳು ಆ ತಾಲ್ಲೂಕಿನ ಸಾರ್ವತ್ರಿಕ ಕ್ಷೇತ್ರದ ಮಾಹಿತಿಯನ್ನು ಹೊಂದಿದವರಾಗಿರುತ್ತಾರೆ. ಅಲ್ಲದೇ ಅವರು ಗ್ರಾಮಸೇವಕರುಗಳ ಮುಖಾಂತರ ಎಲ್ಲ ಕಾರ್ಯಗಳನ್ನು ಮಾಡಿಸುತ್ತಾರೆ. ಆದ್ದರಿಂದ ಹೆಚ್ಚಿಗೆ ಇಂತಹ ಇಲಾಖೆಗಳಿಂದ ಸುಮ್ಮನೆ ಖರ್ಚೇ ವಿನಹ ಹೆಚ್ಚು ಪ್ರಯೋಜನವಾಗಲಾರದೆಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ವಿಷಯ. ಅದು ಲೆವಿ ವಸೂಲಾತಿ ಕ್ರಮ. ಇವತ್ತು ಒಂದು ಎಕರೆಗೆ 25 ಕೆ. ಜಿ. ವಸೂಲು ಮಾಡಬೇಕೆಂದು ಬಂದಿದೆ. ನಮ್ಮ ಏರಿಯಾ ಜೋಳದ ಏರಿಯಾ. ಇವತ್ತು ಕೇವಲ 10 ಎಕರೆ ಜಮೀನು ಪಡೆದಿರತಕ್ಕಂಥ ಒಬ್ಬ ರೈತ 10 ಕ್ವಿಂಟಾಲ್ ಬೆಳೆದರೆ ಅದರೊಳಗೆ ಎರಡೂವರೆ ಕ್ವಿಂಟಾಲ್ ಕೊಡಬೇಕೆಂದರೆ ಅವನ ವರ್ಷದ ಜೀವನ ಹೇಗೆ ನಡೆಯಬೇಕು ?

ಶ್ರೀ ಬಿ. ಡಿ. ಜತ್ತಿ (ಆಹಾರ ಮಂತ್ರಿಗಳು).—ರೈತರಿಗೆ ಎರಡು ಅಧಿಕಾರಗಳನ್ನು ಕೊಟ್ಟಿ ದ್ದೇವೆ. ಎಕರೆ ಬೇಸಿಸ್ ಮೇಲೆ ಲೆವಿ ಕೊಡಬಹುದು. ಕುಟುಂಬ ಸಂಖ್ಯೆಯಲ್ಲಿ ಎಷ್ಟು ಅವಲಂಬನೆ ಯಾದ ಮೇಲೆ ಇನ್ನೆಷ್ಟು ಉಳಿತಾಯವಾಗುತ್ತೋ ಅದರಲ್ಲಿ ಕೊಡಬಹುದು ಎಂಬುದಾಗಿ ಹೇಳಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಹೇಳುವುದು ನ್ಯಾಯವಲ್ಲ.

ಶ್ರೀ ಎನ್. ಎಲ್. ಬೆಲ್ಲದ್—ಹಾಗಾದರೆ 5 ಜನರಿರುವ ಕುಟುಂಬಕ್ಕೆ ಎಷ್ಟು ಕ್ವಿಂಟಾಲ್ ಬಿಡುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ಈಗ ಲೆಕ್ಕಮಾಡಿ ಕೊಡಲಿಕ್ಕೆ ಅವಕಾಶವಿಲ್ಲ. ಅದಕ್ಕೊಂದ ಫಾರ್ಮುಲ ಇದೆ. ನಿಮ್ಮ ಕಡೆಯಿಂದ ಈಗ ಒಂದು ಕಾಳೂ ಸಹ ತೆಗೆದುಕೊಳ್ಳುವುದಿಲ್ಲ.

ಶ್ರೀ ಎನ್. ಎಲ್. ಬೆಲ್ಲದ್.—ಈಗಾಗಲೇ ನಮ್ಮ ಕಡೆಗೆ ಬಹಳ ಒತ್ತಾಯದಿಂದ ಲೆವಿ ವಸೂಲು ಮಾಡತಕ್ಕ ಕ್ರಮ ನಡೆಯುತ್ತಿರುವುದರಿಂದ ಆ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಮಾನ್ಯ ಸಚಿವರು ನನಗೆ ಆ ವಿಚಾರದ ಬಗ್ಗೆ ಸಮಾಧಾನಕರದಿಂದ ತಿಳಿಸಿದ್ದರಿಂದ ಬಹಳ ಸಂತೋಷವಾಯಿತು.

5–30 P.M.

ರೈತ ಜಮೀನಿಗೆ ಕಂದಾಯವನ್ನು ಕೊಡುತ್ತಿದ್ದರೆ ಅದು ತನ್ನ ಜಮೀನಲ್ಲ ಸರ್ಕಾರದ ಜಮೀನು ಎನ್ನುವ ಭಾವನೆ ಬರುತ್ತದೆ. ಸರ್ಕಾರದವರು ಕಂದಾಯವನ್ನು ಸಂಪೂರ್ಣವಾಗಿ

ನೋಟ್ ಬಿಟ್ಟರೆ ರೈತ ಆಗ ಅದು ತನ್ನ ಜಮೀನು ದುಡಿಯಬೇಕು ಎನ್ನುವ ಭಾವನೆ ಅವನಿಗೆ ಬರುತ್ತದೆ. ಇದರ ಜೊತೆಗೆ ರೈತರ ಆರ್ಥಿಕ ಸ್ಥಿತಿಯನ್ನು ನೋಡಿದರೆ ಎಷ್ಟೋ ಜನ ರೈತರು ಕಂದಾಯವನ್ನು ಕಟ್ಟುವುದಕ್ಕೆ ಸಾಧ್ಯವಾಗದೇ ಇರುವಂತಹ ಪ್ರಸಂಗಗಳಿವೆ. ರೈತರ ಹತ್ತಿರ ಕಂದಾಯವನ್ನು ವಸೂಲು ಮಾಡುವುದಕ್ಕೆ ಸಾಧ್ಯವಾಗದೆ ಅವರ ಆಸ್ತಿಯನ್ನು ಸರ್ಕಾರದವರು ಹರಾಜು ಮಾಡಿದಂತಹ ಪ್ರಸಂಗಗಳು ಅನೇಕ ನಡೆದಿವೆ. ಒಂದು ಸಣ್ಣ ಕಂದಾಯದಿಂದ ಬರತಕ್ಕ ಹಣದಿಂದ ಸರ್ಕಾರ ಸಾಧಿಸುವುದಾದರೂ ಏನು ? ರೈತರಿಗೆ ಸಾಕಷ್ಟು ಸಾಲವನ್ನು ದೊರಕಿಸಿಕೊಡುವಂತಹ ಸಾಮರ್ಥ್ಯ ಸರ್ಕಾರಕ್ಕೆ ಇದೆ. ರೈತರಿಂದ ಭೂಕಂದಾಯವನ್ನು ವಸೂಲು ಮಾಡದೆ ಅವರಿಗೆ ಸವಲತ್ತನ್ನು ಮಾಡಿಕೊಡುವುದಾದರೆ ಅವರಿಗೆ ಅದು ತನ್ನ ಜಮೀನು ಎನ್ನುವ ಭಾವನೆ ಬರುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ರೈತರಿಂದ ಕಂದಾಯವನ್ನು ವಸೂಲು ಮಾಡುವುದನ್ನು ಬಿಟ್ಟು ಬಿಡಬೇಕು. ಸರ್ಕಾರದವರು ಮಾಡತಕ್ಕ ಯೋಜನೆಗಳು ಫಲಕಾರಿಯಾಗಬೇಕಾದರೆ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವುದು ಅವಶ್ಯ. ಅದಕ್ಷತೆಯಿಂದ ರಾಜ್ಯಭಾರ ಮಾಡಿದರೆ ರಾಜ್ಯದ ಪರಿಸ್ಥಿತಿ ಕೆಳಮಟ್ಟಕ್ಕೆ ಹೋಗುತ್ತದೆ ಎಂದು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತಂದು ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸುವ ಬಗ್ಗೆ ಶ್ರೀಮಾನ್ ಘೋರ್ಪಡೆಯವರು ಈ ಮಾನ್ಯ ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯಕ್ಕೆ ಸಹಕಾರಿಯಾಗಿ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ರಾಜ್ಯಪಾಲರ ಭಾಷಣವು ವರದಿಯಂತಿದೆ, ನಿರರ್ಥಕವಾಗಿದೆ ಎಂದು ವಿರೋಧಪಕ್ಷದ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಹೇಳಿದ್ದೇನೆ. ಅವರು ಹೇಳಿರತಕ್ಕ ಅಭಿಪ್ರಾಯಗಳನ್ನು ವಿವರವಾಗಿ ಬರೆದರೆ ಅದು ಒಂದು ದೊಡ್ಡ ಪುಸ್ತಕವಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಮುಖ್ಯವಾಗಿ ವಿದ್ಯುಚ್ಛಕ್ತಿ ವಿಷಯದಲ್ಲಿ ಹೇಳಿರತಕ್ಕ ವಿಷಯಗಳು ಬಹಳ ಗಮನಾರ್ಹವಾಗಿದೆ. ಈ ವರ್ಷದಲ್ಲಿ 600 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವವರಾಗಿದ್ದಾರೆ. ಅದೇ ರೀತಿಯಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 1,448 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಬಹಳ ಪ್ರಾಮುಖ್ಯವಾಗಿ ಇವೊತ್ತಿನ ದಿವಸ ಕಳೆದ 20 ವರ್ಷಗಳಿಂದ ಆಹಾರದ ಉತ್ಪತ್ತಿ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ ಆಹಾರದ ಅಭಾವವನ್ನು ಹೋಗಲಾಡಿಸಲು ಸರ್ಕಾರದವರು ಸತತವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಅದರಲ್ಲಿ ಎಷ್ಟೇ ತೊಂದರೆಗಳು ಬಂದರೂ. ಎಷ್ಟೇ ಕಷ್ಟಗಳು ಬಂದರೂ ಕೂಡ ಸರ್ಕಾರದವರು ಅದನ್ನು ಎದುರಿಸಿ ಅನೇಕ ಕಾರ್ಯಕ್ರಮಗಳನ್ನು ಮಾಡಿ ಬಹಳ ರೀತಿಯಲ್ಲಿ ಆಹಾರವನ್ನು ಉತ್ಪತ್ತಿ ಮಾಡಲು ಪ್ರಯತ್ನ ಮಾಡಿದ್ದಾರೆ. ನಮ್ಮ ದೇಶದಲ್ಲಿ ರೈತರು ಇನ್ನೂ ಹೆಚ್ಚು ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡಬೇಕಾಗಿದೆ. ಅದಕ್ಕೆ ವಿದ್ಯುಚ್ಛಕ್ತಿ ಬಹಳ ಪ್ರಾಮುಖ್ಯವಾದುದು. ಗ್ರಾಮಾಂತರ ಪ್ರದೇಶಗಳಿಗೆ ರೈತರಿಗೆ ಬೇಕಾದ ಪಂಪುಸೆಟ್ಟುಗಳನ್ನು ಒದಗಿಸಿ, ಸರಿಯಾದ ರೀತಿಯಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಾದರೆ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಎಂಬುದನ್ನು ಎಲ್ಲರೂ ತಿಳಿದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಗ್ರಾಮಗಳಿಗೆ ಇನ್ನೂ ವಿದ್ಯುಚ್ಛಕ್ತಿ ಬರಬೇಕಾಗಿದೆ. ಮಂಗಳೂರಿನ ಹತ್ತಿರ ಇರುವ ಬಜಾಳ ಗ್ರಾಮ ಜಪ್ಪಿನ ಮೊಗ್ರು ಗ್ರಾಮ ಒಳ್ಳೆಯ ಆಹಾರವನ್ನು ಬೆಳೆಯತಕ್ಕ ಪ್ರದೇಶ. ಅಲ್ಲಿಗೆ ವಿದ್ಯುಚ್ಛಕ್ತಿ ಬರಬೇಕು. ಅಲ್ಲಿಗೆ ಸರ್ಕಾರದವರು ಪಂಪುಸೆಟ್ಟುಗಳನ್ನು ಒದಗಿಸಬೇಕು. " ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಸತತವಾಗಿ ಪ್ರಯತ್ನ ಮಾಡುತ್ತಿದ್ದೇವೆ, ಆ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ " ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಸೂಚಿಸಿರುವಂತೆ ನಮ್ಮ ರಾಜ್ಯದ ಅನೇಕ ಭಾಗಗಳಿಗೆ ವಿದ್ಯುಚ್ಛಕ್ತಿ ಬಂದರೆ ಆಗಾಗ ಕ್ಷಾಮ ಬರತಕ್ಕ ಪ್ರದೇಶಗಳಲ್ಲಿ ಆಹಾರವನ್ನು ಬೆಳೆದು ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬಹುದು. ಎದುರು ಪಕ್ಷದ ಮುಖಂಡರು ಹೇಳಿದಹಾಗೆ ಇವೊತ್ತು ನಾವು ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗಿಲ್ಲ. ನಾವು ಪರದೇಶಗಳಿಗೆ ಆಹಾರಕ್ಕಾಗಿ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೋಗುತ್ತಿದ್ದೇವೆ. ಎಂಬುದಾಗಿ ತಿಳಿಸಿದ್ದರು. ಅದಕ್ಕೆ ಅನೇಕ ಕಾರಣಗಳುಂಟು. ಈ ವಿಚಾರದಲ್ಲಿ ನಾವು ಆಲೋಚನೆ ಮಾಡಬೇಕು. ಆಹಾರವನ್ನು ಹೆಚ್ಚು ಉತ್ಪತ್ತಿ ಮಾಡುವುದಕ್ಕೋಸ್ಕರ ಸರ್ಕಾರದವರು ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಆಹಾರವನ್ನು ಬೆಳೆದು ಆಹಾರದ ವಿಚಾರದಲ್ಲಿ ನಾವು ಸ್ವಾವಲಂಬಿಗಳಾಗುವಂತೆ ಮಾಡಲು ಪ್ರಯತ್ನ ಮಾಡಬೇಕು. ಪರದೇಶಗಳಿಂದ ಆಹಾರವನ್ನು ತರಬಾರದು ಎಂಬುದು ಸರಿಯಲ್ಲ, ಅಭಾವ ಇರುವಾಗ ತರಬೇಕು. ಇನ್ನೊಂದು ನಮಗೆ ತೊಂದರೆ ಏನೆಂದರೆ ಕೆಲವು ಸಾರಿ ಹೆಚ್ಚು ಮಳೆ ಬರುವಂಥಾದ್ದೂ, ನೆರೆಬರುವಂಥಾದ್ದು,

(ಶ್ರೀ ಬಿ. ಎಂ. ಇದಿನಬ್ಬ)

ತುಫಾನ್ ಬರುವಂಥಾದ್ದು, ಮತ್ತು ಮಳೆ ಬಾರದೇ ಇರುವುದು ಇವೆಲ್ಲಾ ತೊಂದರೆಗಳುಂಟಾಗುತ್ತದೆ. ಆದರಿಂದ ಅನೇಕ ಬೆಳೆಗಳು ಹಾಳಾಗುತ್ತಿವೆ. ಈ ನಿಸರ್ಗದ ಶಾಪವನ್ನು ಇವೆಲ್ಲವನ್ನು ಎದುರಿಸಿಕೊಂಡು ನಮ್ಮ ಸರ್ಕಾರದವರು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಪರದೇಶಗಳಿಂದ ನಮ್ಮ ದೇಶಕ್ಕೆ ಬಂದಿರತಕ್ಕ ತಜ್ಞರು ಮತ್ತು ಪರದೇಶಗಳಿಂದ ಬಂದಿರತಕ್ಕ ಮುಖಂಡರು ಈ ದೇಶದಲ್ಲಿ ನಡೆದಿರತಕ್ಕ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ನೋಡಿ, ''ಇಲ್ಲಿ ಒಳ್ಳೆಯ ಕೆಲಸವಾಗಿದೆ. ಇಲ್ಲಿಯ ಸರ್ಕಾರದವರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ'' ಎಂದು ಹೇಳಿದ್ದಾರೆ. ನಮ್ಮದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆಯಾಗಿದೆ ಎಂದು ನಾವು ಪತ್ರಿಕೆಗಳಲ್ಲಿ ಕೂಡ ಓದಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಂಗಾಳದಲ್ಲಿ ಮತ್ತು ಕಲ್ಕತ್ತಾದಲ್ಲಿ ಕ್ಷಾಮ ಬಂದಾಗ ಸಾವಿರಾರು ಜನರು ಸತ್ತು ಬಿದ್ದ ಚಿತ್ರ ಎಲ್ಲರಿಗೂ ನೆನಪಿದೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ನಮ್ಮದೇಶಕ್ಕೆ ಅನೇಕ ಕ್ಷಾಮ ಡಾಮರಗಳು ಬಂದರೂ ಕೂಡ ಯಾರೂ ಸಾಯದ ಹಾಗೆ ಒಂದಲ್ಲ ಒಂದು ರೀತಿಯಲ್ಲಿ ಜನತೆಗೆ ಸರ್ಕಾರದವರು ಆಹಾರವನ್ನು ಒದಗಿಸಿ ಸಹಾಯ ಮಾಡಿದ್ದಾರೆ ಎಂದು ಗಂಟಾಘೋಷವಾಗಿ ನಾನು ಹೇಳುತ್ತೇನೆ. ಮಳೆ ಬಾರದೇ ಇರುವುದು, ಹೆಚ್ಚು ಮಳೆ ಬರುವುದು, ತುಫಾನ್ ಬರುವುದು, ನೆರೆ ಬರುವುದು ಇವೆಲ್ಲವೂ ದೇವರ ಕಡೆಯಿಂದ ಬರತಕ್ಕವುಗಳು. ಹೀಗೆ ಆಹಾರದ ವಿಷಯದಲ್ಲಿ ನಾವು ಸ್ವಾವಲಂಬಿಗಳಾಗಲು ಅನೇಕ ತೊಂದರೆಗಳಿವೆ. ಈಗ ಕಳೆದ 5 ವರ್ಷಗಳಿಂದ ಆಗಿರತಕ್ಕ ಸನ್ನಿವೇಶಗಳನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. 1962ನೇ ಸಾಲಿನಲ್ಲಿ ಒಂದು ಪರಕೀಯರ ಧಾಳಿಯನ್ನು ಎದುರಿಸಬೇಕಾಯಿತು. ಆಮೇಲೆ 1965 ನೇ ಇಸವಿಯಲ್ಲಿ ಮತ್ತೊಂದು ಧಾಳಿಯನ್ನು ಎದರಿಸಿ ದೇಶದ ಸ್ವಾತಂತ್ರ್ಯವನ್ನು ಸಂರಕ್ಷಣೆ ಮಾಡಲಾಯಿತು. ಆ ಸಂದರ್ಭದಲ್ಲಿ ಬೇಕಾದಷ್ಟು ಜನ ಯೋಧರು ಮತ್ತು ಸರ್ಕಾರದವರು ಕೆಲಸ ಮಾಡಿ ಜಯವನ್ನು ಗಳಿಸಿದ್ದಾರೆ. ದೇಶದ ಸ್ವಾತಂತ್ರ್ಯವನ್ನು ರಕ್ಷಣೆ ಮಾಡಿದ್ದಾರೆ. ಅದು ನಮ್ಮೆಲ್ಲರ ಪವಿತ್ರವಾದ ಕರ್ತವ್ಯವೂ ಹೌದು. ನಮ್ಮ ದೇಶದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಆಹಾರದ ವಿಷಯದಲ್ಲಿ ತೊಂದರೆಗಳು ಬಂದಿವೆ. ಬರಗಾಲ ಬಂದರೂ ಕೂಡ ಸರ್ಕಾರದವರು ಯಾರು ಯಾರಿಗೆ ಯಾವರೀತಿ ಆಹಾರವನ್ನು ಒದಗಿಸಬೇಕೋ ಆ ರೀತಿ ಒದಗಿಸಿದ್ದಾರೆ. ಯಾರು ದೇಶದಲ್ಲಿ ಸಾಯದ ಹಾಗೆ ಒಬ್ಬೊಬ್ಬರಿಗೆ ಧರ್ಮಾರ್ಥವಾಗಿ 8 ಕೆ.ಜಿ. ಗೋಧಿಯನ್ನು ಹಂಚಿಕೆ ಮಾಡುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಸರ್ಕಾರದವರು ಧಾನ್ಯವನ್ನು ಜನಗಳಿಗೆ ಹಂಚಿಕೆ ಮಾಡಿದ್ದಾರೆ. ಕಳೆದ ಮಳೆಗಾಲದಲ್ಲಿ ಅಮೇರಿಕಾದಿಂದ ಎರಡು ಹಡಗುಗಳು ಗೋಧಿಯನ್ನು ಹೊತ್ತುಕೊಂಡುಬಂದು ಮಂಗಳೂರು ಬಂಧರಿನಲ್ಲಿ ಬಂದು ನಿಂತವು. ಆ ಗೋಧಿಯನ್ನು ಸರ್ಕಾರದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಕರ್ನಾಟಕದ ನಾನಾ ಭಾಗಗಳಲ್ಲಿ ಜನರಿಗೆ ಹಂಚಿಕೆ ಮಾಡಿದ್ದಾರೆ. ನಮ್ಮ ನೆರೆ ರಾಜ್ಯಗಳಲ್ಲಿ ಒಂದು ಕೆ.ಜಿ. ಅಕ್ಕಿಗೆ 2 ರೂಪಾಯಿ 3 ರೂಪಾಯಿಗಳಂತೆ ಮಾರಾಟ ಮಾಡಿದ್ದರೂ ಕೂಡ ನಮ್ಮ ರಾಜ್ಯದಲ್ಲಿ ಅಂಥಾ ಒಂದು ಪರಿಸ್ಥಿತಿ ಉಂಟಾಗಿಲ್ಲ. ಎರಡು ಹಡಗು ಗೋಧಿಯನ್ನು ಜನಗಳಿಗೆ ಹಂಚಿಕೆ ಮಾಡಿದ್ದಾರೆ. ಇದರಿಂದ ಸ್ವಲ್ಪ ಉಪಕಾರವಾಗಿದೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಸಂಪತ್ತು ಇದೆ. ಬೇಕಾದಷ್ಟು ಅರಣ್ಯ ಸಂಪತ್ತು ಇದೆ. ರಬ್ಬರ್ ಬೆಳೆಯನ್ನು ಬೆಳೆಯುತ್ತಾರೆ. ಬೇಕಾದಷ್ಟು ಜಲ ಸಂಪತ್ತು ಇದೆ. ನಮ್ಮಲ್ಲಿ ಮೀನುಗಾರಿಕೆಯನ್ನು ಮಾಡುವುದಕ್ಕೆ 180 ಮೈಲಿ ಕರಾವಳಿ ಪ್ರದೇಶ ಇದೆ. ಆದ್ದರಿಂದ ಮೀನುಗಾರಿಕೆಯನ್ನು ಹೆಚ್ಚು ಅಭಿವೃದ್ಧಿ ಮಾಡಲೇ ಬೇಕು. ಮೀನುಗಾರಿಕೆಯಿಂದ ಜೀವನ ಮಾಡತಕ್ಕವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲೇಬೇಕಾಗುತ್ತದೆ. ಈ ವಿಚಾರದಲ್ಲಿ ಸರ್ಕಾರದವರು ಬಹಳ ಒಳ್ಳೆಯ ಕೆಲಸಗಳನ್ನೂ ಕೂಡ ಮಾಡಿದ್ದಾರೆ. ನಮ್ಮಲ್ಲಿ ಮೀನುಗಾರಿಕೆಯನ್ನು ಮಾಡತಕ್ಕವರು ಯಂತ್ರಚಾಲಿತ ದೋಣಿಗಳಲ್ಲಿ ಮೀನುಗಳನ್ನು ಹಿಡಿದು ಅವುಗಳನ್ನು ಹೊರಗಡೆ ಹಾಗೂ ನಮ್ಮ ರಾಜ್ಯದಲ್ಲಿ ಒಳ್ಳೆಯ ರೀತಿಯಲ್ಲಿ ಮಾರಾಟಮಾಡಿದ್ದಾರೆ. ಮೀನು ಹಿಡಿಯಲು ಹಿಂದೆ ನೂಲು ಅಥವಾ ನಾರಿನ ಬಲೆಗಳನ್ನು ಉಪಯೋಗಿಸುತ್ತಾ ನಾಡದೋಣಿ ಉಪಯೋಗಿಸುತ್ತಿದ್ದರು. ಮೀನುಗಾರರು ಈಗ 177 ಯಂತ್ರಚಾಲಿತ ದೋಣಿಗಳಿಂದ ಸಮುದ್ರದಲ್ಲಿ ಮೀನು ಹಿಡಿಯುವ ದೃಶ್ಯ ನಿಜವಾಗಿಯೂ ನೋಡುವುದಕ್ಕೆ ಸಂತೋಷವಾಗುತ್ತದೆ. ಈ ವರ್ಷ 115 ಯಂತ್ರಚಾಲಿತ ದೋಣಿಗಳನ್ನು ಮಾಡಬೇಕು ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಜಪಾನ್ ದೇಶದವರ ಸಹಕಾರದಿಂದ ಮೀನಿನ ವ್ಯವಸಾಯ ಒಳ್ಳೆಯ ರೀತಿಯಲ್ಲಿ ನಡೆಯುತ್ತದೆ. ಇದು ಕರ್ನಾಟಕಕ್ಕೆ ಒಂದು ದೇವರ ವರಪ್ರಸಾದ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಶಿಕ್ಷಣ ವಿಚಾರದಲ್ಲಿ ಹೇಳುವುದಾದರೆ ಶಿಕ್ಷಣ ತಜ್ಞರು, ಬುದ್ಧಿವಂತರು ಆದ ಅಧ್ಯಾಪಕರ ನಿವೃತ್ತಿ ವಯಸ್ಸನ್ನು 55 ವರ್ಷದಿಂದ 58 ವರ್ಷಕ್ಕೆ ಹೆಚ್ಚಿಸಿದ್ದಾರೆ. ಇದು ಬಹಳ ಸಂತೋಷದ ವಿಷಯ. ಅವರು ದೇಶದ ಶಿಲ್ಪಿಗಳು. ಅದೇರೀತಿ ಅವರಿಗೆ ಹೆಚ್ಚಿನ ವೇತನ ದೊರಕುವಂತೆ ಮಾಡ ಬೇಕು. ಇದೇರೀತಿ ಸರ್ಕಾರದ ಇತರ ನೌಕರರ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಹೆಚ್ಚು ಮಾಡಿದರೆ ಅದರಿಂದ ಒಳ್ಳೆಯದಾಗುತ್ತದೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಕಲೆಯ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಕನ್ನಡದೇಶ ಸಾಹಿತಿಗಳಿಂದ ಕೂಡಿರುವ ದೇಶ, ಕವಿಗಳಿಂದ ಕೂಡಿರುವ ದೇಶ, ಲೇಖಕರಿಂದ ಕೂಡಿರುವ ದೇಶ; ಆದ್ದರಿಂದ ನಮ್ಮ ದೇಶದ ಸಾಹಿತಿಗಳಿಗೆ, ಕವಿಗಳಿಗೆ ಮತ್ತು ಲೇಖಕರಿಗೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡುವುದು ಅಗತ್ಯ. ಏನೇನು ಪ್ರೋತ್ಸಾಹ ಅವರಿಗೆ ಬೇಕು ಅದನ್ನೆಲ್ಲಾ ಒದಗಿಸಿಕೊಡುವುದು ಬಹಳ ಅಗತ್ಯ. ನಮ್ಮ ಕವಿಗಳಾದ ಶ್ರೀ ಕುವೆಂಪುರವರು ಹೇಳುವಂತೆ, ಕಲೆಯಿಲ್ಲದಂತಹ ಬರೇವನು ಶೂನ್ಯವೆಂದು ಹೇಳುತ್ತಾರೆ. ಅದೇ ರೀತಿ ನಮ್ಮ ರಾಜ್ಯಪಾಲರ ಭಾಷಣದಲ್ಲಿಯೂ ಕೂಡ ಎಲ್ಲಾ ತರದ ಅನುಕೂಲ ಅಭಿವೃದ್ಧಿಗಳನ್ನು ಮಾಡಿದ್ದನ್ನು ನಾವು ಕೇಳುತ್ತಿದ್ದೇವೆ. ಅದೇ ರೀತಿ ಕಾರ್ಮಿಕರ ವಿಚಾರದಲ್ಲೂ ಕೂಡ, ಅವರ ವಿವಾದವನ್ನು ಎಲ್ಲಾ ರೀತಿಯಲ್ಲೂ ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಬೇಕೆಂದು ಹೇಳುತ್ತೇನೆ. ಮೊನ್ನೆ ಒಬ್ಬ ಮಾನ್ಯ ಸದಸ್ಯರು ಹೇಳಿದರು, ಎಂ. ವಿ. ರಾಮರಾಯರು ಕಾರ್ಮಿಕ ಶಾಖೆಯನ್ನು ಇಟ್ಟುಕೊಂಡರೆ ಅಪಚಾರವಾಗಬಹುದು ಎಂದು. ಏನಾದರೂ ತೊಂದರೆ ಬಂದರೂ ಅದನ್ನು ಒಳ್ಳೆಯ ರೀತಿಯಲ್ಲಿ ಸುಧಾರಿಸಿಕೊಂಡು ಹೋಗಲು ಅವರು ಸಮರ್ಥರು ಎಂದು ನಾನಾದರೂ ತಿಳಿಯುತ್ತೇನೆ. ಇನ್ನು ಬೇರೆ ಕೆಲವರು ಕಾರ್ಮಿಕರ ವಿಚಾರದಲ್ಲಿ ಬಹಳ ದೀರ್ಘವಾದ ಭಾಷಣವನ್ನು ಮಾಡಿದ್ದಾರೆ. ಅದರ ಕಾಲಾವಕಾಶವಿಲ್ಲದುದರಿಂದ ಬೇರೆ ಸಂದರ್ಭ ಬಂದಾಗ ಹೇಳುತ್ತೇನೆ. ಒಟ್ಟಿನಲ್ಲಿ ರಾಜ್ಯಪಾಲರು ಭಾಷಣದಲ್ಲಿ ಬಹಳ ಮುಖ್ಯವಾದ ವಿಚಾರಗಳನ್ನೆಲ್ಲಾ ಹೇಳಿದ್ದಾರೆ. ನಮ್ಮ ಸರ್ಕಾರದವರು ಇದನ್ನು ಎಲ್ಲಾ ಒಳ್ಳೆಯ ರೀತಿಯಿಂದ ಮಾಡಿ ಕನ್ನಡ ನಾಡನ್ನು ಒಳ್ಳೆಯ ರೂಪಕ್ಕೆ ತಂದಿದ್ದಾರೆ. ಇನ್ನೂ ಒಳ್ಳೆಯ ಕೆಲಸಗಳನ್ನು ಮುಂದೆ ಮಾಡಬೇಕು. ವಿರೋಧಪಕ್ಷದ ಸದಸ್ಯರುಗಳ ರಚನಾತ್ಮಕವಾದ ಸಲಹೆಗಳನ್ನೇ ಕೊಡಬೇಕಲ್ಲದೆ ಅನ್ಯಥಾ ಅಡ್ಡಿ ಆತಂಕಗಳನ್ನು ತಂದೊಡ್ಡಬಾರದು. ಮೂರು ದಿನಗಳಿಂದಲೂ ವಿರೋಧಪಕ್ಷದವರು ಈ ರೀತಿ ಎಡರುತೊಡರುಗಳನ್ನು ಏರ್ಪಡಿಸುತ್ತಿದ್ದಾರೆ. ಕೊನೆಯದಾಗಿ ವಿರೋಧಪಕ್ಷಗಳ ಕುರಿತ ನಾನೇ ಬರೆದ ಒಂದು ಕವನದ ನಾಲ್ಕು ಪಂಕ್ತಿಗಳನ್ನು ಓದಿ ನಿಮ್ಮ ಮುಂದೆ ಹೇಳುತ್ತೇನೆ.

"ವಿಧಾಯಕ ಸಲಹೆಗಳಿಲ್ಲ
ದೇಶ ಕಟ್ಟಲು ನೆರವಂತೂ ಇಲ್ಲ
ಮಾತಿನ ಬರಿಯ ಚಕಮಕಿ
ಗದ್ದಲ ಮಾಡುವರು ಏಕಾಯಕಿ
ಇಷ್ಟರಲ್ಲೇ ಕಳೆಯುವರು ತಮ್ಮ ಪ್ರಾಣ
ಟೀಕೆ ಟಿಪ್ಪಣಿ ಮಾತ್ರ ಇವರ ಪಂಚಪ್ರಾಣ".

ಇಷ್ಟು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನಾಡಕರ್ಣಿ ದಯಾನಂದ ಸರ್ವೇಶ್ವರ್ (ಅಂಕೋಲಾ) :—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರವರ ಭಾಷಣದ ಮೇಲೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗ ಲೆವಿ ಪ್ರಶ್ನೆಯನ್ನು ಮಾತನಾಡುವಾಗ ಮಾನ್ಯ ಮಂತ್ರಿಯವರಾದ ಜತ್ತಿಯವರು ಲೆವಿಯನ್ನು ಬಲಾತ್ಕಾರವಾಗಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನಮ್ಮ ತಾಲ್ಲೂಕಿಗೆ ಬಂದರೆ ನಾನು ತಮಗೆ ನಿಜವಾದ ದೃಷ್ಟಾಂತವನ್ನು ತೋರಿಸುವೆನು. ರೈತರ ಮೇಲೆ ಎಷ್ಟು ಖಟ್ಲೆ ಹಾಕಿದ್ದಾರೆ ? ಮತ್ತು ಈ ರೈತರಿಗೆ ಕೊಡುವಂತಹ ಡಿಕ್ಲೆರೇಶನ್ ಫಾರ್ಮು ಇಂಗ್ಲಿಷ್‌ನಲ್ಲಿದೆ. ಅಧಿಕಾರಿಗಳಲ್ಲಿ ಕೇಳಿದರೆ ಅವರು ತಪ್ಪಿಸಿಕೊಳ್ಳುತ್ತಾರೆ. ಸಿಕ್ಕುವುದಿಲ್ಲ. ಕೆಲವು ಕಡೆಯ ಶಾನುಭೋಗರಿಗೆ ಇಂಗ್ಲಿಷೇ ಬರುವುದಿಲ್ಲ. ಇದರ ಬಗ್ಗೆ ನಾವು ಒಂದು ಅರ್ಜಿಯನ್ನು ಕೂಡ ಕಳಿಸಿದರೆ, ಅದು ಇದುವರೆಗೆ ವಿಚಾರಣೆಯಾಗಿಲ್ಲ. ರೈತರ ಮೇಲೆ ಇವತ್ತಿನ ದಿವಸ ಜಪ್ತಿ ಮಾಡುತ್ತಿದ್ದಾರೆ. ಈ ರೀತಿಯಾಗಿ ಮಾಡುವುದರಿಂದ ಜನಗಳಿಗೆ ತುಂಬಾ ತೊಂದರೆಯಾಗಿದೆ. ಮಾನ್ಯ ಜತ್ತಿಯವರಿಗೆ ಗೊತ್ತಿರಬಹುದು, ಬ್ರಿಟಿಷರ ಕಾಲದಲ್ಲಿ ವಾಲಂಟರಿ ಲೆವಿ ಎಂದು ಇತ್ತು. ಯಾವ ಭಾಗದಲ್ಲಿ ಹೆಚ್ಚು ಬೆಳೆಯುತ್ತದೆಯೋ, ಅಲ್ಲಿ ವಸೂಲು

(ಶ್ರೀ ನಾಡಕರ್ಣಿ ದಯಾನಂದ ಸರ್ವೇಶ್ವರ್)

ಮಾಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಡಿಫಿಸಿಟ್ ಇದೆ. ಅಂಥ ಕಡೆಗಳಲ್ಲೂ ಕೂಡ ಲೆವಿ ಮಾಡಿದ್ದಾರೆ. ಇನ್ನಾದರೂ ಈ ವಿಚಾರದಲ್ಲಿ ನ್ಯಾಯವಾದ ರೀತಿಯಲ್ಲಿ ವರ್ತಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ತೋಟಗಾರಿಕೆ ಪ್ರಶ್ನೆ. ಈಗ ನಮ್ಮಲ್ಲಿಂದ ಬೇರೆ ಕಡೆಗೆ ಏಲಕ್ಕಿ ಕಳುಹಿಸುತ್ತಾರೆ, ಮೆಣಸಿನಕಾಳು ಕಳಿಸುತ್ತಾರೆ, ಮತ್ತು ದಾಲಚಿನ್ನಿ ಸಿಗುತ್ತದೆ. ನಮ್ಮ ಮಲೆನಾಡುಗಳಲ್ಲಿ ರಸ್ತೆ ಇಲ್ಲ. ರಸ್ತೆಗಳೆಲ್ಲಾ ದ್ವೀಪಗಳಾಗಿವೆ ಮತ್ತು ಅಲ್ಲಿ ಅಡಿಕೆ ಮರದ ಮೇಲೆ ದಾಟುವುದು ಡೊಂಬರಾಟವಾಗುತ್ತಿದೆ. ನಮ್ಮ ಜಿಲ್ಲೆಗೆ ಮಳೆಗಾಲಕ್ಕೆ ಬನ್ನಿ ಬೇಕಾದರೆ ತೋರಿಸುತ್ತೇನೆ. ಮಾನ್ಯ ರಾಮಕೃಷ್ಣ ಹೆಗ್ಗಡೆಯವರಿಗೆಲ್ಲಾ ಗೊತ್ತಿದೆ. ದಯೆಯಿಟ್ಟು ಮಾನ್ಯ ಮಂತ್ರಿಯವರು ಇದನ್ನು ವಿಚಾರಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅರಣ್ಯ ಸಮಸ್ಯೆ. ನಮ್ಮ ಉತ್ತರ ಕನ್ನಡ ಜಿಲ್ಲೆ ಬಹಳ ಕಡಿಮೆ ಅಗಲವಿರುವ ಪ್ರದೇಶ. ಅಲ್ಲಿ ಕೆಲವು ಭಾಗ ಕುಷ್ಕಿ ಜಮೀನು ಆಗಿದೆ. ಕೆಲವು ನಾಲ್ಕಾಣೆ ಕಡಿಮೆಯ ತರಗತಿ ಭೂಮಿ ಕೂಡ ಇದೆ. ಅಲ್ಲಿಯ ಜನರು ಬಹಳ ಕಷ್ಟದಲ್ಲಿದ್ದಾರೆ. ನಾವು ಜಿಲ್ಲೆಗೆ ಏನೂ ಮಾಡಲಿಲ್ಲ ಎಂದು ಹೇಳುವುದಿಲ್ಲ ಕೆಲವನ್ನು ಮಾಡಿದ್ದಾರೆ, ಕೆಲವು ಮಾಡುವವರಿದ್ದಾರೆ. ನಮ್ಮಲ್ಲಿ ಅಡವಿ ಎಷ್ಟು ಪ್ರಮಾಣದಲ್ಲಿದೆ ಎಂದರೆ 88 ಪರ್‌ಸೆಂಟ್. ನಮ್ಮ ಅರಣ್ಯ ಖಾತೆಯ ಮಂತ್ರಿಗಳು ಇದನ್ನು ಹೇಳುವಾಗ ಗಾಬರಿ ಪಡಲಾರರೆಂದು ಕಾಣುತ್ತದೆ. ನಮ್ಮಲ್ಲಿ ಸರಿಯಾದ ರಸ್ತೆಗಳಿಲ್ಲ. ತಂತಿ ಕಂಬಕ್ಕೆ ಹೋಯಿತು, ಟಾರು ರೋಡಿಗೆ ಹೋಯಿತು, ಅದು ಹೋಯಿತು, ಇದು ಹೋಯ್ತು ಎಂದು ಹೇಳುತ್ತಿದ್ದಾರೆ. ನಮ್ಮಲ್ಲಿ (ಹನ್ನೊಂದು) ಪ್ರಮಾಣದಲ್ಲಿ ಭೂಮಿ ಇದೆ. ಎಲ್ಲಾ ದೃಷ್ಟಿಯಿಂದ ನೋಡಿದರೆ ನಮ್ಮಲ್ಲಿ ಶೇಕಡಾ 88 ಭಾಗ ಕಾಡು ಇದೆ. ಸರಿಯಾಗಿ ಅಕ್ಕಿ ಇಲ್ಲ, ರೈತರಿಗೆ ಗಂಜಿಗೂ ಗತಿ ಇಲ್ಲ ಎಲ್ಲಾ ಕಷ್ಟವಾಗಿದೆ. ಎಷ್ಟೋ ಮಂದಿ ಅಲ್ಪ ಸ್ವಲ್ಪ ಭತ್ತವನ್ನು ಬೆಳೆದರೆ, ಅದು ಲೆವಿ ರೂಪವಾಗಿ ಹೋಗುತ್ತದೆ. ಎಷ್ಟೋ ಜನರು ನಮಗೆ ಭೂಮಿ ಕೊಡಿ ಎಂದು ಕೇಳುತ್ತಿದ್ದಾರೆ. ಈ ಅಡವಿ ಮೈಸೂರು ರಾಜ್ಯಕ್ಕೆ ಬೇಕು. ಎಷ್ಟು ಪ್ರಮಾಣದಲ್ಲಿ ಬೇಕು ? ಅದರಿಂದ ವ್ಯವಸಾಯಕ್ಕೆ ಬೇಕಾಗುವಂತಹ ಭೂಮಿಯನ್ನು ಕೊಡಬೇಕು. ನಮ್ಮಲ್ಲಿ ಅಡಿಕೆ, ಮೆಣಸಿನಕಾಳು ಎಲ್ಲಾ ಬೆಳೆಸಿಕೊಂಡು ಪರದೇಶಗಳಿಗೆ ರಫ್ತು ಸಮೇತ ಮಾಡುತ್ತಿದ್ದೇವೆ. ಇವತ್ತಿನ ದಿವಸ ನಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದು ಯಾರೂ ನೋಡುತ್ತಿಲ್ಲ. ಅವರೆಲ್ಲಾ ಬ್ರಿಟಿಷರ ವಾತಾವರಣದಲ್ಲಿ ಬೆಳೆದವರು. ನಮ್ಮಲ್ಲಿ ಈ ಸಾಗುವಾನಿ ಪ್ಲಾಂಟೇಶನಿನ ಹೊರತಾಗಿ ಬೇರೇನೂ ಇಲ್ಲ. ನಮ್ಮಲ್ಲಿ ಈಗಾಗಲೇ ಬಹಳ ಕಡಿಮೆ ಭೂಮಿ ಇದೆ. ಆದ್ದರಿಂದ ನಮ್ಮ ಜನರಿಗೆ ಕೃಷಿ ಮಾಡಲು ಜಾಸ್ತಿ ಭೂಮಿಯನ್ನು ಒದಗಿಸುವುದು ಅತ್ಯಗತ್ಯ. ನಮಗೆ ಇವತ್ತಿನ ದಿವಸ ಕಟ್ಟಿಗೆನೂ ಬೇಕು ಅದೇ ಪ್ರಕಾರವಾಗಿ ಇತರ ಮುಖ್ಯ ಸಾಮಗ್ರಿಗಳೂ ಬೇಕು. ಬೇರೆ ದೇಶದಲ್ಲಿ ಬಹಳ ಕಡಿಮೆ ಬೆಟ್ಟ ಭೂಮಿ ಇದೆ. ನಮ್ಮ ಕಾರವಾರ ಡಿಸ್ಟ್ರಿಕ್ಟ್‌ನಲ್ಲಿ 88 ಪರ್ಸೆಂಟು ಫಾರೆಸ್ಟ್ ಏರಿಯಾ ಇದೆ. ಆ ಫಾರೆಸ್ಟ್ ಏರಿಯಾದಲ್ಲಿ ಕೊಕೊ, ಲವಂಗ, ಜಾಜಿಕಾಯಿ ಪತ್ರೆ, ದಾಲ್ಚಿನ್ನಿ ಇವೆಲ್ಲಾ ಬೆಳೆಯಬಹುದು. ಫಾರೆಸ್ಟ್‌ಗೆ ಉಪಯೋಗ ಇಲ್ಲದೇ ಇದ್ದಂಥ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಅದರಿಂದ ಚಲೋ ಭೂಮಿ. ಬೆಳೆ ಬೆಳೆಸುವುದಕ್ಕೆ ಜನಗಳಿಗೆ ಉಪಯೋಗ ಮಾಡಿಕೊಡಬೇಕು.

Sri B. RACHAIAH (Minister for Forests and Revenue).—I am not liquidating the forest.

ಶ್ರೀ ನಾಡಕರ್ಣಿ ದಯಾನಂದ ಸರ್ವೇಶ್ವರ್.—ನಮ್ಮ ಉತ್ತರ we are not tolerating all these troubles ನಾವು ಡೆಡ್ ಬಾಡೀಸ್ ಅಲ್ಲ. ನಾವು ಸುಮ್ಮನೆ ಕುಳಿತುಕೊಂಡಿರಲು ತಯಾರಾಗಿಲ್ಲ. ಫಾರೆಸ್ಟ್ ಪಾಲಿಸಿ ರವೈಸ್ ಮಾಡಬೇಕು. ಅದಕ್ಕೆ ಬೇಕಾದ ಸಹಕಾರ ಕೊಡಲಿಕ್ಕೆ ತಯಾರಾಗಿದ್ದೇವೆ. ನಮ್ಮಲ್ಲಿ ಸುಗಂಧವಾದ ಏಲಕ್ಕಿಯನ್ನು ಬೆಳೆಯುತ್ತೇವೆ. ಇದನ್ನು ಇನ್ನೂ ಅಭಿವೃದ್ಧಿಪಡಿಸಲು ರೀಸರ್ಚ್ ಸೆಂಟರಿಗೆ ಕಳುಹಿಸಿಕೊಡುತ್ತೇವೆಂದು ಹೇಳಿದಿರಿ. ಆದರೆ ಇದುವರಿವಿಗೆ ಏನೂ ಮಾಡಿಲ್ಲ. ನಮ್ಮ ಜಿಲ್ಲೆಯಲ್ಲಿ ಇನ್ನೂ ಸರ್ವೆ ಕೂಡ ಮಾಡಿಲ್ಲ. ರಬ್ಬರ್ ಪ್ಲಾಂಟೇಶನ್ ಕಾಫಿ ಪ್ಲಾಂಟೇಶನ್ ಮಾಡಲು ಬೇಕಾದಷ್ಟು ಸವಲತ್ತುಗಳು ಇವೆ. ಈ ವಿಚಾರದಲ್ಲಿ 1924-25 ರಲ್ಲಿ ರಬ್ಬರ್ ಪ್ಲಾಂಟೇಷನ್‌ಗೆ ಬ್ರಿಟಿಷರ ಕಾಲದಲ್ಲಿ ಟಗ್ಗರಿ ಎನ್ನುವವರು ಏನು ಮಾಡಬೇಕೆಂದು ಹೇಳಿದ್ದಾರೆ. ಇದುವರೆಗೂ ಈ ವಿಚಾರದಲ್ಲಿ ಏನೂ ನಡೆದಿಲ್ಲ. ಇದು ಕಾಫಿ ಬೆಳೆಯಲು ಸೂಕ್ತವಾದ ಸ್ಥಳವಾಗಿದೆ. ಇದುವರೆಗೆ ಯಾವ ಯೋಜನೆಯನ್ನೂ

ಮಾಡಿಲ್ಲ. ಅಲ್ಪಸ್ವಲ್ಪ ಕೆಲಸ ಮಾತ್ರ ನಡೆದಿದೆ. ಉತ್ತರ ಕನ್ನಡದಲ್ಲಿ ಬಂದು ನೋಡಿದರೆ ಏನೂ ಕೆಲಸ ನಡೆದಿಲ್ಲ ಎಂಬುದು ಕಾಣುತ್ತದೆ. ಇದು ಬಹಳ ದುಃಖಕರವಾದ ಸಂಗತಿ. ಉತ್ತರ ಕನ್ನಡದಲ್ಲಿ ಮಳೆಗಾಲದಲ್ಲಿ ಕೆಲವು ಜಾಗಗಳು ದ್ವೀಪಗಳಾಗಿ ಪರಿಣಮಿಸುತ್ತವೆ. ಈ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ ರಸ್ತೆ ಸಂಚಾರ ಸೌಕರ್ಯದ ಅಭಾವ ಇದೆ. ಒಂದು ಕಡೆಯಿಂದ ಒಂದು ಕಡೆಗೆ ಕ್ರಾಸ್ ಮಾಡಲಿಕ್ಕೆ ಬಹಳ ಕಷ್ಟ. ಈ ಬಗ್ಗೆ ಫಾರೆಸ್ಟ್ ರೂಲ್ಸನ್ನು ರಿವೈಸ್ ಮಾಡಿ ಒಂದು ತಾಲ್ಲೋಕಿಗೆ ಒಂದು ಲಕ್ಷ ಎಕರೆಯಂತೆ 11 ತಾಲ್ಲೋಕಿಗೂ 11 ಲಕ್ಷ ಎಕರೆಯನ್ನು ರಿಲೀಸ್ ಮಾಡಿ ಜನಗಳಿಗೆ ಉಳುಮೆ ಮಾಡಲು ಅನುಕೂಲಮಾಡಿಕೊಡಬೇಕು ಇಲ್ಲದಿದ್ದರೆ ಸತ್ಯಾಗ್ರಹ ಮಾಡಿ ಕಾಡನ್ನು ನಮಗೆ ಬೇಕಾದ ರೀತಿಯಲ್ಲಿ ಉಪಯೋಗಮಾಡುವ ಸಂದರ್ಭ ಬಂದೀತು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸೋಲೂರು ಸಿದ್ದಪ್ಪ (ಕಡೂರು).—ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಭಾಷಣದ ಮೇಲೆ ನಾನು ಕೆಲವು ವಿಷಯಗಳನ್ನು ಈ ಸಭೆಯ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ವ್ಯವಸಾಯ, ಕೈಗಾರಿಕೆ ವಿಚಾರದಲ್ಲಿ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ವ್ಯವಸಾಯಕ್ಕೆ ಹೆಚ್ಚು ಗಮನಕೊಟ್ಟು ತುಂಗಭದ್ರ ನಾಲೆಗಳ ಆಡಳಿತದಲ್ಲಿ ಇನ್ನೂ ಸುಧಾರಣೆ ಮಾಡಬೇಕು. ಹೆಚ್ಚು ಭೂಮಿ ಉಳುಮೆ ಇಲ್ಲದೆ ಉಳಿದುಹೋಗಿದೆ. ಆಹಾರಧಾನ್ಯವನ್ನು ಹೆಚ್ಚು ಬೆಳೆಯುವುದಕ್ಕೆ ತೊಂದರೆಯಾಗಿದೆ. ಇದನ್ನು ಸರ್ಕಾರದವರು ಮಾನ್ಯ ಮಾಡಿ ಇದರ ಬಗ್ಗೆ ಹೆಚ್ಚಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಈಗ ಮಾನ್ಯ ಮುಖ್ಯ ಮಂತ್ರಿಗಳು ವ್ಯವಸಾಯದ ಪೋರ್ಟ್ ಫೋಲಿಯೋವನ್ನು ಅವರೇ ತೆಗೆದುಕೊಂಡಿದ್ದಾರೆ. ಆದ್ದರಿಂದ ಅದಕ್ಕೆ ಈ ವರ್ಷ ಹೆಚ್ಚಿನ ಮಾನ್ಯತೆ ದೊರಕುತ್ತದೆಂದು ನಾನಾದರೂ ಭಾವಿಸುತ್ತೇನೆ.

ಆಹಾರದ ಅಭಾವದ ವಿಚಾರದಲ್ಲಿ ನಮ್ಮ ಸ್ನೇಹಿತರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ಎಷ್ಟೇ ಆಹಾರದ ಕೊರತೆ ಇದ್ದಾಗ್ಯೂ ನಮ್ಮ ಆಹಾರ ಸಚಿವರು ಹೆಚ್ಚು ಶ್ರಮ ವಹಿಸಿ ನಮ್ಮ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಒಂದು ಏರ್ಪಾಟು ಮಾಡಿರುತ್ತಾರೆ. ಇದನ್ನು ನಮ್ಮ ಸ್ನೇಹಿತರು ಗಮನಿಸಬೇಕು ಎಂದು ಹೇಳುತ್ತೇನೆ.

ಕೈಗಾರಿಕೆ ವಿಚಾರದಲ್ಲಿ ಹೇಳುವುದಾದರೆ, ನಮ್ಮಲ್ಲಿ ಈಗ ಹೆಚ್ಚು ಉತ್ಪನ್ನವಾಗುವ ವಿದ್ಯುಚ್ಛಕ್ತಿಯ ಪ್ರಯೋಜನವನ್ನು ನಮ್ಮ ದೇಶದ ಜನಗಳು ಹೊಂದುವಂತೆ ಆಗಬೇಕು. ಈಗಿರುವ ಪ್ರಕಾರ ಕರೆಂಟನ್ನು ಬೇರೆ ರಾಜ್ಯಗಳ ಜನಗಳಿಗೆ ಮಾರುವುದಾದರೆ ಅದರಿಂದ ನಮ್ಮ ರಾಜ್ಯದ ಜನಗಳಿಗೆ ಹೆಚ್ಚಿಗೆ ಪ್ರಯೋಜನವಾಗುವುದಿಲ್ಲ. ನಮ್ಮ ರಾಜ್ಯ ಸರ್ಕಾರದವರು ಹೆಚ್ಚು ನೀರಾವರಿ ಪಂಪುಗಳನ್ನು ಹಾಕಿ ತನ್ಮೂಲಕಾ ಹೆಚ್ಚು ಕರೆಂಟನ್ನು ಉಪಯೋಗಿಸಿ ನಮ್ಮ ದೇಶದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಸಹಾಯವಾಗುವ ರೀತಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಎದುರು ಪಕ್ಷದ ಸ್ನೇಹಿತರು ಕೆಲವರು ಹಿಂದಿನ ಮಂತ್ರಿಮಂಡಲದಲ್ಲಿ ಇದ್ದರು. ಅವರು ಅನೇಕ ಭಾಷಣಗಳನ್ನು ಮಾಡಿದ್ದಾರೆ. ಅವರೂ ನಮ್ಮವರು. ಅವರು ಅನೇಕ ವಿಷಯಗಳನ್ನು ತಿಳಿದುಕೊಂಡಿರತಕ್ಕವರು. ರಾಜ್ಯವನ್ನು ಆಳುವಾಗ ಅವರು ಕೆಲವು ವ್ಯವಹಾರಗಳನ್ನು ನಡೆಸಿರತಕ್ಕಂಥಾದ್ದು ನನಗೂ ಗೊತ್ತು ಈ ಸಭೆಗೂ ಗೊತ್ತು. ನಾನು 1957 ರವರೆಗೆ ಈ ಸಭೆಯಲ್ಲಿ ಅವರ ಜೊತೆಯಲ್ಲಿಯೇ ಇದ್ದೆ. ಮಾನ್ಯ ಸ್ನೇಹಿತರು ವಿವಿಧ ಸಂದರ್ಭದಲ್ಲಿ ಈ ಸಭೆಯ ಗೌರವವನ್ನು ಕಾಪಾಡುವ ಸನ್ನಿವೇಶವನ್ನು ಇಟ್ಟುಕೊಂಡು ಅವರು ಭಾಷಣ ಮಾಡಬೇಕಾಗಿತ್ತು ಎಂದು ನಾನಾದರೂ ಭಾವಿಸಿದ್ದೇನೆ.

ಕೈಗಾರಿಕೆಯ ವಿಚಾರದಲ್ಲಿ ಸರ್ಕಾರದವರು ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ನಾನು ಅನೇಕಬಾರಿ ಸರ್ಕಾರಕ್ಕೆ ಪ್ರಾರ್ಥಿಸಿದ್ದೇನೆ, ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ಕೈಗಾರಿಕೆಯನ್ನು ಹೆಚ್ಚಿಸುವುದರಿಂದ ತಮಗೆ ಕಷ್ಟವಾಗುತ್ತದೆ. ಗ್ರಾಮಾಂತರಗಳಲ್ಲಿರತಕ್ಕ ಜನರು ಪಟ್ಟಣಕ್ಕೆ ಬಂದು ನೆಲೆಸುವುದರಿಂದ ಆಹಾರ ಅಭಾವ ಉಂಟಾಗುವುದಕ್ಕೆ ಅದೂ ಒಂದು ಕಾರಣವಾಗಿದೆ. ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಿಂದ ಜನತೆ ತಮ್ಮ ತಮ್ಮ ಸ್ಥಳದಲ್ಲಿದ್ದುಕೊಂಡು ತಮ್ಮ ತಮ್ಮ ಕಾರ್ಯವನ್ನು ಮಾಡಿಕೊಳ್ಳುವುದರ ಜೊತೆಗೆ ತಮಗೆ ಬೇಕಾದಂಥ ಕೈಗಾರಿಕೆಯನ್ನೂ ಸಹ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಸರ್ಕಾರದವರು ಪೂರ್ಣ ಮನಸ್ಸಿನಿಂದ ಗಮನಿಸಬೇಕಾಗಿದೆ. ಇದನ್ನು ಅನೇಕ ವರ್ಷಗಳಿಂದ ಸರ್ಕಾರದ ಗಮನಕ್ಕೆ ತಂದರೂ ಅದೂ ಲದಾಯಕವಾಗಿಲ್ಲ. ಪಟ್ಟಣಗಳಲ್ಲಿ ಹೆಚ್ಚು ಕೈಗಾರಿಕೆ ಬೇಡ. ಗ್ರಾಮಾಂತರಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆಮಾಡುವುದರಿಂದ ಜನರು ವ್ಯವಸಾಯವನ್ನು

(ಶ್ರೀ ಸೋಲೂರು ಸಿದ್ದಪ್ಪ)

ಮಾಡುವುದರ ಜೊತೆಗೆ ಕೈಗಾರಿಕೆಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನಾದರೂ ಭಾವಿಸುತ್ತೇನೆ. ಈಗಿರುವ ಪರಿಸ್ಥಿತಿಯಿಂದ ಸಂಸಾರ ಸಮೇತ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಬರುತ್ತಾರೆ. ಇದರಿಂದ ಹಳ್ಳಿಗಳಲ್ಲಿರುವ ಜಮೀನುಗಳು ಪಾಳು ಬಿದ್ದಿವೆ. ಈ ಆಹಾರದ ಕೊರತೆಯು ನೀಗಬೇಕಾದರೆ, ಆಹಾರವು ಎಲ್ಲರಿಗೂ ಸಮತೂಕವಾಗಿ ಸಿಗಬೇಕಾದರೆ ತುಂಗಭದ್ರಾ ಎಡನಾಲೆ ಯೋಜನೆಯನ್ನು ಜಾಗ್ರತೆ ಮುಗಿಸಬೇಕು. ಅಲ್ಲಿರುವ ಪ್ರದೇಶವನ್ನು ಬುಲ್‌ಡೋಜರ್ ಮೂಲಕ ಸಮಮಾಡಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಅದರಿಂದ ಜಾಗ್ರತೆ ಫಲದೊರಕಿ ಆಹಾರದ ಅಭಾವ ಕಡಮೆಯಾಗಬಹುದೆಂದು ನಾನು ಭಾವಿಸುತ್ತೇನೆ. ಆಹಾರಕ್ಕಾಗಿ ಹೊರಗಿನ ದೇಶದವರನ್ನೇ ಕಾಯುವಂತಾದರೆ ನಮ್ಮ ರೈತರಿಗೆ ಆಹಾರವನ್ನು ಒದಗಿಸುವುದಕ್ಕಾಗುವುದಿಲ್ಲ. ಹೊಗಡೆಯಿಂದಲೂ ಸಹ ನಾವು ನಿರೀಕ್ಷಣೆಮಾಡಿದಷ್ಟು ಅಹಾರವು ಬರುವುದಿಲ್ಲ. ದಿನೇ ದಿನೇ ಅಹಾರದ ಬೆಲೆಗಳು ಜಾಸ್ತಿಯಾಗುತ್ತಿದೆ. ಈ ಬೆಲೆಗಳು ಜಾಸ್ತಿಯಾದಂತೆ ಬಡವರಿಗೆ ಕಷ್ಟವಾಗುತ್ತದೆ. ಈ 4—5 ವರ್ಷಗಳಿಂದಲೂ ಸರ್ಕಾರದವರು ಆಹಾರವನ್ನು ಜನರಿಗೆ ಒದಗಿಸಿ ತೃಪ್ತಿಪಡಿಸಿದ್ದಾರೆ. ಅದರೂ ಸಹ ಜನರಿಗೆ ಇನ್ನೂ ಅತೃಪ್ತಿಉಂಟಾಗಿದೆ.

6-00 P.M.

ಇನ್ನು ಕೈಗಾರಿಕೆಯೂ ಸಹ ದೇಶದಲ್ಲಿ ಬೆಳೆಯುತ್ತಿದೆ. ಇದನ್ನು ಪರಿಪಡಿಸುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ವ್ಯವಸಾಯ ಮತ್ತು ಕೈಗಾರಿಕಾ ಖಾತೆಗಳನ್ನು ತಾವೇ ತೆಗೆದುಕೊಂಡಿದ್ದಾರೆ ಅವರು ವ್ಯವಸಾಯದ ಖಾತೆಯನ್ನು ತೆಗೆದುಕೊಂಡಿರುವುದರಿಂದ ಸರ್ವತೋಮುಖವಾದ ವ್ಯವಸಾಯದ ಕಾರ್ಯಕ್ರಮಗಳು ಮುಂದುವರೆದು ದೇಶಕ್ಕೆ ಫಲದಾಯಕವಾಗಬಹುದು ಮತ್ತು ದೇಶಕ್ಕೆ ಹೆಚ್ಚು ಅಹಾರವು ಒದಗಬಹುದೆಂದು ನಾನು ಭಾವಿಸಿದ್ದೇನೆ. ಕೈಗಾರಿಕೆಯ ಬಗ್ಗೆ ನಾನು ಈಗಾಗಲೆ ಪ್ರಸ್ತಾಪ ಮಾಡಿದ್ದೇನೆ, ಇನ್ನು ಮೇಲೆ ಸಂಸ್ಥಾನಗಳಲ್ಲಿ ಸ್ಥಾಪನೆಯಾಗುವ ಕಾರ್ಖಾನೆಗಳು ಪ್ರತಿ ತಾಲೋಕ ಮಟ್ಟದಲ್ಲಿ ಸ್ಥಾಪನೆಯಾಗಬೇಕು. ಇದರಿಂದ ಆಯಾ ತಾಲ್ಲೋಕಗಳಲ್ಲಿರುವ ಜನರಿಗೆ ಅನುಕೂಲವನ್ನು ಮಾಡಿದಂತೆ ಅಗುತ್ತದೆ. ಅವರಿಗೆ ಕೆಲಸವನ್ನು ಒದಗಿಸಿದಂತೆ ಅಗುತ್ತದೆ. ಈಗ ನೌಕರಿ ಇಲ್ಲದ ಬಡ ಜನರು ಬೆಂಗಳೂರಿಗೆ ಬಂದು ಸೇರುತ್ತಿದ್ದಾರೆ. ಅದನ್ನು ತಪ್ಪಿಸಬೇಕಾದರೆ ಎಲ್ಲಾ ತಾಲ್ಲೋಕಗಳಲ್ಲಿಯೂ ಸಹ ಕೈಗಾರಿಕೆಗಳನ್ನು ಸ್ಥಾಪಿಸಬೇಕಾದುದು ಸರ್ಕಾರದವರ ಮೊದಲನೆಯ ಕರ್ತವ್ಯ. ಎರಡು ಮೂರು ವರ್ಷಗಳಿಂದಲೂ ಕೈಗಾರಿಕೆಗೆ ಒದಗಿಸುತ್ತಿರುವ ಹಣ ಸರಿಯಾದ ರೀತಿಯಲ್ಲಿ ಖರ್ಚು ಅದರೂ ಸಹ ದೇಶದ ಎಲ್ಲಾ ಭಾಗಗಳಿಗೂ ಅದರಿಂದ ಫಲವಾಗಿಲ್ಲ. ಇನ್ನು ಮೇಲಾದರೂ ಕೈಗಾರಿಕೆಗಳಿಗೆ ಫಲದಾಯಕವಾಗುವ ರೀತಿಯಲ್ಲಿ ಹಣವನ್ನು ವೆಚ್ಚಮಾಡಬೇಕು. ಕೈಗಾರಿಕೆಗಳು ಹೆಚ್ಚಾದಂತೆ ಬಡತನ ಕಡಮೆಯಾಗುತ್ತದೆ. ಮತ್ತು ಆಹಾರದ ಅಭಾವ, ದುಡ್ಡಿನ ಕೊರತೆ ಕಡಮೆಯಾಗುತ್ತದೆಂದು ನಾನು ಭಾವಿಸಿದ್ದೇನೆ.

ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯ ಮೂಲಕ ಇನ್ನು ಒಂದೆರಡು ವಿಷಯಗಳನ್ನು ಪ್ರಸ್ತಾಪಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. 1957ರಲ್ಲಿ ಈ ಸ್ಥಾನವನ್ನು ಬಿಟ್ಟು ಹೋದವನು 1967ರಲ್ಲಿ ಮತ್ತೆ ಈ ಸ್ಥಾನಕ್ಕೆ ಬಂದಿದ್ದೇನೆ. 1927ರಿಂದ1957 ರವರೆಗೆ ನಾನು ಶಾಸನ ಸಭೆಯಲ್ಲೂ ಮತ್ತು ಕಾಂಗ್ರೆಸ್ ಸಂಸ್ಥೆಯಲ್ಲೂ ಕೆಲಸಮಾಡಿದ್ದೇನೆ. ಈ 10 ವರ್ಷಗಳಿಂದ ಕಾರಣಾಂತರಗಳಿಂದ ನನಗೆ ಸೀಟ್‌ಸಿಕ್ಕರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಚುನಾವಣೆಯಲ್ಲಿ ನನಗೆ ಒಂದು ಸೀಟ್‌ಕೊಟ್ಟರು, ಅದರಂತೆ ಮತ್ತೆ ಈ ಸ್ಥಾನದಲ್ಲಿ ಕೆಲಸ ಮಾಡಲು ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕರೇ, ಈಗ ಸಹಕಾರ ಸಂಸ್ಥೆಗಳಿಂದ ದೇಶಕ್ಕೆ ಹೆಚ್ಚಿನ ಅನುಕೂಲಗಳು ಒದಗಿವೆ. ಕಳೆದ ವರ್ಷ ನಮ್ಮ ಮುಖ್ಯ ಮಂತ್ರಿಗಳು 10 ಸಾವಿರ ಬಾವಿಗಳಿಗೆ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಹಣವನ್ನು ಒದಗಿಸಿದ್ದಾರೆ. ಇದರಿಂದ ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಹೆಚ್ಚು ಅಹಾರವನ್ನು ಬೆಳೆಯಲು ಅನುಕೂಲಮಾಡಿದಂತಾಯಿತು. ಇದರಿಂದ ಸಂಸ್ಥಾನದ ಕೆಲವು ಹಳ್ಳಿಗಳಲ್ಲಿ ಅಹಾರದ ಅಭಾವ ಕಡಮೆಯಾದಂತೆ ಅಯಿತು. ಮುಂದಿನ ವರ್ಷ ಇದೇ ಬ್ಯಾಂಕ್ ಮೂಲಕ 20 ಸಾವಿರ ಬಾವಿಗಳಿಗೆ ಹಣವನ್ನು ಒದಗಿಸುವುದಕ್ಕೆ ವಾಗ್ದಾನಮಾಡಿದ್ದಾರೆ. ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಈ ರೀತಿ ಹಣವನ್ನು ಒದಗಿಸಿ ಅನಕೂಲ ಮಾಡಿಕೊಡುವುದರಿಂದ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಮತ್ತು ತಮ್ಮತಮ್ಮ ಅನ್ನವನ್ನು ತಾವೇ ಬೆಳೆದುಕೊಳ್ಳುವುದಕ್ಕೆ ಅನುಕೂಲವಾದಂತಾಗುತ್ತದೆ. ಸರ್ಕಾರದವರು 1947ರಿಂದ ಇಂದಿನವರೆಗೆ ಅಂದರೆ 20 ವರ್ಷಗಳ ಕಾಲ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಸಂಸ್ಥೆಯು

ದೇಶದ ಉನ್ನತಿಗಾಗಿ ಬಹಳ ಅನುಕೂಲವಾದಂತಹ ಕೆಲಸಗಳನ್ನು ಸಾಧಿಸಿದೆ. ನಮ್ಮ ಎದುರು ಪಕ್ಷದ ಸ್ನೇಹಿತರು ವಿನಾಕಾರಣ ತಮ್ಮ ಸ್ಥಾನಗಳಿಂದ ಆಕ್ಷೇಪಣೆಗಳನ್ನು ಮಾಡತಕ್ಕದ್ದು ಸರಿಯಲ್ಲ. ಅವರು ನಮ್ಮ ಸಹೋದರರು, ಅವರು ದೇಶವನ್ನು ಉನ್ನತಮಟ್ಟಕ್ಕೆ ತರಬೇಕು. ಆದರೆ ಕಾರಣಗಳು ಇಲ್ಲದೆ ವಿನಾಕಾರಣ ಮಾತನಾಡುವುದು ಈ ಸಭೆಯ ಗೌರವಕ್ಕೆ ಸರಿಯಿಲ್ಲವೆಂದು ನಾನು ಭಾವಿಸಿದ್ದೇನೆ. ನನಗೆ ಕೆಲವೇ ನಿಮಿಷಗಳನ್ನು ನಮ್ಮ ಅಧ್ಯಕ್ಷರು ದಯಪಾಲಿಸಿದ್ದಾರೆ. ನಾನು ಅರ್ಧ ಘಂಟೆ ಮಾತನಾಡಬೇಕೆಂದಿದ್ದೆ. ಆದರೆ 10 ನಿಮಿಷದಲ್ಲಿ ಮುಗಿಸಬೇಕೆಂದು ಹೇಳಿದ್ದಾರೆ. ಸಹಕಾರ ಇಲಾಖೆಯಿಂದ ದೇಶಕ್ಕೆ ಪ್ರಯೋಜನವಾಗಿದೆ. ಮುಂದೆ ಸಹಕಾರ ಸಂಘಗಳಿಂದ ಬುಲ್‌ಡೋಜರ್‌ಗಳನ್ನು ಒದಗಿಸುವುದರ ಮೂಲಕ ದೇಶಕ್ಕೆ ಅನುಕೂಲ ಮಾಡಿಕೊಡಬೇಕು. ಬಾವಿಗಳನ್ನು ತೋಡಲು ಹಣವನ್ನು ಒದಗಿಸಿದರೆ ಸಾಲದು, ಅದರ ಜೊತೆಯಲ್ಲಿ ಬುಲ್‌ಡೋಜರ್‌ಗಳನ್ನು ಒದಗಿಸಬೇಕು. ಏಕೆಂದರೆ, ಜಮೀನುಗಳನ್ನು ಸಮಮಾಡಬೇಕಾದರೆ ಬುಲ್‌ಡೋಜರ್‌ಗಳು ಬೇಕು. ಈ ರೀತಿ ಬುಲ್‌ಡೋಜರ್‌ಗಳನ್ನು ಒದಗಿಸಿ ತನ್ಮೂಲಕ ದೇಶದಲ್ಲಿ ಆಹಾರದ ಅಭಾವ ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಕೈಗಾರಿಕೆಗಳನ್ನು ಮಾತ್ರ ತಾಲ್ಲೋಕ್‌ವಾರು ಅಂದರೆ ನಮ್ಮ ರಾಜ್ಯದಲ್ಲಿರುವ ಎಲ್ಲ ತಾಲ್ಲೋಕ್‌ಗಳಲ್ಲೂ ಒದಗಿಸಬೇಕು. ಇದರಿಂದ ಜನರಿಗೂ ಅನುಕೂಲವಾಗುತ್ತದೆ, ಸರ್ಕಾರಕ್ಕೂ ಅನುಕೂಲವಾಗುತ್ತದೆ, ಮತ್ತು ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯಲು ಜನರಿಗೆ ಅನುಕೂಲಗಳನ್ನು ಏರ್ಪಡಿಸಬೇಕು. ಇದರಿಂದ ಸರ್ಕಾರದವರೇ ಬೇರೆ ಕಡೆಯಿಂದ ಆಹಾರವನ್ನು ತರಿಸಿ ಜನರಿಗೆ ಹಂಚುವುದು ತಪ್ಪುತ್ತದೆ. ಇಷ್ಟು ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.—ಜೈ ಹಿಂದ್.

Mr. SPEAKER.—Now, Sri Duggappa. He is not here. I am just finding out who are the persons who have moved amendments so that I may give them a chance. Even Sri Gopala Gowda is not here. Sri Bangarappa.

Sri S. BANGARAPPA (Sorab).—Yes, Sir, I have moved an amendment.

Mr. SPEAKER.—He may please take ten minutes and close. Then who else is there among those who have given amendments ? I hope that finishes. Sri Duggappa is not here. He can avail of a chance on some other occasion.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಸಭಾಧ್ಯಕ್ಷರೇ, ಈ ರಾಜ್ಯಪಾಲರ ಭಾಷಣದ ವರದಿ ನೋಡಿ ನನಗೆ ಹೀಗೆ ಅನ್ನಿಸಿದೆ. ಸರ್ಕಾರದ ಅನೇಕ ಇಲಾಖೆಗಳ ಕೆಲವೊಂದು ಅಂಕಿಅಂಶಗಳನ್ನು ಆಧಾರವಾಗಿ ಇಟ್ಟುಕೊಂಡು ತಯಾರು ಮಾಡಿದ್ದಾರೆಂದು. ಮೈಸೂರು ರಾಜ್ಯದಲ್ಲಿ ಬಡವರು ಇಲ್ಲವೋ ಅಥವಾ ಅವರ ಬವಣೆ ಇಲ್ಲವೋ ಎಂಬ ಅಂಶದ ಬಗ್ಗೆ ಈ ರಾಜ್ಯಪಾಲರ ಭಾಷಣದಲ್ಲಿ ಏನನ್ನೂ ಹೇಳಿಲ್ಲ. ಬಡವರ ಬವಣೆಯನ್ನು ಮರೆತುಬಿಟ್ಟಿರುವ ಟೊಳ್ಳು ವರದಿ ಇದಾಗಿದೆ. ಶ್ರೀಮಾನ ಘೋರ್ಪಡೆಯವರು ತಮ್ಮ ಭಾಷಣದಲ್ಲಿ ತಿಳಿಸಿದರು, ಇನ್ನೂ ಮೈಸೂರು ರಾಜ್ಯದಲ್ಲಿ 15 ಸಾವಿರ ಹಳ್ಳಿಗಳು ದೀಪವನ್ನು ಕಾಣಬೇಕಾಗಿದೆ ಎಂದು. ಸಾಗರ ಮತ್ತು ಸೊರಬ ಶಿವಮೊಗ್ಗಾ ಜಿಲ್ಲೆಯಲ್ಲಿವೆ.

ಸಾಗರದಲ್ಲಿಯೇ ಶರಾವತಿ ಯೋಜನೆಯು ಇದ್ದರೂ ಕೂಡ, ವಿದ್ಯುಚ್ಛಕ್ತಿ ಅಲ್ಲಿಯೇ ತಯಾರಾದರೂ ಕೂಡ, ವಿದ್ಯುಚ್ಛಕ್ತಿಯ ಆಗರದ ಪಕ್ಕದಲ್ಲಿ ಅನೇಕ ಹಳ್ಳಿಗಳು ದೀಪವನ್ನು ಕಾಣದೇ ಇರುವುದು ಶೋಚನೀಯ ಪರಿಸ್ಥಿತಿ. ಇನ್ನೂ ಅನೇಕ ವಿಷಯಗಳು ಇದ್ದರೂ ಕೂಡ ನಾನು ಮೊಟ್ಟ ಮೊದಲನೆಯದಾಗಿ ಲೆವಿ ಬತ್ತವನ್ನು ವಸೂಲು ಮಾಡುವ ಸರ್ಕಾರದ ನೀತಿ ಅಥವಾ ಬತ್ತವನ್ನು ಎತ್ತುವ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ. ನನಗೆ ಈ ದಿವಸ ಸೊರಬದಿಂದ ಒಂದು ಪತ್ರ ಬಂದಿದೆ. ಅಲ್ಲಿ ಅಧಿಕಾರಿಗಳು ತಹಶೀಲ್ದಾರರು, ಫುಡ್ ತಹಶೀಲ್ದಾರರಾದಿಯಾಗಿ ಎಲ್ಲಾ ಸಿಬ್ಬಂದಿ ವರ್ಗದವರೊಡನೆ ಪೋಲೀಸರ ಸಮೇತ ಗ್ರಾಮಕ್ಕೆ ಹೋಗಿ ರೈತರು ಮನೆಯಲ್ಲಿ ಇಲ್ಲದೆ ಇರುವಾಗ, ಅವರ ಮನೆಯಲ್ಲಿರತಕ್ಕ ಹೆಣ್ಣು ಮಕ್ಕಳ ಅಪ್ಪಣೆಯನ್ನು ಪಡೆಯದೆ ಮನೆಯಲ್ಲಿ ಹೋಗುವುದು, ಮತ್ತು ಅಧಿಕಾರಿಗಳು ಹಾಕಿಕೊಂಡಿರತಕ್ಕ ಪಾದರಕ್ಷೆಗಳನ್ನು ತೆಗೆಯದೆ ಮನೆಯ ಒಳಗಡೆ ನುಗ್ಗುವುದು ಇಂಥಾ ಹವ್ಯಾಸಗಳು ಬಂದಿವೆ. ಇದು ತುಂಬಾ ಖಂಡನೀಯ. ಇದರ ಬಗ್ಗೆ ಸರ್ಕಾರದವರು ವಿಚಾರಣೆ ಮಾಡಬೇಕು. ಇವೊತ್ತು ಈ ಸಭೆಯಲ್ಲಿ ಆಹಾರ ಮಂತ್ರಿಗಳಾದ ಶ್ರೀಮಾನ್

(ಶ್ರೀ ಎಸ್. ಬಂಗಾರಪ್ಪ)

ಜತ್ತಿಯವರು ಇದ್ದಾರೆ. ಅವರನ್ನು ಆಹಾರದ ಮಂತ್ರಿ ಎಂದು ಕರೆಯುವುದಕ್ಕಿಂತ ಕ್ಷಾಮ ಮಂತ್ರಿ ಎಂದು ಕರೆದರೆ ಒಳ್ಳೆಯದೆಂದು ಕಾಣುತ್ತದೆ. ಬತ್ತದ ಕಣಜ ಎಂದು ಹೆಸರನ್ನು ತೆಗೆದುಕೊಂಡಿದ್ದ ಶಿವಮೊಗ್ಗ ಜಿಲ್ಲೆಯಲ್ಲಿ ಇವೊತ್ತು ನಾವು ಕಾಣುತ್ತಾ ಇರುವುದು ಕ್ಷಾಮ ಪ್ರದೇಶ. ಸೊರಬ ಕ್ಷೇತ್ರದಲ್ಲಿ, ಅನವಟ್ಟಿ ಹೋಬಳಿಯಲ್ಲಿ 3—4 ಬೆಳೆಗಳನ್ನು ಕಾಣದೇ ಇರುವ ಮಳೆ ಬಾರದೇ ಇರುವ ಈ ಪರಿಸ್ಥಿತಿಯನ್ನು ರಾಜ್ಯ ಸರ್ಕಾರದವರ ಗಮನಕ್ಕೆ ಅನೇಕ ಜನರು ತಂದರೂ ಕೂಡ ಬಗ್ಗೆ ಸರ್ಕಾರ ದವರು ಏನೊಂದು ಕ್ರಮವನ್ನೂ ತೆಗೆದುಕೊಳ್ಳುವ ಯೋಚನೆಯನ್ನು ಮಾಡದೇ ಇರುವುದು ಶೋಚನೀಯ ಪರಿಸ್ಥಿತಿ. ಅನವಟ್ಟಿ ಹೋಬಳಿಯಲ್ಲಿ ಅಕ್ಕಿ ಮತ್ತು ರಾಗಿ ಸಿಕ್ಕದೇ ಇರುವ ಸಂದರ್ಭದಲ್ಲಿ ಕೆಲವು ಹಳ್ಳಿಗಳಲ್ಲಿ ಜನರು ಬಿದಿರಕ್ಕಿಯನ್ನು ತಿಂದಿರತಕ್ಕ ಸಮಯವನ್ನು ಯಾರೂ ಮರೆತಿಲ್ಲ. ಆಹಾರದ ಒಂದು ಕೊರತೆಯನ್ನು ಪೂರೈಸುವುದಕ್ಕೆ ಸರ್ಕಾರ ಗಮನವನ್ನು ಹರಿಯಿಸದೇ ಇರತಕ್ಕದ್ದು ತುಂಬಾ ಶೋಚನೀಯ, ಮತ್ತು ಖಂಡನೀಯ. ಈಗ ಸರ್ಕಾರದವರು ಲೆವಿ ಎತ್ತುವಳಿಯ ನೀತಿಯನ್ನು ಪುನರ್ ವಿಮರ್ಶೆ ಮಾಡತಕ್ಕ ಕಾಲ ಹತ್ತಿರ ಬಂದಿದೆ. ಬೆಳೆ ಆಗದೇ ಇದ್ದರೂ ಕೂಡ ಸರ್ಕಾರದ ಅಧಿಕಾರಿ ಗಳು ದೌರ್ಜನ್ಯದಿಂದ ಮನೆ ನುಗ್ಗಿ ಕಡ್ಡಾಯವಾಗಿ ರೈತರಿಂದ ಧಾನ್ಯವನ್ನು ವಸೂಲು ಮಾಡುತ್ತಿ ದ್ದಾರೆ. ಸರ್ಕಾರದವರು ರೈತರಿಂದ ಲೆವಿ, ಧಾನ್ಯವನ್ನು ವಸೂಲು ಮಾಡುವಾಗ ಅದಕ್ಕೆ ಅವರು ಕೊಡತಕ್ಕ ಬೆಲೆಗೂ ಮತ್ತು ಮಾರ್ಕೆಟ್ ಬೆಲೆಗೂ ಒಂದು ಕ್ವಿಂಟಾಲಿಗೆ 30-40 ರೂಪಾಯಿಗಳವರೆಗೂ ರೈತನಿಗೆ ಕಡಮೆ ಬೀಳುತ್ತದೆ. ಇದರಿಂದ ರೈತರಿಗೆ ತುಂಬಾ ಅನ್ಯಾಯವಾಗುತ್ತದೆ. ಈ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ಸರ್ಕಾರ ತನ್ನ ಒಂದು ಆರ್ಥಿಕ ನೀತಿಯನ್ನು ಬದಲಾವಣೆ ಮಾಡಿ ಆಹಾರಧಾನ್ಯಗಳ ಬೆಲೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿಲ್ಲ. ಸರ್ಕಾರದ ಈ ಒಂದು ನೀತಿಯಿಂದ ಪ್ರತಿಯೊಬ್ಬ ಬಡರೈತನಿಗೂ ಕೂಡ ಪೆಟ್ಟು ಬೀಳುತ್ತಿದೆ. ಮತ್ತು ಈ ಲೆವಿ ಕಾನೂನನ್ನು ಸರ್ಕಾರದವರು ತಂದು ರೈತರ ಜೀವನಕ್ಕೂ ಧಾನ್ಯವನ್ನು ಬಿಡದೆ ವಸೂಲು ಮಾಡತಕ್ಕ ಒಂದು ಪರಿಸ್ಥಿತಿ ಕೆಲವು ಕಡೆ ಇದೆ. ಬಂಡವಾಳಗಾರರು ಮಾರ್ಕೆಟ್ಟಿನಲ್ಲಿ ಯಾವರೀತಿ ಹರಾಜಿನಲ್ಲಿ ಬತ್ತವನ್ನು ಖರೀದಿ ಮಾಡುತ್ತಾರೆಯೋ ಅದೇ ನಮೂನೆಯಲ್ಲಿ ಸರ್ಕಾರದವರು ಹರಾಜಿನಲ್ಲಿ ಬತ್ತವನ್ನು ಕೊಳ್ಳಲು, ಜಾಸ್ತಿ ಬೆಲೆಯನ್ನು ಕೊಡಲಿ ಕಾಂಗ್ರೆಸ್ ಸರ್ಕಾರದವರು ತಮ್ಮ ಶಕ್ತಿಯನ್ನು ಪ್ರದರ್ಶನ ಮಾಡಲಿ ಎಂದು ನಾನು ಸೂಚನೆ ಕೊಡುತ್ತೇನೆ.

ಇನ್ನೊಂದು ವಿಷಯ. ಭೂಸುಧಾರಣೆ ಕಾನೂನನ್ನು ತಯಾರಿಸುವಾಗ. ಭೂಸುಧಾರಣಾ ಕಾನೂನು ಮುಜರಾಯಿ ಜಮೀನುಗಳಿಗೆ ಅನ್ವಯವಾಗುವುದಿಲ್ಲ, ಮುಜರಾಯಿ ಗೇಣಿದಾರರಿಗೆ ಪ್ರತ್ಯೇಕವಾದ ಒಂದು ಕಾನೂನು ಮಾಡಬೇಕು ಎಂದು ಮಾನ್ಯ ರೆವಿನ್ಯೂ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು ಅದು ನಮಗೆ ನೆನಪಿನಲ್ಲಿದೆ. ಆದ್ದರಿಂದ ಆಗ ರೆವಿನ್ಯೂ ಮಂತ್ರಿಗಳು ಕೊಟ್ಟಂತಹ ಆಶ್ವಾಸನೆಯನ್ನು ಈಗ ಏತಕ್ಕೆ ಈಡೇರಿಸಲಿಲ್ಲ? ಈಗ ಸರ್ಕಾರಿ ಅಧಿಕಾರಿಗಳು ಮುಜ ರಾಯಿ ಮ್ಯಾನ್ಯುಯಲ್ ಪ್ರಕಾರ ಮುಜರಾಯಿ ಗೇಣಿದಾರರ ಹಕ್ಕನ್ನು ಕಿತ್ತುಕೊಳ್ಳುತ್ತಿದ್ದಾರೆ. ಮುಜರಾಯಿ ಜಮೀನುಗಳನ್ನು ಹರಾಜು ಮಾಡುತ್ತಿದ್ದಾರೆ. ಆ ಮುಜರಾಯಿ ಗೇಣಿದಾರರಿಗೆ ಸರ್ಕಾರದವರು ಒಂದು ರಕ್ಷಣೆಯನ್ನು ಕೊಡದೆ ಆ ಜಮೀನುಗಳನ್ನು ಹರಾಜು ಮಾಡುತ್ತಿರುವ ಸರ್ಕಾರದ ನೀತಿ ಏನಿದೆ ಅದು ಖಂಡನೀಯ ಮತ್ತು ವಿಷಾದಕರ. ಈಗ ಈ ಮುಜರಾಯಿ ಜಮೀನಿನ ಗೇಣಿದಾರರು ತಮ್ಮ ಹಕ್ಕಿನ ಬಗ್ಗೆ ಹೈಕೋರ್ಟಿಗೆ ರಿಟ್ ಹಾಕಿದ್ದಾರೆ. ಆದ್ದರಿಂದ ಅಲ್ಲಿ ಈ ಕೇಸು ತೀರ್ಮಾನ ಆಗವುದಕ್ಕಿಂತ ಮುಂಚೆ ಸರ್ಕಾರದವರು ಗಮನ ಕೊಟ್ಟು ಗೇಣಿದಾರರ ಹಕ್ಕು ಏನಿದೆ ಅವುಗಳನ್ನು ರಕ್ಷಣೆ ಮಾಡುವುದಕ್ಕೆ ಕೂಡಲೇ ಒಂದು ಆಜ್ಞೆಯನ್ನು ಒಂದು ಶಾಸನವನ್ನು ಸರ್ಕಾರ ದವರು ಹೊರಡಿಸುತ್ತಾರೆಂದು ನಾನು ನಂಬಿದ್ದೇನೆ. ಈ ಬಗ್ಗೆ ಸರ್ಕಾರದವರು ತೀವ್ರ ಗಮನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಒಂದು ಜುಡಿಷಿಯಲ್ ಎನ್‌ಕ್ವೈರಿ ಕಮಿಟಿ ಆಗಲೇ ಬೇಕು. ಆರೋಪಣೆಗಳು ವಿರೋಧ ಪಕ್ಷದವರಮೇಲೇ ಇರಲಿ, ಅಥವಾ ಆಡಳಿತ ಪಕ್ಷದವರಮೇಲೆ ಇರಲಿ ಯಾರ ಮೇಲೇ ಆರೋಪಣೆಗಳು ಇರಲಿ, ದೇಶದ ಹಿತದೃಷ್ಟಿಯಿಂದ ಪ್ರತಿಯೊಂದು ವಿಷಯವನ್ನು ವಿಮರ್ಶೆ ಮಾಡುವುದಕ್ಕೋಸ್ಕರ ಒಂದು ಕಮಿಟಿಯನ್ನು ನೇಮಕ ಮಾಡಬೇಕು ಎಂದು ನಾನು ಸಲಹೆ ಕೊಡುತ್ತೇನೆ.

ಇನ್ನು ಅಧ್ಯಕ್ಷರೇ, ಶಾಸನಸಭಾ ಸದಸ್ಯರಾದ ನಮ್ಮೆಲ್ಲರ ಆಸ್ತಿಪಾಸ್ತಿಗಳು ಏನಿವೆ ಅವು ಗಳನ್ನು ನಾವು ಮೊದಲು ಒದಗಿಸತಕ್ಕ ವಿಚಾರವನ್ನು ಎಲ್ಲರೂ ಯೋಚನೆ ಮಾಡಬೇಕು. ಹಾಗೆಯೇ ಮಂತ್ರಿಗಳೂ ಕೂಡ ತಮ್ಮ ಆಸ್ತಿಯನ್ನು ಡಿಕ್ಲೇರ್ ಮಾಡಿದರೆ ಒಳ್ಳೆಯದು. ಮುಂದೆ ಯಾರಾದರೂ ತಮ್ಮ ದಾರಿಯಲ್ಲಿ ಆಸ್ತಿಯನ್ನು ಸಂಪಾದನೆ ಮಾಡಿದರೆ ಶೇಖರಣೆ ಮಾಡಿದರೆ ಅದರಲ್ಲಿ ಏನಾದರೂ ವ್ಯತ್ಯಾಸಗಳು ಒಂದು ವಿಚಾರಣಾ ಮಂಡಲಿಯನ್ನು ನೇಮಕ ಮಾಡುವ ಸಂದರ್ಭದಲ್ಲಿ ಮಂತ್ರಿಗಳು

ಅದರ ವ್ಯಾಪ್ತಿಯಲ್ಲಿ ಬರುವುದಾದರೆ ಈಗ ಪ್ರತಿಯೊಬ್ಬರೂ ಆಸ್ತಿಯ ವಿವರಣೆಯನ್ನು ಒದಗಿಸಿದ್ದರೆ ನಾವು ತಪ್ಪಿತಸ್ಥರಲ್ಲ ಎಂದು ಹೇಳುವುದಕ್ಕೆ ಒಂದು ದಾರಿಯಾಗುತ್ತದೆ ಎಂದು ನಾನು ಈ ಒಂದು ಸೂಚನೆಯನ್ನು ಕೊಡಬಯಸುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆಯ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ. ಇವೊತ್ತಿನ ದಿವಸ ಸಿವಿಲ್ ಇಂಜಿನಿಯರಿದಗ್ ಡಿಪ್ಲೊಮೋ ಹೋಲ್ಡರುಗಳು 3 ಸಾವಿರಕ್ಕೂ ಹೆಚ್ಚು ಜನ ಕೆಲಸ ಇಲ್ಲದೆ ನಿರುದ್ಯೋಗಿಗಳಾಗಿದ್ದಾರೆ. 1962 ನೇ ಇಸವಿಯಿಂದಲೂ ಅವರಿಗೆ ಸರ್ಕಾರದವರು ಉದ್ಯೋಗವನ್ನು ಒದಗಿಸಿಲ್ಲ. ಇದರ ಜೊತೆಗೆ ಸರ್ಕಾರದವರು ಸಿವಿಲ್ ಇಂಜಿನಿಯರಿಂಗ ಡಿಪ್ಲೋಮಾ ತರಗತಿಗಳನ್ನು ಹೆಚ್ಚಾಗಿ ತೆರೆಯುತ್ತಲೇ ಇದ್ದಾರೆ. ಬಹಳ ಜನ ಡಿಪ್ಲೊಮೋ ಹೋಲ್ಡರುಗಳು ಆಗುತ್ತಿದ್ದಾರೆ. ಈಗ ಹಾಲಿ ಇರತಕ್ಕ ಡಿಪ್ಲೊಮಾ ಹೋಲ್ಡರುಗಳಿಗೆ ಸರ್ಕಾರದವರು ಕೆಲಸವನ್ನು ಕೊಡದೇ ಇರುವಾಗ ಮುಂದೆ ಬರತಕ್ಕ ಯುವಕರಿಗೆ ಯಾವರೀತಿ ಅವಕಾಶವನ್ನು ಕೊಡುತ್ತಾರೆಯೋ ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಅತ್ತಕಡೆ ತಮ್ಮ ಗಮನವನ್ನು ಹರಿಸಬೇಕು, ಮತ್ತು ನಿರುದ್ಯೋಗಿಗಳಾಗಿರತಕ್ಕ ಡಿಪ್ಲೊಮಾ ಹೊಲ್ಡರುಗಳಿಗೆ ಉದ್ಯೋಗವನ್ನು ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಫೈರ್‌ಬ್ರಿಗೆಡ್ ವಿಷಯದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳಬೇಕಾಗಿದೆ. ಅಗ್ನಿ ಶಾಮಕ ದಳದ ಕೇಂದ್ರವನ್ನು ಬೆಂಗಳೂರಿನಲ್ಲಿ ಮಾತ್ರ ತೆರೆಯುತ್ತೇವೆಂದು ರಾಜ್ಯಪಾಲರ ಭಾಷಣ ದಲ್ಲಿ ಹೇಳಿದ್ದಾರೆ. ಮಲೆನಾಡಿನ ಶಿವಮೊಗ್ಗ, ಹಾಸನ ಮತ್ತು ಚಿಕ್ಕಮಗಳೂರು ಈ ಮೂರು ಜಿಲ್ಲೆಗಳಲ್ಲಿ ಈ ಸಂಸ್ಥೆಗಳಿಲ್ಲ. ಅಲ್ಲಿ ಬಹಳ ತೊಂದರೆಯಾಗಿದೆ. ಮೊನ್ನೆತಾನೆ ಸೊರಬ ಮತ್ತು ದ್ಯಾವನಹಳ್ಳಿ ಈ ಪ್ರದೇಶಗಳಲ್ಲಿ ಮನೆಗಳು ಸುಟ್ಟು ಹೋಗಿವೆ. ಈ ಮನೆಗಳು ಸುಟ್ಟು ಹೋದವ ರಿಗೆ ಸರ್ಕಾರದವರು ಒಂದು ಸಂಸಾರಕ್ಕೆ 6 ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ಇದು ತುಂಬಾ ಖಂಡನೀಯ ಮತ್ತು ಖೇದಕರವಾದ ವಿಷಯ. ಬೆಂಕಿ ಬಿದ್ದು ಮನೆಗಳು ಸುಟ್ಟು ಹೋದವರಿಗೆ ಒಂದು ಸಂಸಾರಕ್ಕೆ 6 ರೂಪಾಯಿಗಳನ್ನು ಕೊಡುವುದು ಮೂಗಿಗೆ ತುಪ್ಪವನ್ನು ಹಚ್ಚಿದ ಹಾಗಾಗುತ್ತದೆ. ಈ ಬಗ್ಗೆ ಸರ್ಕಾರದವರು ಕೂಡಲೆ ಯೋಚನೆ ಮಾಡಬೇಕು. ಪ್ರತಿಯೊಂದು ತಾಲ್ಲೂಕಿಗೂ ಒಂದೊಂದರಂತೆ ಅಗ್ನಿಶಾಮಕದಳದ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು ಎಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಭೂಕಂದಾಯವನ್ನು ರದ್ದು ಮಾಡುವ ಬಗ್ಗೆ ನಮ್ಮ ಪಕ್ಷದಲ್ಲಿ ಅನೇಕರು ಈಗಾಗಲೇ ಹೇಳಿದ್ದಾರೆ. ಇದನ್ನು ಕೂಡಲೇ ರದ್ದು ಮಾಡಿದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಮೈಸೂರು ದೇಶದಲ್ಲಿ ಮಂತ್ರಿಮಂಡಲವೇನಿದೆ ಅದರ ಬಗ್ಗೆ ನನ್ನ ಒಂದು ಸ್ಪಷ್ಟವಾದ ಅಭಿ ಪ್ರಾಯವನ್ನು ಅಧ್ಯಕ್ಷರಿಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಚುನಾವಣೆಗಳಲ್ಲಿ ಕೆಲವು ಮಂತ್ರಿಗಳು ನೀತಿ ಇಲ್ಲದ ಅಥವಾ ನೀತಿವಂತರಲ್ಲದ, ನೀತಿಗೆ ಒಪ್ಪಲಾರದಂತಹ ಜನಗಳ ಮತಗಳನ್ನು ಹಾಕಿ ಕೊಂಡು ಅನೇಕರು ಗೆದ್ದು ಬಂದಿದ್ದಾರೆ. ಅವರು ಚುನಾವಣೆಗಳಲ್ಲಿ ಗೆದ್ದು ಬಂದಿರತಕ್ಕ ರೀತಿ, ದಾರಿ ನೋಡಿದರೆ ಈ ಮಂತ್ರಿಮಂಡಲ ನೀತಿಯ ಆಧಾರದ ಮೇಲೆ, ಪ್ರಜಾಸತ್ತೆಯ ಆಧಾರದಮೇಲೆ ಗೆದ್ದು ಬಂದಿರುವ ಮಂತ್ರಿ ಮಂಡಲವಲ್ಲ. ಅದಕ್ಕಾಗಿ ಈ ಮಂತ್ರಿಮಂಡಲದ ಸದಸ್ಯರೆಲ್ಲರೂ ಕೂಡ ರಾಜಿನಾಮೆ ಕೊಟ್ಟು ಒಂದು ಒಳ್ಳೆಯ ಚುನಾವಣೆಗೆ ಅವಕಾಶ ಮಾಡಿಕೊಡಬೇಕೆಂದು ಆಹ್ವಾನ ಕೊಡುತ್ತಿದ್ದೇನೆ. ಅದರ ಬಗ್ಗೆ ತೀವ್ರವಾದ ಯೋಚನೆ ಮಾಡಬೇಕು.

ಅನವಟ್ಟಿ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿತ್ತು, ರಾಜ್ಯ ಸರ್ಕಾರದ ಸಲಹೆ ಪಡೆದು. ಶ್ರೀಮಾನ್ ನಿಜಲಿಂಗಪ್ಪನವರು ಬಾಗಲಕೋಟೆ ಯಿಂದ ಹಿಂದೆ ಅವಿರೋಧವಾಗಿ ಗೆದ್ದು ಬಂದರು. ಆ ಕ್ಷೇತ್ರದ ಕಡೆಗೆ ಅವರಿಗೆ ಹೆಚ್ಚು ಗಮನವಿದ್ದು ದರಿಂದ ಅನವಟ್ಟಿಗೆ ಮಂಜೂರಾಗಿದ್ದ ಕುಡಿಯುವ ನೀರಿನ ಯೋಜನೆಯನ್ನು ಬಾಗಲಕೋಟೆಗೆ ರವಾನಿಸಿಕೊಂಡಿದ್ದಾರೆ ಎನ್ನುವ ವಿಷಯವನ್ನು ಕೇಳಿದ್ದೇನೆ. ಅದಕ್ಕಾಗಿ ನಾನು ಹೇಳುತ್ತೇನೆ, ದಯವಿಟ್ಟು ಸಂಬಂಧಪಟ್ಟ......

Sri S. R. KANTHI.—The Bagalkot scheme has been sanctioned by the Bombay Government and it is a gift of the Bombay Government. The scheme did not complete before the integration took place.

ಶ್ರೀ ಎಸ್. ಬಂಗಾರಪ್ಪ.—ನಾನು ಇಷ್ಟು ಮಾತ್ರ ಹೇಳಬಲ್ಲೆ. ಬೊಂಬಾಯಿ ಸರ್ಕಾರ ಮಂಜೂರು ಮಾಡಿತ್ತೋ ಅಥವಾ ಬೇರೆ ಯಾವ ಸರ್ಕಾರ ಮಂಜೂರು ಮಾಡಿತ್ತೋ ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದವರು ಮೈಸೂರು ಸರ್ಕಾರದ ಸಲಹೆ ಪಡೆದು ಅನವಟ್ಟಿ ಗ್ರಾಮಕ್ಕೆ ಕೊಟ್ಟಿದ್ದ ಕುಡಿಯುವ ನೀರಿನ ಯೋಜನೆ ಮುಖ್ಯ ಮಂತ್ರಿಗಳು ಬಾಗಲಕೋಟೆಗೆ, ಶ್ರೀಮಾನ್ ನಿಜಲಿಂಗಪ್ಪನವರ ಕ್ಷೇತ್ರಕ್ಕೆ ರವಾನೆಯಾಯಿತು.

Sri S. SIVAPPA.—He is referring to the Bagalkot constituency?

Sri S. R. KANTHI.—No water supply scheme is sanctioned to any other place in Bagalkot.

Mr. SPEAKER.—Almatti is an irrigation scheme, The water supply scheme for domestic purpose is a distinct idea, I believe.

ಶ್ರೀ ಎಸ್. ಬಂಗಾರಪ್ಪ.—ಬಾಗಲಕೋಟೆಗೆ ರವಾನಿಸಿದ ನೀರು ಪೂರೈಕೆ ಯೋಜನೆ ಏನಿದೆ ಅದು ಖಂಡನೀಯವಾದ ವಿಷಯ. ಇನ್ನು ಮೇಲಾದರೂ ಮಾನ್ಯ ಮಂತ್ರಿಗಳು ಇಂಥ ವಿಷಯಗಳಲ್ಲಿ ಕೈಹಾಕಬಾರದು ಎಂದು ಹೇಳಿ, ನನಗೆ ಎರಡು ಮಾತನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I do not understand how it can be taken away. Do you seriously suggest that Aravatti can be transferred?

Sri S. SIVAPPA.—A scheme for Rs. 30,000 has been sanctioned but diverted to some other village.

Mr. SPEAKER.—I do not know whether it can happen so. On the 23rd we are sitting at 9 A.M.........

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಸ್ವಾಮಿ, ಬೆಳಗ್ಗೆ ಮತ್ತು ಮಧ್ಯಾಹ್ನ ಕುಳಿತುಕೊಳ್ಳುವುದನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಬೆಳಗಿನಿಂದ ಸಾಯಂಕಾಲದ ವರೆಗೂ ಕುಳಿತುಕೊಳ್ಳುವುದೆಂದರೆ ಬಹಳ ಬೇಜಾರಾಗುತ್ತದೆ. ಅಕಸ್ಮಾತ್ತಾಗಿ ಒಂದು ದಿವಸ ಮಾಡಿದರೆ ಒಪ್ಪಿಕೊಳ್ಳಬಹುದು. ಇದೇ ರೀತಿ ಆಗಾಗ್ಗೆ ಮಾಡುವುದು ಕೂಡದು ಎಂದು ತಮ್ಮನ್ನು ಬೇಡಿಕೊಳ್ಳುತ್ತೇನೆ.

REPRESENTATIONS

Re: The recognition of the Leader of the Opposition

Sri H. SIDDAVEERAPPA.—Sir, the Leader of the House suggested that if it is the wish of the House and if you feel that the debate is not adequate and if you also agree with the hon'ble members, the debate could be extended by a day or two and that he has on objection. I may say that nobody is willing to speak merely for the sake of speaking. Everybody has a point to express. Therefore, I suggest that instead of taking a decision to meet both in the morning and in the evening, as suggested by my friend it may be necessary to extend the debate by a day or two more and continue the normal procedure. Therefore I personally feel, if need be, you may extend the session by a day. You may examine if it is the wish of the House. The Leader of the Opposition suggested this morning that he feels it is almost killing. I do not wish him to be killed.

Mr. SPEAKER.—I have not yet recognised anybody as Leader of the Opposition.

Sri H. SIDDAVEERAPPA.—You have to. Therefore we are requesting. You cannot keep it in a vacuum. We have been requesting. We take this opportunity of requesting you to consider the representations already made and give us your decision—may be tomorrow or the next day when we meet. Just as every House has a Leader sitting on that side, there must be a Leader sitting on this side. It is the desire and wish of all the 90 members sitting on this side to have only one Leader. We have met, decided and that representation is sent to you. Now that point is raised. Therefore, I am requesting you to take a decision early and see that our request is granted. That is the